ವೀರ ವಿರಾಗಿಣಿ

ಶರಣೆ ಅಕ್ಕಮಹಾದೇವಿಯವರು

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ವೀರ ವಿರಾಗಿಣಿ

ಶರಣೆ ಅಕ್ಕಮಹಾದೇವಿಯವರು

ಸಂಪಾದಕರು :

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಎಂ.ಎ.(ತತ್ವಜ್ಞಾನ),ಎಲ್ಎಲ್.ಬಿ.(ಸ್ಪೇಶಲ್),
ಎಂ.ಎ.(ಹಿಂದಿ), ಎಂ.ಎ. (ಕನ್ನಡ)
ಸಿ.ವಾಯ್.ಇಡಿ. (ಯೋಗ ಶಿಕ್ಷಣ)

ಗೌ॥ ಸಂಪಾದಕರು, 'ಬಸವ ಬೆಳಗು' ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

೨೦೧೮

ಜಗಜ್ಯೋತಿ ಬಸವೇಶ್ವರ ಅನುಭಾವಪೀಠ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ವೀರ ವಿರಾಗಿಣಿ
ಶರಣೆ ಅಕ್ಕಮಹಾದೇವಿಯವರು

ಸಂಪಾದಕರು : **ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)**
ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ.(ಹಿಂದಿ), ಎಂ.ಎ. (ಕನ್ನಡ)
ಸಿ.ವಾಯ್.ಇಡಿ. (ಯೋಗ ಶಿಕ್ಷಣ)
ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

© ಲೇಖಕರು

ಪ್ರಕಾಶಕರು : **ಜಗಜ್ಯೋತಿ ಬಸವೇಶ್ವರ ಅನುಭಾವಪೀಠ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಪ್ರಥಮ ಮುದ್ರಣ : ೨೦೧೮

ಪ್ರತಿಗಳು : ೧೦೦೦

ಪುಟಗಳು : iv + ೬೦ = ೬೪

ಪೇಪರ ಬಳಸಿದ್ದು : ಮ್ಯಾಪ್ಲಿಥೋ ಮತ್ತು ಆರ್ಟ ಕಾರ್ಡ ಕವ್ಹರ ೨೫೦ ಜಿ.ಎಸ್.ಎಂ.

ಬೆಲೆ : **ಐವತ್ತು ರೂಪಾಯಿಗಳು ₹ ೫೦/-**

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : **ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ
ದೂರವಾಣಿ : ೦೮೩೩೫ - ೨೪೧೦೬೩

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಲೇಖಕರ ನಿವೇದನೆ

೧೨ನೆಯ ಶತಮಾನವು ಪ್ರಪಂಚದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದ ಶತಮಾನವಾಗಿದೆ. ಪ್ರಪಂಚದ ಜನಸಂಖ್ಯೆಯ ಅರ್ಧಭಾಗವಾಗಿರುವ ಮಹಿಳೆಯರಿಗೆ ಧಾರ್ಮಿಕ, ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕ, ಆರ್ಥಿಕವಾಗಿ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದ ಯುಗವಾಗಿದೆ. ಸ್ತ್ರೀ ಕುಲೋದ್ಧಾರಕ ಅಪ್ಪ ಬಸವಣ್ಣನವರು ಮುಕ್ತ ಸ್ವಾತಂತ್ರ್ಯ ಕಲ್ಪಿಸಿದರು.

ಪುರುಷ ಪ್ರಧಾನ ಸಮಾಜೋ-ಧಾರ್ಮಿಕ ವ್ಯವಸ್ಥೆಯಲ್ಲಿ ಮಹಿಳೆಯು ಮಾಯೆ, ಮಲದ ಭಾಂಡ, ಶೂದ್ರ, ಅಸ್ಪಶ್ಯ, ಭೋಗವಸ್ತು, ದಾನದ ವಸ್ತು ಎಂದು ಪರಿಗಣಿಸಲ್ಪಟ್ಟು ಅವಳ ಮೇಲೆ ದೌರ್ಜನ್ಯವೆಸಗುತ್ತಿದ್ದ ಕಾಲದಲ್ಲಿ 'ತೋರಲು ಹೆಣ್ಣು ರೂಪಾಗಿದ್ದರೂ ಭಾವಿಸಲು ಗಂಡು ರೂಪು ನೋಡಾ' ಎಂದು ಕೆಚ್ಚೆದೆಯಿಂದ ಸ್ವಾರ್ಥಿ ಪುರುಷವರ್ಗವನ್ನು ನಿಷ್ಠುರವಾಗಿ ಖಂಡಿಸಿ, ಸ್ತ್ರೀಯು ಅಬಲೆಯಲ್ಲ, ಸಬಲೆಯೆಂದು ಸಾಧಿಸಿ ತೋರಿದ ಧೀರ ಗಣಾಚಾರಿ ಶರಣೆ ಅಕ್ಕಮಹಾದೇವಿಯು.

ಅಕ್ಕಮಹಾದೇವಿಯು, ಶತ ಶತಮಾನಗಳಿಂದ ದಾಸ್ಯಕ್ಕೊಳಗಾಗಿದ್ದ ಸ್ತ್ರೀ ಕುಲವನ್ನು ವಿಮೋಚನೆಗೊಳಿಸಿದ ಗುರುಬಸವಣ್ಣನವರನ್ನು ಹೃದಯತುಂಬಿ ಸ್ತುತಿಸಿದ್ದಾಳೆ. 'ಶರಣರಿಗೆ ಮಾಯೆಯೂ ಇಲ್ಲ, ಮರವೆಯೂ ಇಲ್ಲ, ಅಭಿಮಾನವೂ ಇಲ್ಲ' ಎಂದು ಹೇಳಿ ಸ್ತ್ರೀ-ಪುರುಷರಿಬ್ಬರೂ ಸಮಾನರು ಎಂದು ಸಾರಿದ್ದಾಳೆ.

ಅಕ್ಕಮಹಾದೇವಿಯವರ ಜೀವನ, ಹೋರಾಟ, ಸಾಧನೆ, ಲಿಂಗಾನುಭಾವ ಸಿದ್ಧಿ ಕುರಿತು ಇಂದಿನ ಆಧುನಿಕ ಮಹಿಳೆಯರಿಗೆ ಪರಿಚಯಿಸುವ ಉದ್ದೇಶದಿಂದ ಈ ಕೃತಿ ರಚನೆ ಮಾಡಲಾಗಿದೆ. ನಮ್ಮ ನಾಡಿನ ಅಕ್ಕನ ಬಳಗ, ಕದಳಿವೇದಿಕೆ, ನೀಲಮ್ಮನ ಬಳಗ ಮುಂತಾದ ಸ್ತ್ರೀ ಸಂಘಟನೆಗಳು ಮಹಾದೇವಿಯಕ್ಕಳ ಹೋರಾಟ ಸ್ತ್ರೀ ಸಬಲೀಕರಣದ ಮಾರ್ಗವನ್ನು ಅರಿಯಬೇಕಿದೆ.

ಈ ಪುಸ್ತಕದ ಬರವಣಿಗೆಗೆ ಸಲಹೆ-ಸಹಕಾರ ನೀಡಿದ ಧರ್ಮಪತ್ನಿ ಡಾ. ಕಲ್ಯಾಣಮ್ಮ ಲಂಗೋಟಿ ಅವರಿಗೂ, ಮುದ್ರಕರಾದ ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ್, ರಾಮದುರ್ಗ ಮಾಲಿಕರಿಗೂ ಶರಣು-ಶರಣಾರ್ಥಿಗಳು.

—ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ

ಪರಿವಿಡಿ

ವೀರ ವಿರಾಗಿಣಿ
ಶರಣೆ ಅಕ್ಕಮಹಾದೇವಿಯವರು

		ಪುಟ
೧	ಪೀಠಿಕೆ	೧
೨.	ಜನನ–ಬಾಲ್ಯ	೪
೩.	ಕೌಶಿಕನ ಪ್ರಸಂಗ	೧೦
೪.	ಉಡುತಡಿಯಿಂದ ಕಲ್ಯಾಣದತ್ತ ಪಯಣ	೧೩
೫.	ಮಾರ್ಗ ಮಧ್ಯದಲ್ಲಿ ಕಾಮುಕರ ಕಾಟ	೧೫
೬.	ನಿಸರ್ಗದಲ್ಲಿ ದೇವಸ್ವರೂಪ ದರ್ಶನ	೧೭
೭.	ಕಲ್ಯಾಣದ ಕೀರ್ತಿ–ವಾರ್ತೆ	೧೮
೮.	ಬಂದವರ ಓಣಿ ಪ್ರವೇಶ	೨೦
೯.	ಕಿನ್ನರಯ್ಯನ ಪರೀಕ್ಷೆ ಪ್ರಸಂಗ	೨೧
೧೦.	ಬಸವಣ್ಣನವರ ಮಹಾಮನೆ ಪ್ರವೇಶ	೨೩
೧೧.	ಅನುಭವ ಮಂಟಪದಲ್ಲಿ ಮಹಾದೇವಿಯಕ್ಕ: ಅನುಭಾವ ಗೋಷ್ಠಿ–ಪ್ರಭುದೇವರೊಂದಿಗೆ ಸಂವಾದ	೨೪
೧೨.	ಬಸವಾದಿ ಶರಣರಿಂದ ಗೌರವ–ಸ್ತುತಿ	೩೭
೧೩.	ಕಲ್ಯಾಣದಲ್ಲಿ ಲಿಂಗಾನುಭವಾವ ಸಿದ್ಧಿ	೪೦
೧೪.	ಅನುಭಾವ ಸಾಹಿತ್ಯ ಸಾಧನೆ (ರಚನೆ)	೪೧
	ಅ) ಮಹಾದೇವಿಯಕ್ಕನ ವಚನಗಳು	
	ಆ) ಅಕ್ಕಗಳ ಸೃಷ್ಟಿಯ ವಚನ	
	ಇ) ಅಕ್ಕಗಳ ಯೋಗಾಂಗ ತ್ರಿವಿಧಿ	
	ಈ) ಮಹಾದೇವಿಯಕ್ಕನ ಪದಗಳು (ಸ್ವರವಚನಗಳು)	
೧೫.	ಕಲ್ಯಾಣ ಕ್ರಾಂತಿ	೫೫
೧೬.	ಕದಳಿ ವನದಲ್ಲಿ ಅಕ್ಕ ಬಯಲಾದುದು	೫೬
೧೭.	ಗ್ರಂಥ ಋಣ	೫೮

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ವೀರ ವಿರಾಗಿಣಿ

ಶರಣೆ ಅಕ್ಕಮಹಾದೇವಿಯವರು

೧. ಪೀಠಿಕೆ :

ಅಜ ಕೋಟಿ ಕಲ್ಪ ವರುಷದವರೆಲ್ಲರು ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರು ಹಿರಿಯರೆ ?
ನಡಬಾಗಿ ಗುಡುಗೂರಿ ತಲೆ ನಡುಗಿ
ನರೆತೆರೆ ಹೆಚ್ಚಿ ಮತ್ತಿಗೆಟ್ಟು
ಒಂದನಾಡ ಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲರು ಹಿರಿಯರೆ ?
ಅನುವನರಿದು ಘನವ ಬೆರೆಸಿ
ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚೆನ್ನಸಂಗಯ್ಯನಲ್ಲಿ
ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು

[ಚೆ.ಬ.ವ.-೯೨೧]

ಪ್ರಪಂಚದ ದಾರ್ಶನಿಕ ಇತಿಹಾಸದಲ್ಲಿ ಪ್ರಪ್ರಥಮ ಅಧ್ಯಾತ್ಮ ಕೋಗಿಲೆಯಾಗಿ, ವೀರ ವಿರಾಗಿಣಿಯಾಗಿ, ಅನುಭಾವಿ ಶರಣೆಯಾಗಿ, ಅರಿವಿನ ಗುರುವಾಗಿ, ಕವಯಿತ್ರಿಯಾಗಿ ಕಂಗೊಳಿಸಿದವಳು ಮಹಾನ್ ಶರಣೆ ಅಕ್ಕಮಹಾದೇವಿ ತಾಯಿಯು. ಅಕ್ಕಮಹಾದೇವಿಯು ವಯಸ್ಸಿನಲ್ಲಿ ಕಿರಿಯಳಾಗಿದ್ದರೂ ಆಧ್ಯಾತ್ಮ ಸಾಧನೆಯಲ್ಲಿ ಶರಣಸಂಕುಳದಲ್ಲಿ ಹಿರಿದಾದ ವ್ಯಕ್ತಿತ್ವವನ್ನು ಹೊಂದಿದವಳಾಗಿದ್ದಳು.

ಭಾರತದ ಸಮಾಜೋ-ಧಾರ್ಮಿಕ ಕ್ಷೇತ್ರವು ೧೨ನೆಯ ಶತಮಾನದ ಪೂರ್ವದಲ್ಲಿ ಸಹಸ್ರಾರು ವರುಷಗಳಿಂದ ಸಾಗಿ ಬಂದಿತ್ತು. ಕ್ರಿ. ಪೂ.೮೦೦೦ ದಿಂದ ೧೦೦೦೦ ವರುಷಗಳ ಪ್ರಾಚೀನ ಸಂಸ್ಕೃತಿ ಹೊಂದಿತ್ತು. ಹರಪ್ಪಾ-ಮಹೇಂಜೋದಾರೋ ಪ್ರಾಂತದ ಉತ್ಖನನದಿಂದ ತಿಳಿದು ಬಂದಿರುವ ಅವಶೇಷಗಳಿಂದ ಸಿಂಧೂನದಿಯ ದಡದ ಮೇಲೆ ದ್ರಾವಿಡ ಜನಾಂಗದ ಶೈವ ಪರಂಪರೆಯ ಧರ್ಮ-ಸಂಸ್ಕೃತಿ-ನಾಗರಿಕತೆಯು ಭಾರತದಲ್ಲಿ ಉದಿಸಿ, ವ್ಯಾಪಕವಾಗಿ ಬೆಳೆದು ಪಸರಿಸಿತ್ತು ಎಂದು ಸಂಶೋಧಕರು ತಿಳಿಸುತ್ತಾರೆ.

ಆದಿ ದ್ರಾವಿಡ ಜನಾಂಗದ ಆರಾಧ್ಯದೈವವಾಗಿದ್ದವರು ಶಿವ ಮತ್ತು

ಪಾರ್ವತಿ ಹಾಗೂ ಅವರ ಅನುಯಾಯಿಗಳಾದ ಶಿವಗಣ ಪರಿವಾರದ ದೇವಾನು ದೇವತೆಗಳು ಎಂದು ತಿಳಿದು ಬರುತ್ತದೆ. ದ್ರಾವಿಡ ಜನಾಂಗದ ಸಮಾಜ ವ್ಯವಸ್ಥೆಯು **ಮಾತೃ ಪ್ರಧಾನ** ಕುಟುಂಬ ಪದ್ಧತಿಯಾಗಿತ್ತು. ಆಗ ಸ್ತ್ರೀಯರು ವಿಶೇಷ ಸ್ಥಾನ-ಮಾನ ಹೊಂದಿದ್ದು, ಎಲ್ಲ ರಂಗಗಳಲ್ಲಿ ಹೆಸರುಗಳಿಸಿದ್ದರು.

ಕಾಲಗತಿಸಿದಂತೆ ಮಧ್ಯ ಏಶಿಯಾದಿಂದ ಸಂಚರಿಸುತ್ತ ಬಂದ ಆರ್ಯರು ಉತ್ತರ ಭಾರತದ ವಿಶಾಲ ಹಾಗೂ ಸಮೃದ್ಧವಾದ ಸಿಂಧೂ, ಬ್ರಹ್ಮಪುತ್ರ, ಗಂಗಾ, ಯಮುನಾ ಮುಂತಾದ ನದಿಗಳ ಭೂಪ್ರದೇಶವನ್ನು ವ್ಯಾಪಿಸಿ ನೆಲೆನಿಂತರು. ಅದು ಆರ್ಯಜನಾಂಗದ ಸಂಸ್ಕೃತಿಯಾಗಿ ಹೆಸರು ಪಡೆಯಿತು. ಈ ಜನಾಂಗದ ಸಮಾಜ ವ್ಯವಸ್ಥೆಯಲ್ಲಿ **ಪಿತೃಪ್ರಧಾನ**, ಕುಟುಂಬ ಪದ್ಧತಿ ಆಚರಣೆಯಲ್ಲಿದ್ದುದರಿಂದ ಸಹಜವಾಗಿಯೇ ಪುರುಷನು ಎಲ್ಲ ರಂಗಗಳಲ್ಲಿ ಪ್ರಮುಖನಾಗಿ ಕಾರ್ಯ ನಿರ್ವಹಿಸುತ್ತಿದ್ದನು.

ದ್ರಾವಿಡ ಜನಾಂಗದ ಮೇಲೆ ಆರ್ಯರ ಪ್ರಭಾವದ ಪರಿಣಾಮವಾಗಿ ಪುರುಷನು ಪ್ರಮುಖವಾಗಿ ಕುಟುಂಬ ಹಾಗೂ ಸಮಾಜದ ಯಜಮಾನನಾಗಿ ಕಾರ್ಯನಿರ್ವಹಿಸಿದರೆ, ಸ್ತ್ರೀಯು ಗೌಣವಾಗಿ, ಆತನ ಆಜ್ಞಾನುಸಾರಿಯಾಗಿ ಕಾರ್ಯಮಾಡುತ್ತಾ, ಸಾವಕಾಶವಾಗಿ ಸ್ವಾತಂತ್ರ್ಯ-ಸ್ವಾವಲಂಬನೆಗಳಿಂದ ವಂಚಿತ-ಳಾಗುತ್ತಾ, ಪತಿಯ ಚರಣದಾಸಿ, ಮಕ್ಕಳನ್ನು ಹೆರುವ ಯಂತ್ರ, ದುಡಿಯುವ ಗುಲಾಮಳಂತಾದಳು.

ವೇದಾಗಮಗಳು, ವೇದೋಪನಿಷತ್ತುಗಳು, ಶಾಸ್ತ್ರ-ಪುರಾಣಾದಿ ಗ್ರಂಥಗಳು ಋಷಿಗಳು-ಮುನಿಗಳಿಂದ ರಚಿತವಾಗಿ ಜ್ಞಾನ ಬೆಳೆದು ಬಂದಿತು. ಈ ಜ್ಞಾನ ಪರಂಪರೆ ಮರೆಯಾಗಿ ಕರ್ಮಕಾಂಡವು ಬೆಳೆದು ಸ್ಮೃತಿಗಳ ಕಾಲದಲ್ಲಿ ಧಾರ್ಮಿಕ ಶಾಸನಗಳು ಬರೆಯಲ್ಪಟ್ಟು ವರ್ಣವ್ಯವಸ್ಥೆಯು ಕರ್ಮಗತ ಜಾತಿವ್ಯವಸ್ಥೆಯಾಗಿ ಎಲ್ಲ ವರ್ಣಗಳ ಸ್ತ್ರೀಯರು ಸಮಾಜೋ-ಧಾರ್ಮಿಕವಾಗಿ ಪುರುಷ ಸಮಾನವಾದ ಸ್ವಾತಂತ್ರ್ಯದಿಂದ ವಂಚಿತರಾದರು, ಸಂಸ್ಕಾರಹೀನರಾದರು. ಮನು ಮಹಾಶಯ ನಂತೂ 'ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ' ಎಂದು ಕಟ್ಟಳೆ ಹಾಕಿದ್ದಲ್ಲದೇ-

ಬಾಲಯಾ ಯುವತ್ಯಾ ವಾ ವೃದ್ಧಯಾ ವಾ ಪಿಯೋಷ್ಟಿತಾ ।
ನ ಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್ ಕಾರ್ಯಂ ಗೃಹೇಷ್ವಪಿ ॥
[ಮನುಸ್ಮೃತಿ ಅ-೫ ಶ್ಲೋಕ ೧೪೭]

ಎಂದು ಕಾನೂನು ರಚಿಸಿದನು. ಅಂದರೆ 'ಬಾಲಕಿ, ಯುವತಿ, ಮುದುಕಿ ಅಥವಾ ಹೆಂಗಸು ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೇ ಸ್ವತಂತ್ರವಾಗಿ ಯಾವುದೇ ಕೆಲಸವನ್ನು ಮಾಡಕೂಡದು' ಎಂದು ಅರ್ಥ. ಇದರಿಂದಾಗಿ

ಭಾರತೀಯ ಸಮಾಜದಲ್ಲಿ ಸ್ತ್ರೀಯರು ಪರಾವಲಂಬಿಗಳಾಗಿ, ಸ್ವತಂತ್ರ ಕ್ರಿಯಾ ಶಕ್ತಿಯನ್ನು ಕಳೆದುಕೊಂಡರು.

ಪುರುಷ ಪ್ರಧಾನ ಧರ್ಮ–ಸಮಾಜ–ಕುಟುಂಬ ವ್ಯವಸ್ಥೆ ಗಟ್ಟಿಗೊಳ್ಳುತ್ತಾ ಕೊನೆಗೆ–'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ' ಎಂಬುದು ಹಾಗೂ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಅವಹೇಳನಕಾರಿ ಮಾತುಗಳು ರೂಢಿಯಲ್ಲಿ ಬಂದವು.

ಹೆಣ್ಣು ನಿರ್ಜೀವವಾದ ವಸ್ತುವಿನಂತೆ ಅಂದರೆ ಅನ್ನದಾನ, ವಸ್ತ್ರದಾನ, ಹಿರಣ್ಯದಾನ, ಭೂದಾನದಂತೆಯೂ, ಪ್ರಾಣಿಗಳಂತೆ ಗೋದಾನದ ರೀತಿಯಲ್ಲಿ **'ಕನ್ಯಾದಾನ'** ಎಂದು ದಾನದ ವಸ್ತುವಾದಳು. ಮದುವೆಯ ಸಂದರ್ಭದಲ್ಲಿ ಕನ್ಯೆಯನ್ನು ಧಾರೆಯೆರೆದು ಕೈತೊಳೆದುಕೊಂಡರು.

ಲಗ್ನವಾದ ಸ್ತ್ರೀಯರಿಗೆ ತನ್ನ 'ಗಂಡನ ಸೇವೆಯಲ್ಲದೇ ಪೂಜೆ, ಹೋಮ, ಯಾಗ, ಉಪವಾಸ, ಜಪ ಒಂದೂ ಬೇಡ' [ಮನುಸ್ಮೃತಿ ಅ–೫ ಶ್ಲೋಕ ೧೫೫] ಎಂದು ಕಟ್ಟಳೆಯನ್ನು ಹಾಕಿದರು.

ಇದರಿಂದಾಗಿ ಮಾನವ ಕುಲದ ಅರ್ಧಭಾಗವಾಗಿರುವ ಸ್ತ್ರೀಯರು ಎಲ್ಲ ರೀತಿಯ ಸಾಧನೆಯ ಅವಕಾಶಗಳಿಂದ ವಂಚಿತರಾದರು. ಪುರಷರಂತೆ ವಿದ್ಯೆ ಪಡೆಯುವುದು ಸಾಧ್ಯವಾಗಲಿಲ್ಲ. "ವಿದ್ಯಾಹೀನ ಮಾನವಾಃ ಪಶು ಸಮಾನಃ" ಎಂಬುದು ಅಕ್ಷರಶಃ ಸ್ತ್ರೀಯರು ಹಾಗೂ ಶೂದ್ರಾತಿಶೂದ್ರರಲ್ಲಿ ಕಂಡುಬಂದಿತು.

ಹೆಣ್ಣು ಮಾಯೆ, ಮಲದ ಭಾಂಡ, ಪುರುಷನ ಸಾಧನೆಯಲ್ಲಿ ಅಡ್ಡಿ, ಅಬಲೆ ರಾಕ್ಷಸಿ ಎಂಬಂತೆ ಸ್ವಾರ್ಥಿ ಪುರುಷರು ಕರೆದುದಲ್ಲದೇ ಅವಳನ್ನು ಕೇವಲ ತಮ್ಮ ಭೋಗಕ್ಕೆ, ಸೇವೆಗೆ ಬಳಸಿಕೊಂಡರು, ಶೋಷಣೆ ಮಾಡಿದರು.

ಇಂತಹ ದಾರುಣ ವಿಷಮ ಪರಿಸ್ಥಿಯ ಕಾಲಕ್ಕೆ ೧೨ನೆಯ ಶತಮಾನದಲ್ಲಿ ಮಾನವಕುಲದ ಬೆಳಕಾಗಿ, ಸ್ತ್ರೀಕುಲೋದ್ಧಾರಕ, ಶೂದ್ರಾತಿಶೂದ್ರರ ಉದ್ಧಾರಕರಾಗಿ **ವಿಶ್ವಗುರು ಬಸವಣ್ಣನವರು** ಉದಿಸಿ ಬಂದರು. ಅಂದಿನ ಕಲ್ಯಾಣರಾಜ್ಯದಲ್ಲಿ ವರ್ಣ–ವರ್ಗ–ಆಶ್ರಮ–ಲಿಂಗ–ಜಾತಿಭೇದರಹಿತವಾದ, ಸಮತೆ–ಸ್ವಾತಂತ್ರ್ಯ–ಬಂಧುತ್ವ–ಮಾನವೀಯತೆಯ ತಳಹದಿಯ ಮೇಲೆ ಸ್ವತಂತ್ರವಾದ **ಲಿಂಗಾಯತ ಧರ್ಮ–**ಸಮಾಜ–ಸಂಸ್ಕೃತಿಯನ್ನು ಸ್ಥಾಪಿಸಿದರು. ಪ್ರಪಂಚದ ಮೊಟ್ಟಮೊದಲ ಪ್ರಜಾಪ್ರಭುತ್ವ ಮಾದರಿಯ ಪಾರ್ಲಿಮೆಂಟ್ (ಸಂಸತ್) ಎಂದೇ ಖ್ಯಾತವಾಗಿರುವ **'ಅನುಭವ ಮಂಟಪ'** ಸ್ಥಾಪಿಸಿ ಸರ್ವಸಮಾನತೆಯ ಅವಕಾಶ ನೀಡಿದರು. ಆಗ ಕಲ್ಯಾಣಕ್ಕೆ ಬಂದ ೭೭೦ ಅಮರಗಣಂಗಳೆನಿಸಿದ ಶರಣ–ಶರಣೆಯರಲ್ಲಿ ಶಿವಮೊಗ್ಗ ಜಿಲ್ಲೆಯ ಉಡುತಡಿಯಿಂದ ಆಗಮಿಸಿದ ಅಕ್ಕಮಹಾದೇವಿಯೂ ಒಬ್ಬಳು. ಅಕ್ಕ ಸಾಗಿ

ಬಂದ ದಾರಿಯು, ಹೂವಿನ ಹಾಸಿಗೆಯಾಗಿರದೇ ಕಲ್ಲು ಮುಳ್ಳಿನ ಭೀಕರ, ದುರ್ಗಮ ದಾರಿಯಾಗಿತ್ತು. ಎಲ್ಲ ಕಷ್ಟ-ಕಾರ್ಪಣ್ಯಗಳನ್ನು ಎದುರಿಸುತ್ತಾ ಹೋರಾಡುತ್ತಾ ವೀರ ವಿರಾಗಿಣಿಯಾಗಿ ಉಡುತಡಿಯಿಂದ ಬಸವಕಲ್ಯಾಣಕ್ಕೆ ಬಂದು ಎಲ್ಲ ಶರಣರಿಂದ 'ಅಕ್ಕ' ಎಂಬ ಗೌರವಕ್ಕೆ ಪಾತ್ರರಾದವಳು ಶರಣೆ ಮಹಾದೇವಿಯಕ್ಕ. ಅಕ್ಕಮಹಾದೇವಿಯನ್ನು ಉಡುತಡಿಯ ಮಹಾದೇವಿ, ಮಹಾದೇವಿಯಕ್ಕ ಎಂದು ವಚನ ಸಾಹಿತ್ಯದಲ್ಲಿ ಕವಿಗಳು ರಚಿಸಿದ ಕಾವ್ಯಗಳಲ್ಲಿ ಉಲ್ಲೇಖಿಸಲಾಗಿದೆ. ವಚನಗಳಲ್ಲಿ ಚರಿತ್ರೆಯ ಅಂಶಗಳು ಸಿಕ್ಕುವುದು ಕಡಿಮೆ. ಕವಿಗಳ ಕಾವ್ಯಗಳಲ್ಲಿ ಚಾರಿತ್ರಿಕ, ಪೌರಾಣಿಕ ಅಂಶಗಳು ಹೆಚ್ಚಾಗಿ ದೊರೆಯುತ್ತವೆ.

೧. ಪಾಲ್ಕುರಿಕೆ ಸೋಮನಾಥನ-ಪಂಡಿತಾರಾಧ್ಯ ಚರಿತ್ರೆ (ಕ್ರಿ.ಶ.೧೧೯೦)
೨. ಹರಿಹರನ- ಮಹಾದೇವಿಯಕ್ಕನ ರಗಳೆ (ಕ್ರಿ.ಶ.೧೨೦೦)
೩. ಚಾಮರಸನ-ಪ್ರಭುಲಿಂಗಲೀಲೆ (ಕ್ರಿ.ಶ.೧೪೩೦)
೪. ಎಳಂದೂರು ಹರೀಶ್ವರನ- ಪ್ರಭುದೇವರ ಪುರಾಣ (ಕ್ರಿ.ಶ.೧೫೦೦)
೫. ಚನ್ನಬಸವಾಂಕನ- ಮಹಾದೇವಿಯಕ್ಕನ ಪುರಾಣ (ಕ್ರಿ.ಶ. ೧೫೬೦)
೬. ವಿರೂಪಾಕ್ಷ ಪಂಡಿತನ- ಚನ್ನಬಸವ ಪುರಾಣ (ಕ್ರಿ.ಶ. ೧೫೮೪)
೭. ರಾಚಕವಿಯ- ಮಹಾದೇವಿಯಕ್ಕನ ಸಾಂಗತ್ಯ (ಕ್ರಿ.ಶ.೧೬೦೦)

ಈ ಕಾವ್ಯ ಗ್ರಂಥಗಳಲ್ಲದೇ-

೧. ಬಸವಾದಿ ಶರಣರ ವಚನಗಳಲ್ಲಿ ಮಹಾದೇವಿಯಕ್ಕಳ ಉಲ್ಲೇಖಗಳಿವೆ.
೨. ಶಿವಗಣ ಪ್ರಸಾದಿ ಮಹಾದೇವಯ್ಯ, ಗುಮ್ಮಳಾಪುರದ ಸಿದ್ಧಲಿಂಗದೇವರು, ಗೂಳೂರು ಸಿದ್ಧವೀರಣ್ಣೊಡೆಯರು, ಕೆಂಚವೀರಣ್ಣೊಡೆಯರು, ಹಲಗೆದೇವ ಮುಂತಾದವರು ವಚನಗಳನ್ನು ಸಂವಾದ (ಪ್ರಶ್ನೋತ್ತರ) ರೂಪದಲ್ಲಿ ಜೋಡಿಸಿ 'ಶೂನ್ಯ ಸಂಪಾದನೆ' ಗ್ರಂಥಗಳನ್ನು ಸಿದ್ಧಪಡಿಸಿದ್ದಾರೆ.

೨. ಜನನ-ಬಾಲ್ಯ :

ಇಂದಿನ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯಲ್ಲಿ **ಉಡತಡಿ** ಎಂಬ ಊರಿದೆ. ಇದು ಬಳ್ಳಿಗಾವಿ- ಶಿರಾಳ ಕೊಪ್ಪಗಳಿಂದ ನಾಲ್ಕೈದು ಮೈಲುಗಳ ಅಂತರದಲ್ಲಿದೆ. ಅಂದು ೧೨ನೇ ಶತಮಾನದಲ್ಲಿ ಇದನ್ನು ಕೌಶಿಕನೆಂಬ ರಾಜನು ಆಳುತ್ತಿದ್ದ. ಈ ಪ್ರಾಂತದ ದೊರೆ ಕೌಶಿಕ ಕೋಟೆಯೊಂದನ್ನು ಕಟ್ಟಿಸಿ, ಸುಂದರ ಅರಮನೆ ನಿರ್ಮಿಸಿದ್ದ.

ಇಂತಹ ಉಡತಡಿಯಲ್ಲಿ ಹರಿಹರ ಕವಿಯ ಪ್ರಕಾರ ಶಿವಭಕ್ತ- ಶಿವಭಕ್ತೆ ಎಂಬ ಹೆಸರಿನ; ಚಾಮರಸ, ಎಳಂದೂರು ಹರೀಶ್ವರ, ಚೆನ್ನಬಸವಾಂಕ ಕವಿಗಳ

ಪ್ರಕಾರ ನಿರ್ಮಲ-ಸುಮತಿ ಎಂಬ ಹೆಸರಿನ; ರಾಚ ಕವಿಯ ಪ್ರಕಾರ ಓಂಕಾರಸೆಟ್ಟಿ-ಲಿಂಗಮ್ಮ ಎಂಬ ಹೆಸರಿನ ಶಿವಭಕ್ತಿ ಸಂಪನ್ನ ದಂಪತಿಗಳಿದ್ದರು.

ಈ ದಂಪತಿಗಳ ಉದರದಲ್ಲಿ ಶಿವನ ಅಪ್ಪಣೆಯಂತೆ ಪಾರ್ವತಿಯ ಸಾತ್ವಿಕ ಕಳೆಯೇ 'ಮಹಾದೇವಿ' ಯಾಗಿ ಜನಿಸಿ ಬಂದಳೆಂದು ಕವಿ ಚಾಮರಸನು ಹೇಳುತ್ತಾನೆ.

ಮಹಾದೇವಿಯಕ್ಕಳ ಜನನ ಪೂರ್ವದಲ್ಲಿ ಒಂದು ಲೌಕಿಕವಾದ ಸುಂದರ ಕಾಲ್ಪನಿಕ ಕಥೆಯನ್ನು ಕವಿಯು ರೂಪಿಸಿದ್ದಾನೆ. ಒಂದು ದಿನ ಕೈಲಾಸದಲ್ಲಿ ಶಿವನ ಒಡ್ಡೋಲಗ. ಅಲ್ಲಿ ಶಿವ-ಪಾರ್ವತಿಯರು ತಮ್ಮ ಶಿವಗಣಗಣಗಳೊಂದಿಗೆ ಕುಳಿತಿದ್ದಾರೆ. ಪಾರ್ವತಿಯು ಶಿವನನ್ನು ಕುರಿತು ಪ್ರಶ್ನಿಸುತ್ತಾಳೆ- 'ಈ ಒಡ್ಡೋಲಗದಲ್ಲಿರುವ ಗಣಾಧೀಶ್ವರರು ನಿತ್ಯ ಮುಕ್ತರೋ? ಶಿವನು ಉತ್ತರಿಸುತ್ತಾನೆ- ಇವರು ತಮ್ಮ ಪುಣ್ಯ ತೀರಿದೊಡನೆ ಮರಳಿ ಭೂಲೋಕದಲ್ಲಿ ಜನಿಸಿ, ಸಾಧನೆಯ ಮಾಡಿ ಪುಣ್ಯಸಂಪಾದಿಸಿ ಕೈಲಾಸಕ್ಕೆ ಬರಲೇ ಬೇಕು. ಆಗ ಪಾರ್ವತಿಯು- ಇವರಿಗೆ ಭೂಲೋಕದಲ್ಲಿ ಮುಕ್ತಿ ಮಾರ್ಗ ಬೋಧಿಸುವ ಗುರು ಯಾರು? ಎಂದು ಪ್ರಶ್ನಿಸಿದಾಗ, ಶಿವನು-ನನ್ನ ನಿಜಸ್ವರೂಪನೆಯಾಗಿ ಬನವಾಸೆ ನಾಡಿನ ಬಳ್ಳಿಗಾವಿಯಲ್ಲಿ ನಿರಹಂಕಾರ- ಸುಜ್ಞಾನಿ ದಂಪತಿಗಳ ಉದರದಲ್ಲಿ ಜನಿಸಿರುವ 'ಅಲ್ಲಮಪ್ರಭು' ಎಂಬ ಹೆಸರಿನ ಗುರುವಿದ್ದಾನೆ. ಆತನು ಭೂಲೋಕದ ಸಾಧಕರಿಗೆ ನಿಜಸುಖದ ಮುಕ್ತಿ ಮಾರ್ಗವ ಬೋಧಿಸುತ್ತಾನೆ' ಎಂದು ಹೇಳಿದಾಗ, ಪಾರ್ವತಿಯು ಅಹಂಭಾವದಿಂದ-ಆ ಅಲ್ಲಮನನ್ನು ಮೋಹಗೊಳಿಸಿ ಸೋಲಿಸಿ ತರಲು ತನ್ನ ತಾಮಸ ಕಳೆಯನ್ನು ಭೂಲೋಕಕ್ಕೆ ಕಳಿಸುವಳು.

ಪಾರ್ವತಿಯ ತಾಮಸ ಕಳೆಯು ಬಳ್ಳಿಗಾವಿ ಪ್ರಾಂತದ ದೊರೆಮಮಕಾರ ಭೂಪಾಲ ಹಾಗೂ ರಾಣಿ ಮೋಹಿನಿಯರ ಮಗಳಾಗಿ 'ಮಾಯಾದೇವಿ ' ಎಂಬ ಹೆಸರಿನಲ್ಲಿ ಜನಿಸುವಳು. ದೇವ ದಾನವ ಮಾನವರನೆಲ್ಲಾ ದಾವಣಿಯ ದನವಾಗಿ ಬಂಧಿಸುವ ಹಗ್ಗ-ಪಾಶದಂತೆ ಮಾಯೆಯು ಜನಿಸಿದಾಗ- ಗುಡ್ಡ ಗಂವ್ಹರಗಳಲ್ಲಿ ತಪಸ್ಸು ಮಾಡುತ್ತಿದ್ದ ಹುತ್ತೇರಿ ಒಳಗಿದ್ದ ತಪಸ್ವಿಗಳೆಲ್ಲಮಾಯೆಯ ಪ್ರಭಾವದಿಂದ ಗಡಗಡನೆ ನಡುಗಿದರು. ಮನ ಮಾಯೆಯೊಳಗಾಗಿ ಪರಿತಪಿಸಿದರು. ಮಮಕಾರ-ಮೋಹಿನಿಯರ ಮಗಳಾದ ಮಾಯಾದೇವಿಯು ಬೆಳೆದು ದೊಡ್ಡವಳಾಗಿ ಯೌವನಕ್ಕೆ ಕಾಲಿಟ್ಟಾಗ ಅವಳ ಸೌಂದರ್ಯಕ್ಕೆ ಮಾರು ಹೋಗದವರಾರು? ಇಂತಹ ಮಾಯಾದೇವಿಗೆ ನೃತ್ಯ ಕಲಿಸಲು ಅಹಂಕಾರಾಚಾರ್ಯ ಎಂಬ ಗುರುವು ನೇಮಿಸಲ್ಪಟ್ಟಿದ್ದ. ಮಾಯೆಯು ಪ್ರತಿದಿನ ಮಧುಕೇಶ್ವರ ದೇವಾಲಯದಲ್ಲಿ ರಂಗಮಂಟಪದಲ್ಲಿ ನರ್ತಿಸುತ್ತಾ ಶಿವನಿಗೆ ನರ್ತನ ಸೇವೆ- ರಂಗಭೋಗ ಸಲ್ಲಿಸುವ

ವ್ರತ ಕೈಗೊಂಡಿದ್ದಳು. ಒಂದು ದಿನ ಅವಳು ನರ್ತನ ಮಾಡುತ್ತಿದ್ದಾಗ ದೇವಾಲಯದ ಹೊರಗಣ ಪ್ರಾಂಗಣದಲ್ಲಿ ಅಲ್ಲಮನೆಂಬ ಸುಂದರ ಯುವಕ ಮದ್ದಳೆ ಬಾರಿಸ ತೊಡಗಿದ. ಕಾರ್ಮುಗಿಲಿನ ಗರ್ಜನೆಯ ಕಿವಿಯಾರೆ ಕೇಳಿದ ನವಿಲಿನಂತೆ ಮಾಯಾದೇವಿ ಕುಣಿಯತೊಡಗಿದಳು. ನರ್ತನದ ನಂತರ ಅಲ್ಲಮನನ್ನು ಕಂಡಳು. ಮೋಹಗೊಂಡಳು. ತಂದೆ ಮಮಕಾರಭೂಪಾಲನಿಗೆ ಹೇಳಿ, ತನಗೆ ನೃತ್ಯಕಲಿಸಲು ಗುರುವಾಗಿ ಅರಮನೆಯಲ್ಲಿ ನೇಮಿಸಿಕೊಂಡಳು.

ಅಲ್ಲಮನ ಮೇಲೆ ಮೋಹಗೊಂಡ ಮಾಯೆಯು ತನ್ನ ಮೋಹಪಾಶದಿಂದ ಬಂಧಿಸಲು, ಒಲಿಸಿಕೊಳ್ಳಲು ನೋಡಿದಳು. ಮಾಯಾ ಕೋಲಾಹಲಿಗನಾದ ಅಲ್ಲಮ ಅವಳ ಮೋಹಪಾಶಕ್ಕೆ ಸಿಲುಕಲಿಲ್ಲ. ಕಾಡಿನಲ್ಲಿ ಮರೆಯಾದ. ಅಲ್ಲಮನನ್ನು ಹುಡುಕುತ್ತಾ ಮಾಯಾದೇವಿ ಕಾಡು-ಮೇಡು ಅಲೆಯ-ತೊಡಗಿದಳು. ಸೋತು ಸುಣ್ಣವಾದಳು, ತನ್ನ ತಾಮಸ ಶಕ್ತಿಯು ಸೋಲಬಾರದೆಂದು ಮಾಯೆಗೆ ಎಚ್ಚರಿಸಲು ಪಾರ್ವತಿಯು 'ವಿಮಳಾದೇವಿ' ಯೆಂಬ ದೇವಕನ್ಯೆಯನ್ನು ಕಳಿಸಿದಳು. ವಿಮಳೆ ಬಂದು ಮಾಯೆಗೆ ಎಚ್ಚರಿಸಿ, ಅಲ್ಲಮನನ್ನು ಮೋಹಕ್ಕೆ ಒಳಗಾಗಿಸಲು ಇಬ್ಬರೂ ಪರಿಪರಿಯಾಗಿ ಪ್ರಯತ್ನಿಸಿದರು. ವಿಮಳೆಯು ಅಲ್ಲಮನಿಗೆ ಪ್ರಾರ್ಥಿಸಿದಳು-'ನಿನ್ನ ವಿರಹದಲ್ಲಿ ಮಾಯಾದೇವಿ ಬೆಂದುಹೋಗುತ್ತಿದ್ದಾಳೆ. ನೀನು ಪರುಷಮಣಿ ಇದ್ದಂತೆ, ಮಾಯೆಯು ಕಬ್ಬಿಣದಂತಿದ್ದಾಳೆ. ನೀನು ಸ್ಪರ್ಶಿಸಿದರೂ ಸಾಕು ಅವಳು ಸುವರ್ಣವಾಗಿ ಬದಲಾಗುತ್ತಾಳೆ, ಉದ್ಧಾರವಾಗುತ್ತಾಳೆ' ಎಂದು ಕೇಳಿಕೊಂಡಳು. ಆಗ ಅಲ್ಲಮನು-ಕಬ್ಬಿಣವಾದರೆ ಪರುಷ ಸೋಂಕಲು ಸುವರ್ಣ-ವಾಗಬಹುದು, ಮಾಯೆಯು ಒಂದು ಮಣ್ಣಿನ ಹಂಚು ಇದ್ದಂತೆ, ಅವಳು ಎಂದಿಗೂ ಸುವರ್ಣವಾಗುವುದಿಲ್ಲ ಎಂದು ಹೇಳಿ, ಕಾಡಿನಲ್ಲಿ ಮಾಯವಾದನು.

ಅಲ್ಲಮನನ್ನು ತನ್ನ ಮೋಹಪಾಶದಿಂದ ಬಂಧಿಸಿ ತರಲು ಹೋದ ಮಾಯಾದೇವಿಯು ತಾನೇ ಆತನ ಮೋಹಕ್ಕೆ ಒಳಗಾಗಿ, ಆತನನ್ನು ಒಲಿಸಿಕೊಳ್ಳದೇ ನಿರಾಶಳಾಗಿ ವಿಮಳೆಯೊಂದಿಗೆ ಕೈಲಾಸಕ್ಕೆ ಹಿಂದುರಿಗಿದಳು. ಇದನ್ನು ಕಂಡ ಪಾರ್ವತಿಯು ಶಿವನ ಎದುರು ತಲೆತಗ್ಗಿಸಿ ದುಃಖಿಸುತ್ತಿರುವಾಗ, ಶಿವನು ಸಾಂತ್ವನ ಮಾಡಿ, ನಿನ್ನ ತಾಮಸಕಳೆ (ಮಾಯೆ) ಯಿಂದ ಗೆಲ್ಲಲಾಗದ ಅಲ್ಲಮನನ್ನು, ಸಾತ್ವಿಕ ಕಳೆ (ಮಹಾದೇವಿ)ಯನ್ನು ಕಳಿಸಿ ಗೆದ್ದು ಬಾ ಎಂದು ಹೇಳಿದನು. ಆಗ ಪಾರ್ವತಿಯು ತನ್ನ ಸಾತ್ವಿಕ ಕಳೆಯನ್ನು ಕಳಿಸಿದಾಗ, ಅದುವೇ ಉಡುತಡಿಯಲ್ಲಿ ನಿರ್ಮಲಸೆಟ್ಟಿ-ಸುಮತಿಯರ ಅಂದರೆ ಓಂಕಾರಸೆಟ್ಟಿ-ಲಿಂಗಮ್ಮರ ಮಗಳಾಗಿ ಜನಿಸಿತು. ಪಾರ್ವತಿಯ ಸಾತ್ವಿಕ ಕಳೆಯೇ 'ಮಹಾದೇವಿಯಕ್ಕ'ಳಾಗಿ ಜನಿಸಿದಳು ಎಂದು ಕವಿ ಚಾಮರಸ ಸುಂದರವಾದ ರೂಪಕವೊಂದನ್ನು ರಚಿಸಿದ್ದಾನೆ. ಚಾಮರಸನು ಪ್ರಭುಲಿಂಗಲೀಲೆಯೊಳಗಿನ ಪಾತ್ರಗಳಿಗೆ ಸಾಂಕೇತಿಕ ಹೆಸರುಗಳನ್ನು

ಕಲ್ಪಿಸಿ ಕೊಟ್ಟಿದ್ದಾನೆ. ಪಾರ್ವತಿಯ ತಾಮಸಕಳೆ ಮಾಯಾದೇವಿ, ಮಮಕಾರ ಮೋಹಿನಿಯರ ಮಗಳಾಗಿ ಜನಿಸಿದ್ದು, ಅಹಂಕಾರಚಾರ್ಯನೆಂಬ ಗುರು ನೃತ್ಯ ಕಲಿಸಿದ್ದು, ವಿಮಳೆ ಬಂದು ಮಾಯೆಗೆ ಎಚ್ಚರಿಸುವುದು; ಸುಜ್ಞಾನಿ-ನಿರಹಂಕಾರ ದಂಪತಿಗಳ ಮಗನಾಗಿ ಶಿವನ ಪ್ರತಿರೂಪವೇ ಆಗಿ ಅಲ್ಲಮಪ್ರಭು ಜನಿಸಿದ್ದು, ಮಾಯಾಕೋಲಾಹಲಿಗನಾಗಿ, ಮಾಯೆಗೆ ಸಿಲುಕದೇ ಹೋಗುವುದು, ಮುಂದೆ ಪಾರ್ವತಿಯು ಸಾತ್ವಿಕ ಕಳೆ ನಿರ್ಮಲ-ಸುಮತಿಯರ ಮಗಳಾಗಿ ಮಹಾದೇವಿ ಜನಿಸಿದುದು ಇವೆಲ್ಲವೂ ತಾತ್ವಿಕವಾದ ಅರ್ಥವನ್ನೊಳಗೊಂಡಿವೆ. ಒಟ್ಟಿನಲ್ಲಿ ಚಾಮರಸ ಕವಿಯ ಅಭಿಪ್ರಾಯದಂತೆ-

ಇಳೆಯೋಳುಡುತಡಿಯೆಂಬ ಪಟ್ಟಣ
ದೊಳಗೆ ವೀರಶಿವಾಗಮಿಕ ನಿರ್ಮಳನ
ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ
ಚಲುವೆಯಾದ ಕುಮಾರಿಯೆಂಬ
ಗ್ಗಳದ ಮುತ್ತುದಯಿಸಿತು ಧರಣೀ
ತಳದೊಳಗೆ ಪಾರ್ವತಿಯ ಸಾತ್ವಿಕ ಗುಣವೆ ರೂಪಾಗಿ

[ಪ್ರಭುಲಿಂಗ ಲೀಲೆ ಗತಿ-೯ ಪದ್ಯ-೨]

ಹೀಗೆ ಜನಿಸಿದ ಸಾತ್ವಿಕ ಕಳೆಯ ಹೆಂಗೂಸಿಗೆ 'ಮಹಾದೇವಿ' ಎಂದು ನಾಮಕರಣ ಮಾಡಿದರು. ಶಿವಭಕ್ತಿ ಸಂಪನ್ನ ಮನೆತನದಲ್ಲಿ ಜನಿಸಿದುದರಿಂದ, ಆ ಮನೆಯ ಗುರುಗಳಾದ 'ಗುರುಲಿಂಗದೇವರು' ಈಗಾಗಲೇ ಕಲ್ಯಾಣ ಅನುಭವಮಂಟಪದ ಶರಣಜಂಗಮರಿಂದ ಸಂಸ್ಕಾರ ಹೊಂದಿ ಲಿಂಗಾಯತರಾಗಿದ್ದರು. ಓಂಕಾರಸೆಟ್ಟಿ ಲಿಂಗಮ್ಮರೂ ಸಹ ಶೈವಮತದಿಂದ ಲಿಂಗಯತಧರ್ಮಕ್ಕೆ ಪರಿವರ್ತನೆಗೊಂಡಿದ್ದರು. ಗುರುಲಿಂಗದೇವರು ರುದ್ರಾಕ್ಷಿ ಸಹಿತ ಇಷ್ಟಲಿಂಗಧಾರಣೆಗೈದರು. ಬಸವಾದಿ ಶರಣರ ತಾಡೋಲೆ ಕಟ್ಟಿನಿಂದ ವಚನ ಪಠಣ ಮಾಡಿದರು.

ಲಿಂಗವಂತರ ಮನೆಯ ಮುದ್ದಿನ ಮಗಳು ಮಹಾದೇವಿಯು ಲಿಂಗ ಪೂಜಿಸುತ್ತಾ, ಲಿಂಗಲೀಲೆಯೊಡನೆ ತೊದಲ್ನುಡಿ ಆಡುತ್ತಾ, ಗುರುಗಳು ಕಲಿಸುವ ಬಸವಶರಣರ ವಚನ ಕಲಿಯುತ್ತಾ ಬೆಳೆಯತೊಡಗಿದಳು. ಉಡುತಡಿಯ ಓಂಕಾರಸೆಟ್ಟಿ-ಲಿಂಗಮ್ಮರ ಮನೆಯ ಓಣಿಯು ಲಿಂಗಾಯತರ ಓಣಿಯೇ ಆಗಿತ್ತು. ಮಹಾದೇವಿಯು ಗೆಳತಿಯರೊಂದಿಗೆ ಸುಪ್ರಭಾತ ಸಮಯದಲೆದ್ದು ಪತ್ರಿ-ಪುಷ್ಪಂಗಳ ತಂದು, ಮನೆಯಲ್ಲಿ ಸ್ನಾನ-ಪೂಜೆ ಮಾಡಿಕೊಳ್ಳುತ್ತಿದ್ದಳು. ಬಸವಾದಿ ಶರಣರ ವಚನಗಳನ್ನು ಹಾಡುತ್ತಿದ್ದಳು. ಮನೆಯ ಹತ್ತಿರವೇ ಇದ್ದ ಗುರುಲಿಂಗದೇವರ ಮಠದಲ್ಲಿ ಗುರುಗಳಿಂದ ವಚನ-ಅನುಭಾವ ಆಲಿಸುತ್ತಿದ್ದಳು, ಲಿಂಗಾನುಭಾವಿಯಾಗಿ ಬೆಳೆಯತೊಡಗಿದಳು.

ಕಲ್ಯಾಣ ಅನುಭವ ಮಂಟಪದ ಶರಣ ಜಂಗಮರು ಚರಿಸುತ್ತಾ ಉಡುತಡಿಯತ್ತ ಬಂದಾಗ, ಗುರುಲಿಂಗದೇವರ ಮಠದಲ್ಲಿ ವಾಸ್ತವ್ಯ ಮಾಡುತ್ತಿದ್ದರು. ತಂದೆ-ತಾಯಿಯರೊಂದಿಗೆ ಮಠಕ್ಕೆ ಹೋಗಿ, ಆ ಶರಣಜಂಗಮರನ್ನು ಮನೆಗೆ ಬಿನ್ನಹ ಮಾಡಿ ಕರೆತರುತ್ತಿದ್ದರು. ಮನೆಯಲ್ಲಿ ಅರ್ಚನೆ-ಅರ್ಪಣೆ-ಅನುಭಾವ ನಡೆಯುತ್ತಿತ್ತು. ಇಷ್ಟಲಿಂಗಾರ್ಚನೆ-ಪ್ರಸಾದಾರೋಗಣೆಯ ನಂತರ ವಚನಾನುಭಾವ ಕೇಳುತ್ತಿದ್ದಳು. ಬಸವಾದಿ ಶರಣರ ಬಗ್ಗೆ ಅನುಭವ ಮಂಟಪದ ಬಗ್ಗೆ ಬಸವಣ್ಣನವರ ಮಹಾಮನೆಯ ಬಗ್ಗೆ, ಕಾಯಕ-ದಾಸೋಹದ ಬಗ್ಗೆ, ಶರಣ-ಶರಣೆಯರ ಅನುಭಾವಗೋಷ್ಠಿಯ ಬಗ್ಗೆ ಕುತೂಹಲದಿಂದ ಕೇಳಿ ತಿಳಿದುಕೊಳ್ಳುತ್ತಿದ್ದಳು. ತಾನೂ ಕಲ್ಯಾಣ ನೋಡಬೇಕು. ಬಸವಾದಿ ಶರಣ-ಶರಣೆಯರ ದರ್ಶನ ಮಾಡಬೇಕು, ಅವರ ಸಂಗದಲ್ಲಿ ದಿನಗಳ ಕಳೆಯಬೇಕು ಎಂದು ಅಂತರಂಗದಲ್ಲಿ ಬಯಕೆ, ಹಂಬಲಗೊಳ್ಳುತ್ತಿತ್ತು.

ತಂದೆ-ತಾಯಿಯರು ಪೂರ್ವಾಶ್ರಮದಲ್ಲಿ ಶೈವ ಪರಂಪರೆಯ ಶ್ರೀಶೈಲ ಮಲ್ಲಿಕಾರ್ಜುನನ ಭಕ್ತರಾಗಿದ್ದುದರಿಂದ (ಉಡುತಡಿಯಲ್ಲಿ ಒಂದು ಮಲ್ಲಿಕಾರ್ಜುನ ದೇವಾಲಯವಿದೆ) 'ಮಲ್ಲಿಕಾರ್ಜುನ' ಎಂಬ ಹೆಸರು ಮಹಾದೇವಿಗೆ ಬಹಳ ಪ್ರಿಯವಾಗಿತ್ತು. ಬಸವಾದಿ ಶರಣರಂತೆ ತನ್ನ ಇಷ್ಟಲಿಂಗಕ್ಕೂ ಪ್ರೀತಿಯಿಂದ **'ಚೆನ್ನಮಲ್ಲಿಕಾರ್ಜನಾ;** ಎಂಬ ಹೆಸರನ್ನು ಇಟ್ಟುಕೊಂಡು, ಅದನ್ನೇ ಅಂಕಿತವಾಗಿಸಿ ಕೊಂಡು ತಾನೂ ವಚನಗಳನ್ನು ರಚಿಸತೊಡಗಿದಳು. ಗುರುಲಿಂಗ ದೇವರ ಮಠದ ಶಾಲೆಯಲ್ಲಿ (ಸಾಲಿಮಠ) ವಿದ್ಯಾಭ್ಯಾಸವಾಗಿತ್ತು. ಮಗುವಿದ್ದಾಗ ಲಿಂಗಧಾರಣ ವಾಗಿತ್ತು. ಈಗ ಯೌವನಕ್ಕೆ ಕಾಲಿಟ್ಟಾಗ, ತಿಳುವಳಿಕೆ ಬಂದಾಗ ಸದ್ಗುರುವಿನಿಂದ ಇಷ್ಟಲಿಂಗದ ನೆಲೆ-ಕಲೆಗಳನ್ನು ಅರಿತು ಲಿಂಗದೀಕ್ಷೆ ಹೊಂದಿದಳು. ಆ ಅನುಭವವನ್ನು ವಚನರೂಪದಲ್ಲಿ ಬರೆದು ಗುರುಗಳಿಗೆ ತೋರಿಸಿದಳು-

ನರ ಜನ್ಮವ ತೊಡೆದು
ಹರಜನ್ಮವ ಮಾಡಿದ ಗುರುವೆ ನಮೋ
ಭವ ಬಂಧನವ ಬಿಡಿಸಿ
ಪರಮಸುಖವ ತೋರಿದ ಗುರುವೆ ನಮೋ
ಭವಿಯೆಂಬುದ ತೊಡೆದು
ಭಕ್ತೆ ಎಂದೆನಿಸಿದ ಗುರುವೆ ನಮೋ
ಚೆನ್ನಮಲ್ಲಿಕಾರ್ಜನನ ತಂದೆನ್ನ
ಕೈವಶಕ್ಕೆ ಕೊಟ್ಟ ಗುರುವೆ ನಮೋ ನಮೋ

[ವ-೨೪೬]

ಗುರುಗಳು ಮಹಾದೇವಿ ಬರೆದ ವಚನಗಳನ್ನು ಕೇಳಿ, ಆನಂದ ಪಡುತ್ತಿದ್ದರು.

ಹೀಗೆಯೇ ಲಿಂಗಪೂಜೆಯ ಅನುಭವಗಳನ್ನು ವಚನರೂಪದಲ್ಲಿ ಬರೆಯಲು ಪ್ರೋತ್ಸಾಹಿಸುತ್ತಿದ್ದರು. ಕಲ್ಯಾಣದ ಶರಣ ಜಂಗಮರು ಬಂದಾಗ-ಮಹಾದೇವಿಯ ವಚನಗಳನ್ನು ಓದಿಸಿ ಕೇಳುತ್ತಿದ್ದರು. ಬಸವಣ್ಣನವರ ವಚನಗಳ ತಾಡೋಲೆ ಕಟ್ಟುಗಳನ್ನು ನೀಡುತ್ತಿದ್ದರು. ಜಂಗಮರು ಮರಳಿ ಕಲ್ಯಾಣಕ್ಕೆ ಹೋದಾಗ ಅಕ್ಕ ಮಹಾದೇವಿಯ ವಚನ ತಾಡೋಲೆ ಒಯ್ದು ಬಸವಣ್ಣನವರಿಗೆ ಕೊಡುತ್ತಿದ್ದರು.

ಬಸವಣ್ಣನವರು ಸಹ ತಮ್ಮ ಅಂತರಂಗದ ಅರಿವಿನ ನೇತ್ರದಿಂದ ಮಹಾದೇವಿಯ ಆಧ್ಯಾತ್ಮ ಸಾಧನೆ ಗುಮನಿಸುತ್ತಿದ್ದರು. ಈ ಶರಣಚೇತನ ಕಲ್ಯಾಣದ ಅನುಭವಮಂಟಪಕ್ಕೆ ಶರಣಸಂಕುಳಕ್ಕೆ ಬಂದೇ ಬರುತ್ತದೆ ಎಂದು ಮನಗಂಡಿದ್ದರು. ಮಹಾದೇವಿಯೂ ಕೂಡ ಬಸವಗುರುವಿನ ವಚನಗಳನ್ನು ಮಂತ್ರ ಸ್ವರೂಪದಲ್ಲಿ ಭಕ್ತಿಭಾವದಿಂದ ಓದುತ್ತಿದ್ದಳು. ಬಸವತಂದೆಯನ್ನು ಕಾಣುವ ಹಂಬಲ ಚಿಗುರೊಡೆಯುತ್ತಿತ್ತು. ಬಸವಣ್ಣನವರನ್ನು ನಿರಾಕಾರ ದೇವನೇ ಸಾಕಾರ ರೂಪದಲ್ಲಿ ಬಸವಣ್ಣನಾಗಿ ಬಂದು ಮಾನವಕುಲವನುದ್ಧರಿಸುತ್ತಿರುವನೆಂಬ ನಂಬಿಕೆ ಮಹಾದೇವಿಯಕ್ಕನಿಗೆ, ಅಂತೆಯೇ ಭಕ್ತಿಭಾವದಿಂದ ಸ್ತುತಿಸುತ್ತಾಳೆ-

ದೇವಲೋಕದವರಿಗೂ ಬಸವಣ್ಣನೆ ದೇವರು
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು
ನಾಗಲೋಕದವರಿಗೂ ಬಸವಣ್ಣನೇ ದೇವರು
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ
ಬಸವಣ್ಣನೇ ದೇವರು
ಚೆನ್ನಮಲ್ಲಿಕಾರ್ಜನಯ್ಯಾ
ನಿಮಗೂ ಎನಗೂ ನಿಮ್ಮ ಶರಣರಿಗೂ
ಬಸವಣ್ಣನೆ ದೇವರು [ವ-೨೩೫]

ಬಸವಾದಿ ಶರಣರ ವಚನಗಳನ್ನು ಓದುತ್ತಾ ಓದುತ್ತಾ ಮಹಾದೇವಿಯಕ್ಕ ಭಾವಪರವಶಳಾಗುತ್ತಿದ್ದಳು. ಇಂತಹ ಲಿಂಗಾನುಭಾವಿಗಳಾದ ಶರಣರನ್ನು ತೋರಿಸು ಎಂದು ಕರದಿಷ್ಟಲಿಂಗದಲ್ಲಿ ಬೇಡಿಕೊಳ್ಳುತ್ತಿದ್ದಳು.

ನಡೆ ಶುಚಿ, ನುಡಿ ಶುಚಿ, ತನು ಶುಚಿ, ಮನ ಶುಚಿ
ಭಾವ ಶುಚಿ, ಇಂತೀ ಪಂಚ ತೀರ್ಥಂಗಳನೊಳಕೊಂಡು
ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ
ಎನ್ನನುಳುಹಿಕೊಳ್ಳಾ, ಚೆನ್ನಮಲ್ಲಿಕಾರ್ಜನಾ [ವ-೨೪೪]

ಇದೇ ರೀತಿಯಾಗಿ ಮಹಾದೇವಿಯಕ್ಕಳು ತನು-ಮನ-ಭಾವಗಳು ವಿಕಾಸವಾಗುತ್ತಾ ಬೆಳೆಯತೊಡಗಿದಳು. ಲೌಕಿಕ ಭೋಗ-ಭಾಗ್ಯಗಳ ಕಡೆಗೆ ಮನಸ್ಸು ಹರಿಯದೇ

ಪಾರಮಾರ್ಥಿಕ ಸಾಧನೆಯೆಡೆಗೆ ಮನಸ್ಸು ಹಾತೊರೆಯತೊಡಗಿತು.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬೀಜ,
ಎನಗುಳ್ಳುದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೇ ಚೆನ್ನಮಲ್ಲಿಕಾರ್ಜನಾ ? [ವ-೩೫೮]

ಎಂದು ಲಿಂಗೈಯ್ಯನಲ್ಲಿ ಕೇಳಿಕೊಳ್ಳುತ್ತಿದ್ದಳು. ಹೀಗೆಯೇ ಹದಿನಾರು ವರುಷಕ್ಕೆ ಕಾಲಿಟ್ಟಾಗ, ಜೀವನಕ್ಕೆ ಒಂದು ಹೊಸ ತಿರುವು ನೀಡುವ ಘಟನೆಯೊಂದು ಜರುಗಿತು.

೩. ಮಹಾದೇವಿಯಕ್ಕಳ ಬಾಳಿನಲ್ಲಿ ಕೌಶಿಕನ ಪ್ರಸಂಗ :

ಮಹಾದೇವಿಯಕ್ಕ ಹದಿನಾರರ ಯೌವನಕ್ಕೆ ಕಾಲಿಟ್ಟಾಗ, ಉಡುತಡಿಯ ದೊರೆ ಕೌಶಿಕ ರಾಜನು ಒಂದು ಸಲ ವೈಹಾಳಿಗೆ ಹೋಗಿ ವೈಭವದಿಂದ ಮರಳಿ ಬರುವಾಗ ರಾಜಬೀದಿಯಲ್ಲಿರುವ ಊರ ಪ್ರಮುಖ ಸೆಟ್ಟಿ ಓಂಕಾರನ ಮನೆಯ ಉಪ್ಪರಿಗೆಯ ಮೇಲೆ ಗೆಳತಿಯರೊಂದಿಗೆ, ನಿಂತಿದ್ದ ಸೌಂದರ್ಯದ ಖಣಿಯಂತಿದ್ದ ಮಹಾದೇವಿಯನ್ನು ಕಂಡನು. ಅವಳ ರೂಪ-ಲಾವಣ್ಯ ಕಂಡು ಮೋಹಿತನಾದನು. ಅರಮನೆಗೆ ಹೋಗಿ ತನ್ನ ಮಂತ್ರಿಯೊಬ್ಬನನ್ನು ಓಂಕಾರಸೆಟ್ಟಿಯ ಮನೆಗೆ ಫಲ-ಪುಷ್ಪ-ತಾಂಬೂಲ, ಮುತ್ತು-ರತ್ನಗಳೊಂದಿಗೆ ಮದುವೆಯ ಪ್ರಸ್ತಾಪವನು ಕೊಟ್ಟು ಕಳಿಸಿದನು.

ಮಹಾದೇವಿಯಕ್ಕ ಈಗಾಗಲೇ ತನ್ನಂತರಂಗದಲ್ಲಿ ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವ ಚೆನ್ನಮಲ್ಲಿಕಾರ್ಜನದೇವರನ್ನು ಅಂದರೆ ಇಷ್ಟಲಿಂಗವನ್ನೇ ತನ್ನ ಪತಿಯೆಂದು ದೃಢವಾಗಿ ನಂಬಿದ್ದಳು. ಶರಣಸತಿ-ಲಿಂಗಪತಿ ಭಾವವು ಅವಳಲ್ಲಿ ಭದ್ರವಾಗಿ ಬೇರೂರಿತ್ತು. ಕೌಶಿಕನ ಮಂತ್ರಿಯು ತಂದ ಪ್ರಸ್ತಾಪವನ್ನು ಮಹಾದೇವಿಯ ತಂದೆ-ತಾಯಿಯರು ತಿರಸ್ಕರಿಸಿದರು. ರಾಜನು ಇದನ್ನು ತಿಳಿದು, ಮತ್ತೆ ಮಂತ್ರಿಯನ್ನು ರಾಜಭಟರೊಂದಿಗೆ ಕಳಿಸಿ, ಮದುವೆ ಪ್ರಸ್ತಾವ ಒಪ್ಪದಿದ್ದರೆ ತಂದೆ-ತಾಯಿಯರನ್ನು ಬಂಧಿಸಿ ಕಾರಾಗೃಹದಲ್ಲಿ ಹಾಕುವಂತೆ ಬೆದರಿಕೆಯೊಡ್ಡಿದನು.

ಕಾಮಾಂಧನಾದ ಕೌಶಿಕ ಭವಿಯಾಗಿರುವುದರಿಂದ ಅಧಿಕಾರ ಮದದಿಂದ ಏನು ಮಾಡಲೂ ಹೇಸುವುದಿಲ್ಲವೆಂದು ಅರಿತ ಮಹಾದೇವಿಯಕ್ಕಳು ತಂದೆ-ತಾಯಿಯರ ಹಿತರಕ್ಷಣೆಗಾಗಿ ಮೂರು ಕರಾರುಗಳನ್ನು ಮಂತ್ರಿಗಳ ಮುಂದಿಟ್ಟು, ಈ ಕರಾರುಗಳಿಗೆ ನಿಮ್ಮ ರಾಜನು ಒಪ್ಪಿದರೆ ಅರಮನೆಗೆ ಬರುವುದಾಗಿ ತಿಳಿಸಿದಳು.

೧. ಎನ್ನಿಚ್ಛೆಯೊಳು ಶಿವಲಿಂಗಪೂಜೆಯೊಳಿಪ್ಪೆ
೨. ಎನ್ನಿಚ್ಛೆಯೊಳು ಮಾಹೇಶ್ವರ (ಜಂಗಮ) ಗೋಷ್ಠಿಯೊಳಿಪ್ಪೆ
೩. ಎನ್ನಿಚ್ಛೆಯೊಳು ಗುರುಸೇವೆಯೊಳಿಪ್ಪೆ

ಮಹಾದೇವಿಯಕ್ಕಳ ಕರಾರುಗಳನ್ನು ಮಂತ್ರಿ ವಸಂತಕ ಹಾಗೂ ಹೆಗ್ಗಡತಿಯರಿಂದ ತಿಳಿದು ವ್ಯಾಮೋಹದಿಂದ ಅಂಧನಾಗಿದ್ದ ಕೌಶಿಕನು ಯೋಚನೆ ಮಾಡದೇ ಒಪ್ಪಿಕೊಂಡನು.

ಮಹಾದೇವಿಯಕ್ಕಳು ತಂದೆ-ತಾಯಿ, ಬಂಧು-ಬಳಗದವರ ಸುರಕ್ಷೆಗಾಗಿ ಮನದಲ್ಲಿ ಶರಣರನ್ನು ಸ್ಮರಿಸಿಕೊಂಡು ರಾಜ ಕಳಿಸಿದ ಮೇನೆಯಲ್ಲಿ ಕುಳಿತು ಅರಮನೆಗೆ ಬಂದಳು. ಅವಳಿಗಾಗಿ ಒಂದು ಸ್ವತಂತ್ರ ವಸತಿ ಗೃಹ ವ್ಯವಸ್ಥೆ ಮಾಡಲಾಗಿತ್ತು. ಕೆಲವೇ ದಿನಗಳಲ್ಲಿ ನಾಡಿನೆಲ್ಲೆಡೆ ಈ ಸುದ್ದಿ ಹಬ್ಬಿತು. ಭಕ್ತರು ತಲ್ಲಣಗೊಂಡರು.

ಒಂದು ದಿನ ಗುರುಗಳು ಮಹಾದೇವಿಯಕ್ಕಳ ಕುಶಲೋಪರಿ ವಿಚಾರಿಸಲು ಅರಮನೆಗೆ ಬಂದಾಗ, ಗುರುಲಿಂಗದೇವರನ್ನು ಗೌರವದಿಂದ ಸ್ವಾಗತಿಸಿ, ಅವರೊಂದಿಗೆ ತತ್ವಚಿಂತನೆಯಲ್ಲಿದ್ದಾಗ ಕೌಶಿಕನು ಅಸಹನೆಯಿಂದ ಬಂದು ಅಗೌರವ ತೋರಿದನು. ಗುರುಲಿಂಗದೇವರು ಮಹಾದೇವಿಗೆ ಸಮಾಧಾನ ಹೇಳಿ ಹೊರಟು ಹೋದರು. ಆಗ ಬಂದ ಕರಾರು ಮುರಿದುಬಿತ್ತು.

ಇನ್ನೊಂದು ದಿನ ಕಲ್ಯಾಣದಿಂದ ಉಡುತಡಿಗೆ ಬಂದ ಶರಣಜಂಗಮರು ಮಹಾದೇವಿಯಕ್ಕಳಲ್ಲಿಗೆ ಬಂದು ಶರಣರ ವಚನಗಳ ಕುರಿತು ಗೋಷ್ಠಿ ನಡೆಸುತ್ತಿರುವಾಗ, ಇದನ್ನು ಕಂಡ ಕೌಶಿಕನು ಆ ಶರಣರಿಗೆ ಅಪಶಬ್ದಗಳನ್ನು ನುಡಿದು ಹೊರಹೋಗುವಂತೆ ಆಜ್ಞಾಪಿಸಿದನು. ಆಗ ಎರಡನೆಯ ಕರಾರು ಮುರಿದುಬಿತ್ತು.

ಮಗುದೊಂದು ದಿನ ಮಹಾದೇವಿಯಕ್ಕ ದಿಕ್ಕುತೋಚದಂತಾಗಿ ಬೆಳಗಿನ ಜಾವ ಇಷ್ಟಲಿಂಗಪೂಜೆ ಮಾಡಿಕೊಳ್ಳುತ್ತಾ-ಕರದಿಷ್ಟಲಿಂಗದಲ್ಲಿ ತನ್ನ ದುಃಖ ತೋಡಿಕೊಳ್ಳ ತೊಡಗಿದಳು.

-೧-

ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವದ ಜಂಜಡವ ಮಾಣಿಸಯ್ಯಾ
ಎನ್ನ ದೇವ ಚೆನ್ನಮಲ್ಲಿಕಾರ್ಜನಯ್ಯಾ

ಎನ್ನ ಸುತ್ತಿದ ಪ್ರಪಂಚವ ಬಿಡಿಸಾ
ನಿಮ್ಮ ಧರ್ಮ [ವ-೧೦೨]

-೨-

ಎರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತನಾಡಲಮ್ಮೆನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು
ನಾನಪ್ಪಲಮ್ಮೆನವ್ವಾ [ವ-೧೦೫]

ಈ ರೀತಿಯಾಗಿ ತನ್ನ ಹೃದಯದ ಅಳಲು ಲಿಂಗೈಯನಲ್ಲಿ ತೋಡಿಕೊಳ್ಳುತ್ತಿರುವಾಗ, ಕಾಮಾತುರನಾದ ಕೌಶಿಕನು, ಅವಳ ಹಿಂದಿನಿಂದ ಬಂದು ಸೆರಗು ಹಿಡಿದು ಎಳೆಯತೊಡಗಿದನು. ಆಗ ಮೂರನೆಯ ಕರಾರು ಮುರಿಯಿತೆಂದು ಮಹಾದೇವಿಯಕ್ಕ ಸಿಟ್ಟಿನಿಂದ ಕನಲಿ ನುಡಿದಳು-

ಎಮ್ಮೆಗೊಂದು ಚಿಂತೆ, ಸಮ್ಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ,
ಎನಗೆ ಎನ್ನ ಚಿಂತೆ, ನಿನಗೆ ನಿನ್ನ ಕಾಮದ ಚಿಂತೆ,
ಒಲ್ಲೆ ಹೋಗು, ಸೆರಗ ಬಿಡು ಮರುಳೆ
ಎನಗೆ ಎಮ್ಮ ಚೆನ್ನಮಲ್ಲಿಕಾರ್ಜನದೇವರು
ಒಲಿವರೋ ಒಲಿಯರೋ ಎಂಬ ಚಿಂತೆ [ವ-೧೦೪]

ಇಷ್ಟಾದರೂ ಕೌಶಿಕನು ಸೆರಗನ್ನು ಬಿಡದೇ, ಹಾಗೆಯೇ ಕಾಮುಕನೋಟದಿಂದ ನೋಡುತ್ತಾ ಸೆರಗನ್ನು ಎಳೆಯತೊಡಗಿದಾಗ, ಆಕ್ರೋಶಗೊಂಡ ಮಹಾದೇವಿ-ಯಕ್ಕಳು-

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ, ಒಡಲವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜನನನರಿಯದ ಮರುಳೆ [ವ-೨೩]

ಎಂದು ನಿಷ್ಠುರವಾಗಿ ನುಡಿಯುತ್ತಾ ಉಟ್ಟಸೀರೆಯ ನೆರಿಗೆ ಬಿಚ್ಚಿ, ಸೀರೆಯನ್ನು ಅವನ ಮುಖದ ಮೇಲೆ ಎಸೆದು ದಿಗಂಬರೆಯಾಗಿ ನಿಂತಳು. ಮಹಾದೇವಿಯಕ್ಕಳು ಉನ್ಮಾದಾವಸ್ಥೆಯಲ್ಲಿ ಕಂಪಿಸುತ್ತಾ ನಿಂತಿರಲು, ಅವಳ ಬತ್ತಲೆ ಶರೀರ ಕಂಡು ಬೆಚ್ಚಿ ಭಯದಿಂದ ದಿಙ್ಮೂಢನಾಗಿ ಕೌಶಿಕ ಕುಸಿದು ಕುಳಿತನು.

ಉಡುತಡಿಯಲ್ಲಿ ಸೂರ್ಯೋದಯವಾಗತೊಡಗಿತ್ತು. ಬೆಳಕು ಹರಡತೊಡಗಿತ್ತು. ಮಹಾದೇವಿಯಕ್ಕ ದಿಗಂಬರದ ದಿವ್ಯಾಂಬರೆಯಾಗಿ ಅರಮನೆಯಿಂದ ಹೊರಬಂದು ರಾಜಬೀದಿಯಲ್ಲಿ ನಡೆಯತೊಡಗಿದಳು. ಈ ಸುದ್ದಿಯು ಕಾಳ್ಗಿಚ್ಚಿನಂತೆ ಶ್ರೀಮಠದ ಗುರುಲಿಂಗದೇವರಿಗೆ, ತಂದೆ-ತಾಯಿ, ಬಂಧು-ಬಳಗ, ಸಖಿಯರು, ಶಿವಭಕ್ತರಿಗೆಲ್ಲ ತಲುಪಿ ಧಾವಿಸಿ ಬಂದರು. ಗುರುಗಳು ತಾವು ಹೊದ್ದುಕೊಂಡಿದ್ದ ಉಣ್ಣೆಯ ಕಂಬಳಿ (ಕೇಶಾಂಬರ)ಯನ್ನು ವೀರ ವಿರಾಗಿಣಿ ಅಕ್ಕಮಹಾದೇವಿಗೆ ಹೊದಿಸಿ ಮಠಕ್ಕೆ ಕರೆದುಕೊಂಡು ಹೋಗಿ, ಸಮಾಧಾನಪಡಿಸಿದರು.

೪. ಉಡುತಡಿಯಿಂದ ಕಲ್ಯಾಣದತ್ತ ಪಯಣ :

ಉಡುತಡಿಯ ಶ್ರೀ ಗುರುಲಿಂಗದೇವರ ಮಠದಲ್ಲಿ-ಗುರುಗಳನ್ನು ಹಾಗೂ ತಂದೆ-ತಾಯಿ, ಗೆಳತಿಯರು, ಬಂಧು-ಬಳಗ, ಲಿಂಗಾಯತ ಭಕ್ತರನ್ನು ಕುರಿತು ಮಹಾದೇವಿಯಕ್ಕ-ತಾನು ಬಸವಗುರು ಹಾಗೂ ಶರಣರು ಇರುವ ಕಲ್ಯಾಣಕ್ಕೆ ಹೋಗುವುದಾಗಿ, ಶರಣರ ಸಂಗದಲ್ಲಿದ್ದು ತನ್ನ ಯೋಗಾಂಗ ಸಾಧನೆಗೈಯುವುದಾಗಿ ತಿಳಿಸಿದಳು. ತನ್ನ ಗಂಡ ಚೆನ್ನಮಲ್ಲಿಕಾರ್ಜುನ ತನ್ನ ಆತ್ಮ ಸಂಗಾತಿಯಾಗಿದ್ದಾನೆ ಎಂದು ನುಡಿದು, ತಾನೊಬ್ಬಳೇ ಕಲ್ಯಾಣದೆಡೆಗೆ ಪಯಣಿಸುವುದಾಗಿ ಹೇಳಿದಳು. ಆಗ ಅಲ್ಲಿ ನೆರೆದಿದ್ದ ಭಕ್ತ ತಾಯಂದಿರು-'ನಿನ್ನ ನಿರ್ಧಾರ ಬದಲಿಸು ಮಗಳೆ, ಇಲ್ಲಿಯೇ ಇರು, ಒಬ್ಬಂಟಿಯಾಗಿ ದೂರದ ನಾಡಿಗೆ ಹೋಗಬೇಡ' ಎಂದು ಹೇಳಲು ಯತ್ನಿಸಿದರು. ಆಗ ಮಹಾದೇವಿಯಕ್ಕಳು-

ಬಂಜೆ ಬೇನೆಯನರಿವಳೆ ?
ಬಲದಾಯಿ ಮುದ್ದ ಬಲ್ಲಳೆ ?
ನೊಂದವರ ನೋವ ನೋಯದವರೆತ್ತ ಬಲ್ಲರೋ ?
ಚೆನ್ನಮಲ್ಲಿಕಾರ್ಜುನಯ್ಯನಿರಿದ ಅಲಗು
ಒಡಲಲ್ಲಿ ಮುರಿದು ಹೊರಳುವೆನ್ನಳಲನು
ನೀವೆತ್ತ ಬಲ್ಲಿರೆ, ಎಲೆ ತಾಯಿಗಳಿರಾ ? [ವ-೨೮೬]

ಎಂದು ಉತ್ತರಿಸಿದಳು.

ತಾಯಿ-ತಂದೆಯವರು 'ಮಗು ಮಹಾದೇವಿ, ನೀನು ಸುಖವಾಗಿ ಬೆಳದವಳು, ಒಬ್ಬಂಟಿಯಾಗಿ ಹೇಗೆ ಹೋಗುವಿ ? ನಾವುಗಳು ಯಾರೂ ನೋಡದ, ತುಂಬಾ ದೂರದ ಕಲ್ಯಾಣನಾಡು, ನಾಲ್ಕಾರು ತಿಂಗಳ ಕಾಲ ನಡೆಯುತ್ತ ಸಾಗವುದು. ಹಸಿವು-ತೃಷೆಯಾದರೆ ಏನು ಮಾಡುತ್ತೀ ಮಗಳೆ? ಕತ್ತಲಾದರೆ ಅಪರಿಚಿತ ನಾಡಿನಲ್ಲಿ ಎಲ್ಲಿ ಮಲಗುತ್ತೀ ? ಬೇಡ ಮಗು ಎಂದು ಹೆತ್ತ ಕರುಳಿನ ಸಂಕಟ ತಡೆಯದೇ

ಬಿಕ್ಕಳಿಸುತ್ತಾ ಕೇಳಿದರು. ಆಗ ಮಹಾದೇವಿಯು ಅವರಿಗೆ ಸಾಂತ್ವನ ಹೇಳುತ್ತಾ-

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು,
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು,
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು,
ಶಯನಕ್ಕೆ ಹಾಳು ದೇಗುಲಗಳುಂಟು,
ಚೆನ್ನಮಲ್ಲಿಕಾರ್ಜುನಯ್ಯಾ
ಆತ್ಮಸಂಗಾತಕ್ಕೆ ನೀನೆನಗುಂಟು [ವ-೪೧೦]

ಎಂದು ಅತ್ಯಂತ ಆತ್ಮವಿಶ್ವಾಸದಿಂದ, ದೃಢ ನಿರ್ಧಾರವನ್ನು ಹೇಳಿದಳು.

ಮಹಾದೇವಿಯಕ್ಕಳ ಅಚಲ ನಿರ್ಧಾರವನ್ನು ಅರಿತು, ಒಲ್ಲದ ಮನಸ್ಸಿನಿಂದಲೇ ಎಲ್ಲರೂ ಅವಳನ್ನು ಬಸವಾದಿ ಶರಣರು ಇರುವ ಕಲ್ಯಾಣಕ್ಕೆ ಬೀಳ್ಕೊಡಲು ಉಡುತಡಿಯ ಅಗಸಿಯ ಬಾಗಿಲವರೆಗೂ ಬಂದು ನಿಂತರು, ಆಗ ಅಕ್ಕಮಹಾದೇವಿಯು ಅಂತಿಮವಾಗಿ ಅವರೆಲ್ಲರನ್ನು ನೋಡುತ್ತಾ-

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದಿರಿ ನೋಡಾ
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದಿರೆನ್ನ
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗತನವ ಮಾಡುವೆ
ಚೆನ್ನಮಲ್ಲಿಕಾರ್ಜನನ ಕೈವಿಡಿದು (ಬಾಳುವೆ)
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ, ನಿಮ್ಮಡಿಗಳೆಲ್ಲರೂ
ಮರಳಿ ಬಿಜಯಂಗೈವುದು, ಶರಣಾರ್ಥಿ [ವ-೪೨೪]

ಎಂದು ಸದುವಿನಯದ ಕೃತಜ್ಞತೆಯಿಂದ ಗುರುಲಿಂಗದೇವರು ಹಾಗೂ ತಂದೆ-ತಾಯಿ, ಬಂಧು-ಬಳಗ, ಉಡುತಡಿಯ ಸದ್ಭಕ್ತರಿಗೆಲ್ಲ ತಲೆಬಾಗಿ, ಕೈ ಮುಗಿದು ಬಸವಾ ಬಸವಾ ಎಂದು ಸ್ಮರಣೆ ಮಾಡುತ್ತಾ ಕಲ್ಯಾಣದತ್ತ ಮುಖ ಮಾಡಿ ಹೆಜ್ಜೆ ಹಾಕಿದಳು.

೫. ಮಾರ್ಗ ಮಧ್ಯದಲ್ಲಿ ಕಾಮುಕರ ಕಾಟ :

ಉಡುತಡಿಯಿಂದ ಕಲ್ಯಾಣದವರೆಗೆ ವೀರ ವಿರಾಗಿಣಿ ಮಹಾದೇವಿ ಅಕ್ಕಳು ವೈರಾಗ್ಯದ ಸಂಕೇತವಾದ ಕಂಬಳಿಯ (ಕೇಶಾಂಬರ) ಹೊದೆದುಕೊಂಡು ಮುನ್ನಡೆದ ದಾರಿಯು ತುಂಬಾ ದುರ್ಗಮವಾಗಿತ್ತು.

ಹದಿನಾರರ ಹರೆಯದ, ಸೌಂದರ್ಯದ ಖಣಿ, ಅಪರೂಪದ ಚಲುವೆಯನ್ನು, ಅದೂ ಒಬ್ಬಂಟಿಯಾಗಿ ಹೊರಟಿರುವುದನ್ನು ಕಂಡು ಕೆಲವು ಕಾಮುಕರು ಅಲ್ಲಲ್ಲಿ ಅವಳನ್ನು ಕೆಣಕಲು ನೋಡಿದರು. ರತಿಸುಖದ ಕೂಟಕ್ಕೆ ಕರೆದರು. ಆಗ ಮಹಾದೇವಿಯಕ್ಕ ಹೇಳಿದಳು–

–೧–

ಬಟ್ಟಿಹ ಮೊಲೆಯ ಭರದ ಜವ್ವನದ
ಚೆಲುವ ಕಂಡು ಬಂದಿರಣ್ಣಾ,
ಅಣ್ಣಾ, ನಾನು ಹೆಂಗೂಸಲ್ಲ
ಅಣ್ಣಾ, ನಾನು ಸೂಳೆಯಲ್ಲ
ಅಣ್ಣಾ, ಮತ್ತೇನನ್ನ ಕಂಡು ಕಂಡು,
ಆರೆಂದು ಬಂದಿರಣ್ಣಾ ?
ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿದ ಪರಪುರುಷರು
ನಮಗಾಗದ ಮೋರೆ ನೋಡಣ್ಣಾ [ವ–೨೮೮]

–೨–

ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನ ನಾಚದೆ ಬಂದಿರಣ್ಣಾ
ಕೇಳಿದ ಶ್ರೋತ್ರ ಸೊಗಸಿಗೆ
ನೀವು ಮರುಳಾಗಿ ಬಂದಿರಣ್ಣಾ
ನಾರಿಯೆಂಬ ರೂಪಿಂಗೆ
ನೀವು ಒಲಿದು ಬಂದಿರಣ್ಣಾ
ಮೂತ್ರವು ಬಿಂದು ಒಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ
ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ
ಹೋಗಲಾಡಿಸಿಕೊಂಡು, ಇದಾವ ಕಾರಣವೆಂದರಿಯದೆ
ನೀವು ನರಕಹೇತುವೆಂದರಿತು
ಮನ ಹೇಸದೆ ಬಂದಿರಣ್ಣಾ
ಚೆನ್ನಮಲ್ಲಿಕಾರ್ಜುನನಲ್ಲದೆ

ಮಿಕ್ಕಿನ ಪುರುಷರೆನಗೆ ಸಹೋದರರು
ಛೀ ಹೋಗಾ ಮರುಳೆ [ವ-೨೬೮]

ಎಂದು ಸಾತ್ವಿಕ ಸಿಟ್ಟಿನಿಂದ ಬೈದಳು, ಅಕ್ಕಮಹಾದೇವಿಯ ಉಗ್ರರೂಪ ಕಂಡು ದಂಗಾಗಿ ನಿಂತರು. ಆಗ ಮಹಾದೇವಿಯಕ್ಕಳು ಶಾಂತಳಾಗಿ ಬುದ್ಧಿ ಹೇಳುತ್ತಾಳೆ–

ಎಲೆ ಅಣ್ಣಾ ಅಣ್ಣಾ
ನೀವು ಮರುಳಲ್ಲ ಅಣ್ಣಾ,
ಹದಿನಾಲ್ಕು ಲೋಕವನುಂಗಿದ
ಕಾಮನ ಬಾಣದ ಗುಣ
ಎನ್ನ ನಿನ್ನಳವೆ ?
ವಾರುವ ಮುಗ್ಗಿದಡೆ ಮಿಡಿ ಹರಿಯ ಹೊಯ್ವರೆ ?
ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು.
ನಿನ್ನ ನೀ ಸೈರಿಸಿ ಕೈದುವ ಕೊಳ್ಳಿರಣ್ಣಾ
ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ [ವ-೧೦೮]

ಅಕ್ಕನ ಸಾತ್ವಿಕ ವೈರಾಗ್ಯದ ವ್ಯಕ್ತಿತ್ವಕ್ಕೆ ಮಾರುಹೋಗಿ, ಅವರೆಲ್ಲ ಪಶ್ಚಾತ್ತಾಪದಿಂದ ತಮ್ಮದು ತಪ್ಪಾಯಿತೆಂದು ಶರಣು ಹೋದರು. ಗೌರವದಿಂದ ನಮಿಸಿ, ದೂರಸರಿದರು. ಆಧ್ಯಾತ್ಮ ಶಕ್ತಿಯ ಪ್ರಖರ ಬೆಳಕಿನ ಮುಂದೆ ತಾಮಸ ಶಕ್ತಿಯ ಆಟ ನಡೆಯಲಿಲ್ಲ.

ಲೋಕದ ಜನರ ಅಜ್ಞಾನವ ಕಂಡು ಮರುಗಿದಳು. ಹುಚ್ಚಿಯೆಂದು ಭಾವಿಸಿ ಕಲ್ಲೆಸೆದವರಿಗೂ ಕೈಮುಗಿದಳು. ಲೋಕಾನುಭವದ ದರ್ಶನವಾಯಿತು. ಈ ಎಲ್ಲ ಕಷ್ಟ-ಕೋಟಲೆ ಅನುಭವಿಸಿದಳು. ತನಗೆ ತಾನೇ ಸಮಾಧಾನ ಹೇಳಿಕೊಂಡಳು–

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ
ಎನಗೆ ಗತಿ ಸೋಪಾನ
ಚೆನ್ನಮಲ್ಲಿಕಾರ್ಜುನಾ. [ವ.೪೨೮]

ಈ ಪಯಣದಲ್ಲಿ ಹಸಿವು, ತೃಷೆ, ನಿದ್ರೆಗಳು, ಕಾಮ-ಕ್ರೋದಾಧಿಗಳು ಕಾಡಿದವು. ಅವೆಲ್ಲವಕ್ಕೆ ಕೈ ಮುಗಿದು ತನ್ನ ಗುರಿಯೆಡೆಗೆ ಮುನ್ನಡೆದಳು ಮಹಾದೇವಿಯಕ್ಕ.

ಹಸಿವೆ ನೀನು ನಿಲ್ಲು ನಿಲ್ಲು,
ತೃಷೆಯೆ ನೀನು ನಿಲ್ಲು ನಿಲ್ಲು,
ನಿದ್ರೆಯ ನೀನು ನಿಲ್ಲು ನಿಲ್ಲು,
ಕಾಮವೆ ನೀನು ನಿಲ್ಲು ನಿಲ್ಲು,
ಕ್ರೋಧವೆ ನೀನು ನಿಲ್ಲು ನಿಲ್ಲು,
ಲೋಭವೆ ನೀನು ನಿಲ್ಲು ನಿಲ್ಲು,
ಮೋಹವೆ ನೀನು ನಿಲ್ಲು ನಿಲ್ಲು,
ಮದವೆ ನೀನು ನಿಲ್ಲು ನಿಲ್ಲು,
ಮತ್ಸರವೆ ನೀನು ನಿಲ್ಲು ನಿಲ್ಲು,
ಸಚರಾಚರವೆ ನೀನು ನಿಲ್ಲು ನಿಲ್ಲು,
ನಾನು ಚೆನ್ನಮಲ್ಲಿಕಾರ್ಜುನ ದೇವರ
ಅವಸರದ ಓಲೆಯನೊಯ್ಯುತ್ತಲಿದ್ದೇನೆ
ಶರಣಾರ್ಥಿ (ವ-೪೧೩)

ಹೀಗೆ ತನು-ಮನ-ಭಾವಗಳ ಇಂದ್ರಿಯಂಗಳಿಗೆ ಕೈ ಮುಗಿದು, ಸಾಗುತ್ತಾಳೆ.

೬. ನಿಸರ್ಗದಲ್ಲಿ ದೇವ ಸ್ವರೂಪ ದರ್ಶನ :

ಸಾವಿರಾರು ಮೈಲುಗಳ ಪಯಣದಲ್ಲಿ ನಿಸರ್ಗದ ವೈಭವ, ಪ್ರಕೃತಿಯ ಸೌಂದರ್ಯ, ಪಶು-ಪಕ್ಷಿಗಳ ಕಲರವ, ಎಲ್ಲವನ್ನೂ ನೋಡುತ್ತಾ, ಅವುಗಳೊಂದಿಗೆ ಮಾತನಾಡುತ್ತಾ ಸಾಗುವ ಪರಿಯು ಅನುಪಮವಾದುದಾಗಿದೆ-

-೧-

ಅಳಿ ಸಂಕುಳವೆ, ಮಾಮರವೆ,
ಬೆಳದಿಂಗಳೆ, ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು
ಎನ್ನೊಡೆಯ ಚೆನ್ನಮಾಲ್ಲಿಕಾರ್ಜುನ ಕಂಡಡೆ
ಕರೆದು ತೋರಿರೆ. (ವ-೫೧)

-೨-

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ

ಸರವೆತ್ತಿ ಪಾಡುವ ಕೋಗಿಲೆಗಳಿರಾ,
ನೀವು ಕಾಣಿರೆ, ನೀವು ಕಾಣಿರೆ,
ಎರಗಿ ಬಂದಾಡುವ ತುಂಬಿಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಕೊಳನ ತಡಿಯೊಳಾಡುವ ಹಂಸಗಳಿರಾ,
ನೀವು ಕಾಣಿರೆ, ನೀವು ಕಾಣಿರೆ
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೆ, ನೀವು ಕಾಣಿರೆ,
ಚೆನ್ನಮಾಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ (ವ-೨೦೪)

ವಿಶಾಲವಾದ ನಿಸರ್ಗವು ಪರಮಾತ್ಮನ ಸ್ವರೂಪವೇ ಆಗಿದೆ ಎಲ್ಲೆಡೆಯೂ ದೇವನು ಸರ್ವಭರಿತನಾಗಿದ್ದಾನೆ. ತನಗೇಕೆ ಕಾಣುತ್ತಿಲ್ಲ? ಮುಖ ತೋರುತ್ತಿಲ್ಲ ಎಂದು ಹಂಬಲಿಸುತ್ತಾಳೆ-

ವನವೆಲ್ಲ ನೀನೆ,
ವನದೊಳಗಣ ದೇವ ತರುವೆಲ್ಲ ನೀನೆ
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ
ಚೆನ್ನಮಲ್ಲಿಕಾರ್ಜುನಾ, ಸರ್ವಭರಿತನಾಗಿ
ಎನಗೇಕೆ ಮುಖದೋರೆ? (ವ-೩೬೨)

೭. ಕಲ್ಯಾಣದ ಕೀರ್ತಿ ವಾರ್ತೆ :

ಈ ರೀತಿಯಾಗಿ ಮಹಾದೇವಿಯಕ್ಕ ಲಿಂಗಧ್ಯಾನ, ಗುರುಬಸವ ಸ್ಮರಣೆಗೈಯುತ್ತ, ಸುದೀರ್ಘವಾಗಿ ಚರಿಸಿ ಕಲ್ಯಾಣ ಮಹಾನಗರ ಸಮೀಪಿಸಿದಂತೆಲ್ಲ ಎಲ್ಲೆಡೆ ಲಿಂಗವಂತ ಸದ್ಭಕ್ತರು, ಶರಣಜಂಗಮರ ದರ್ಶನವಾಗತೊಡಗಿತು. ಅಕ್ಕನು ಕೌಶಿಕರಾಜನ ಭೋಗ-ಭಾಗ್ಯಗಳನ್ನು ತಿರಸ್ಕರಿಸಿ, ಕೇಶಾಂಬರದ ದಿಗಂಬರೆಯಾಗಿ, ವೀರ ವಿರಾಗಿಣಿಯಾಗಿ ಕಲ್ಯಾಣದತ್ತ ಆಗಮಿಸುತ್ತಿರುವ ಸಮಾಚಾರ ಚರ-ಜಂಗಮರ ಮೂಲಕ ನಾಡಿನಾದ್ಯಂತ ಪಸರಿಸತೊಡಗಿತು. ಮಾರ್ಗ ಮಧ್ಯದಲ್ಲಿ ಸದ್ಭಕ್ತರು ಮಹಾದೇವಿಯಕ್ಕನ ದರ್ಶನ ಪಡೆಯುತ್ತಿದ್ದರು. ಭಕ್ತಿಯಿಂದ ಪೂಜೆ-ಪ್ರಸಾದಗಳ ವ್ಯವಸ್ಥೆ ಮಾಡುತ್ತಿದ್ದರು. ಬಸವಗುರುವಿನ ಗುಣಗಾನ ಮಾಡುತ್ತಿದ್ದರು. ಕಲ್ಯಾಣರಾಜ್ಯದಲ್ಲಿ ಮಾನವಕುಲದ ಕಲ್ಯಾಣ, ಸಕಲ ಜೀವರಾಶಿಗಳ ಲೇಸು ಕಂಡು ಅಕ್ಕ ಧನ್ಯತೆಯನ್ನನುಭವಿಸುತ್ತಾ, ಬಸವ ತಂದೆಯನ್ನು ಕಾಣಬೇಕೆಂಬ ಉತ್ಕಟತೆ ಹೆಚ್ಚುತ್ತಾ ಮುನ್ನಡೆದಳು.

ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ
ಇದರಂತುವನಾರು ಬಲ್ಲರಯ್ಯಾ ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ
ತವಕವೆನಗಾಯಿತ್ತು ಕೇಳಾ,
ಚೆನ್ನಮಲ್ಲಿಕಾರ್ಜುನಾ [ವ-೧೪೬]

ಕಲ್ಯಾಣ ಸನಿಹ ಬಂದಂತೆಲ್ಲಾ ಮಹಾದೇವಿಯಕ್ಕ ರೋಮಾಂಚಿತಳಾಗತೊಡಗಿದಳು. ಜನಪದ ಗರತಿಯರು ಬೆಳಗಿನ ಜಾವ ಜೋಳ-ಗೋದಿ ಬೀಸುವಾಗ ಸುಶ್ರಾವ್ಯವಾಗಿ ಭಕ್ತಿಯಿಂದ ಹಾಡುಗಳನ್ನು ಹಾಡುತ್ತಿದ್ದರು.

-೧-

ಕಾಯಕವ ಕಲಿಸುದಕ ನಾಯಕನು ಬಸವಣ್ಣ
ಜೀಯ ಹೊಸಮತಕೆ ಶಿವಭಕ್ತಿ । ಸಾರುದಕ
ರಾಯ ಜೀವನದ ಹೊಸ ನುಡಿಗೆ ॥

-೨-

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವ ಮಾತು ॥

-೩-

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ । ನಿಜ ದೀಪ
ಬಸವನೇ ಸಗ್ಗ ಸೋಪಾನ ॥

-೪-

ಹೊತ್ತಾರೆ ನಾನೆದ್ದು ಯಾರ್ಯಾರ ನೆನೆಯಲಿ
ಹೆಣ್ಣೀನ ಬಾಳಿಗೆ ಬೆಳಕಿತ್ತ । ಬಸವನ
ಎದ್ದೊಂದು ಗಳಿಗೆ ನೆನೆದೇನ ॥

ಸುಪ್ರಭಾತ ಸಮಯದಲ್ಲಿ ಕಲ್ಯಾಣದ ಹೆಬ್ಬಾಗಿಲೆನಿಸಿದ ಕಲಬುರ್ಗಿ ದಾಟಿ ಮಹಾಗಾಂವದ ಸದ್ಭಕ್ತರ ಮನೆಯಲ್ಲಿ ಮಹಾದೇವಿಯಕ್ಕಳಿಗೆ ಪೂಜೆಗೆ ಅನುಕೂಲ ಮಾಡಿದ್ದರು. ಆ ಮನೆಯು ತಾಯೆಂದಿರು ಹಾಡುವುದನ್ನು ಕೇಳಿ ಆನಂದಭರಿತಳಾದಳು. ಅಲ್ಲಿ ಪೂಜೆ-ಪ್ರಸಾದ-ವಚನಾನುಭಾವ ಪೂರೈಸಿಕೊಂಡು ಬಸವಭಕ್ತರಿಂದ ಬೀಳ್ಕೊಂಡು ಕಲ್ಯಾಣದತ್ತ ಹೆಜ್ಜೆ ಹಾಕಿದಳು. [ಮಹಾದೇವಿಯಕ್ಕನ

ಸ್ಮರಣಾರ್ಥವಾಗಿ ಮಹಾಗಾಂವದಲ್ಲಿ ಸುಂದರವಾದ ಮಹಾದೇವಿಯಕ್ಕನ ಮಂದಿರವನ್ನು ಅನಂತರ ಕಟ್ಟಿದರು. ಇದನ್ನು ಇಂದಿಗೂ ನೋಡಬಹುದಾಗಿದೆ.]

ಹಳ್ಳಿಗಾಡಿನ ಹಾದಿಯಲ್ಲಿ-ಹೊಲ ಗದ್ದೆಗಳಲ್ಲಿ ರೈತರು ಸಂತೋಷದಿಂದ ಹಾಡುತ್ತಾ ಕೃಷಿಕಾಯಕದಲ್ಲಿ ತೊಡಗಿರುವುದನ್ನು ಕಂಡಳು. ಹಣೆಯ ಮೇಲೆ ಭಸ್ಮ ಕೊರಳಲ್ಲಿ ಇಷ್ಟಲಿಂಗ-ರುದ್ರಾಕ್ಷಿಗಳನ್ನು ಕಂಡು ಭಕ್ತಿಯಿಂದ ಕೈಮುಗಿಯುತ್ತಾ ಮುಂದುವರೆದಳು. ಹತ್ತಾರು ದಿನಗಳ ಪಯಣದ ನಂತರ ಕಲ್ಯಾಣ ಪಟ್ಟಣ ದೂರದಿಂದಲೇ ಕಾಣತೊಡಗಿತು. ಒಂದು ಎತ್ತರದ ಗುಡ್ಡದ ಮೇಲೆ ಹತ್ತಿ ಕುಳಿತಳು. ಅಲ್ಲಿಯ ಪ್ರಕೃತಿ ಸೌಂದರ್ಯ, ಪಶು-ಪಕ್ಷಿಗಳ ಕಲರವ, ಕಾಯಕಕ್ಕೆ ಹೋಗಿ ಬರುವ ಭಕ್ತರನೆಲ್ಲ ನೋಡಿದಳು. ಅನತಿ ದೂರದಲ್ಲಿ ತ್ರಿಪುರಾಂತಕ ಕೆರೆ ಕಾಣತೊಡಗಿತ್ತು. ಆ ಎತ್ತರದ ಸ್ಥಳದಲ್ಲಿ ಕುಳಿತು ಲಿಂಗಧ್ಯಾನದಲ್ಲಿ ಮೈಮರೆತಳು, ತಾನು ಸಾಗಿಬಂದ ಬಾಳಿನ-ಮಾರ್ಗವನ್ನು ಸ್ಮರಿಸಿಕೊಂಡಳು, ಭಾವ ಪರವಶಳಾಗಿ ಹಾಡತೊಡಗಿದಳು. ಆ ಹಾಡು ವಚನವಾಗಿ ಹೊರಹೊಮ್ಮಿತು-

ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು ?
ಹೊಗಬಾರದು ಅಸಾಧ್ಯವಯ್ಯಾ
ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು.
ಒಳ ಹೊರಗು ಶುದ್ಧವಾದಂಗಲ್ಲದೆ ಕಲ್ಯಾಣವ ಹೊಗಬಾರದು
ನೀ ನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು
ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ
ಕಲ್ಯಾಣವಂ ಕಂಡು ನಮೋ ನಮೋ ಎನುತಿದ್ದೆನು [ವ-೧೪೭]

೮. ಬಂದವರ ಓಣಿ ಪ್ರವೇಶ :

ಬಿಸಿಲು ಏರತೊಡಗಿತ್ತು, ಅಲ್ಲಿಂದಲೇ ಕಲ್ಯಾಣ ದರ್ಶನ ಮಾಡಿಕೊಂಡು ಗುಡ್ಡದಿಂದ ಕೆಳಗಿಳಿದು ಮುನ್ನಡೆದಳು. ಅಲ್ಲಿ ಬಂದವರ ಓಣಿ ಕಂಡಿತು. ಹತ್ತಾರು ಶರಣ ಶರಣೆಯರು ಕಲ್ಯಾಣಕ್ಕೆ ಬಂದವರನ್ನು ಗೌರವದಿಂದ ಕೈಮುಗಿದು ಶರಣು ಬನ್ನಿರಿ, ಹದುಳ ಬನ್ನಿರಿ, ಎಂದು ಸ್ವಾಗತಿಸಿ. ಅವರಿಗೆ ಸ್ನಾನ-ಪೂಜೆ-ಪ್ರಸಾದಗಳಿಗಾಗಿ ವಸತಿ-ಆಲಯಗಳಿಗೆ ಕರೆದೊಯ್ಯುತ್ತಿದ್ದರು.

ಮಹಾದೇವಿಯಕ್ಕ ಬರುತ್ತಲೇ-ಶರಣೆಯರು ಶರಣೆಂದು ಸ್ವಾಗತಿಸಿದರು. ಸ್ನಾನ-ಪೂಜೆಗಾಗಿ ಹತ್ತಿರದ ಗುಹೆಯೊಂದಕ್ಕೆ ಕರೆದೊಯ್ದರು. ಅಲ್ಲಿ ಹಾಲಿನಂತೆ ಶುಭ್ರವಾದ ಚಿಲುಮೆಯ ನೀರು ಮಂಜುಳ ನಿನಾದದೊಂದಿಗೆ ಹರಿಯುತ್ತಿತ್ತು. ಅಕ್ಕಳು ಅಲ್ಲಿ ಸ್ನಾನ ಮಾಡಿ ಗವಿಯಲ್ಲಿ ಲಿಂಗಪೂಜೆ ಮಾಡಿಕೊಂಡಳು. ಫಲಾಹಾರವನ್ನು ಪ್ರಸಾದವಾಗಿ ಸ್ವೀಕರಿಸಿ ವಿಶ್ರಾಂತಿ ಪಡೆದಳು. [ಕಲ್ಯಾಣದಲ್ಲಿ

ಇಂದಿಗೂ ಬಂದವರ ಓಣಿ, ಅಕ್ಕನಗವಿ, ಜೀವಜಲವಾಗಿ ಹರಿಯುತ್ತಿರುವ ಝುರಿಯನ್ನು ಕಾಣಬಹುದು].

ಮಹಾದೇವಿಯಕ್ಕ ಕಲ್ಯಾಣ ನಾಡು ಪ್ರವೇಶಿಸಿರುವ ಸಮಾಚಾರ ಶರಣ ಜಂಗಮರಿಂದ ಅರಿತ ಅನುಭವಮಂಟಪದಲ್ಲಿರ್ದ ಗುರುಬಸವಣ್ಣನವರು ಹಾಗೂ ಅಲ್ಲಮಪ್ರಭುಗಳು ಮಹಾದೇವಿಯಕ್ಕಳನ್ನು ಕರೆತರಲು ಕಿನ್ನರಿ ಬೊಮ್ಮಯ್ಯ ಎಂಬ ಶರಣನನ್ನು ಕಳುಹಿಸುತ್ತಾರೆ.

೯. ಶರಣ ಕಿನ್ನರಯ್ಯನ ಪರೀಕ್ಷೆ ಪ್ರಸಂಗ :

ಶರಣ ಕಿನ್ನರಯ್ಯ ಮಹಾದೇವಿಯಕ್ಕಳ ನಿಜವೈರಾಗ್ಯವನ್ನು ಲೋಕಕ್ಕೆ ಸಾರಲೋಸುಗ, ಮನದಲ್ಲಿ ಏನನೋ, ನಿರ್ಧರಿಸಿ ಪರೀಕ್ಷಿಸಲು ಮುಂದಾಗುತ್ತಾನೆ. ಮಹಾದೇವಿಯಕ್ಕಳು ಬಂದವರ ಓಣಿಯ ಗವಿಯಿಂದ ಅರ್ಚನೆ-ಪ್ರಸಾದ ಪೂರೈಸಿಕೊಂಡು ಬಸವಧ್ಯಾನಗೈಯುತ್ತಾ ಬಸವಣ್ಣನವರ ಮಹಾಮನೆ-ಅನುಭವಮಂಟಪದೆಡೆ ಹೊರಟಳು. ತ್ರಿಪಾರಂತ ಕೆರೆಯ ದಿನ್ನೆಯ ಹತ್ತಿರ ಬಂದಾಗ ಕೇಶಾಂಬರದ ದಿಗಂಬರೆಯುನ್ನು ಕಂಡು, ಎದುರಿಗೆ ಬಂದು ನಿಂತು. ಮಹಾದೇವಿಯಕ್ಕಳನ್ನು ಮಾತನಾಡಿಸುವನು.

ಕಿನ್ನರಿ ಬ್ರಹ್ಮಯ್ಯ : ಕಾಯದಲ್ಲಿ ಕಳವಳವಿರಲು
ಪ್ರಾಣದಲ್ಲಿ ಮಾಯೆಯಿರಲು
ಏತರ ಗಮನ, ಏತರ ನಿರ್ವಾಣ
ಮಹಾಲಿಂಗ ತ್ರಿಪುರಾಂತಕ
ನಿನ್ನ ಸಂಸಾರಿ ಎಂಬನಲ್ಲದೇ
ಸಜ್ಜನೆಯೆಂದು ಕೈವಿಡಿವನಲ್ಲ [ವ-೬]

ಮತ್ತೆ ಮುಂದುವರೆದು-

ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ
ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ
ನಿನ್ನ ಪ್ರವುಡಿಯಿಂದ ಕೂಡಿದೆನೆಂಬುದು ಭಾವದಲ್ಲಿ
ಬಚ್ಚ ಬರಿಯ ಹೆಂಗುಸಾಗಿ ತೋರಿತ್ತೆನಗೆ
ಮಹಾಲಿಂಗ ತ್ರಿಪುರಾಂತಕನೊಡ್ಡಿದ ಮಾಯೆಯ
ನಿನ್ನ ಸಮ ಸುಖ ಕೂಟದೊಳಿರ್ದು
ಶಿವಭಾವ ಭಕ್ತಿಯಿಂದ ಗೆಲುವೆನು
ಮಹಾಹೆಣ್ಣು ಎಂದು ಕೈವಿಡಿವೆನು [ವ-೧೦]

ಎಂದು ಮುಂದುವರೆದು, ಮಹಾದೇವಿಯಕ್ಕಳನ್ನು ಪರೀಕ್ಷಿಸಲು ಮುಂದಾದನು ಆಗ ಮಹಾದೇವಿಯಕ್ಕಳು :-

ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ
ಜೀವದ ಭಂಗವ ಶಿವಾನುಭವದಿಂದ ಗೆಲಿದೆ
ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ
ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ
ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ
ಚೆನ್ನಮಲ್ಲಿಕಾರ್ಜುನ
ಕಾಮನ ಕೊಂದು ಮನಸಿಜನಾಗುಳುಹಿದಡೆ
ಮನಸಿಜನ ತಲೆಯ ಬರಹವ ತೊಡೆದೆನು [ವ-೩]

ಮುಂದುವರೆದು ಹೇಳುತ್ತಾಳೆ-

ಅಂಗವ ಲಿಂಗಮುಖದಲ್ಲಿ ಅರ್ಪಿಸಿ
ಅಂಗ ಆನಂಗವಾಯಿತ್ತು.
ಮನವ ಅರಿವಿಂಗರ್ಪಿಸಿ
ಮನ ಲಯವಾಗಿತ್ತು.
ಭಾವವ ತೃಪ್ತಿಗರ್ಪಿಸಿ, ಭಾವ ಬಯಲಾಯಿತ್ತು.
ಅಂಗ ಮನ ಭಾವವಳಿದ ಕಾರಣ
ಕಾಯ ಅಕಾಯವಾಯಿತ್ತು.
ಎನ್ನ ಕಾಯದ ಸುಖ ಭೋಗವ
ಲಿಂಗವೇ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು
ಇದು ಕಾರಣ, ಚೆನ್ನಮಲ್ಲಿಕಾರ್ಜುನನೆಂಬ
ಗಂಡನ ಒಳಹೊಕ್ಕು ಬೆರೆಸಿದೆನು [ವ-೬]

ಮಹಾದೇವಿಯಕ್ಕಳ ವೈರಾಗ್ಯದ ಅನುಭಾವದ ನುಡಿಗಳನ್ನು ಕೇಳುತ್ತಾ, ಅಂತರಂಗದಲಿ ಆ ಮಹಾವೈರಾಗ್ಯಮೂರ್ತಿಯ, ಬಯಲು ಮೂರ್ತಿಯ ಸರ್ವಾಂಗದರ್ಶನವಾಗಿ, ಕಿನ್ನರಿ ಬ್ರಹ್ಮಯ್ಯಾ ನುಡಿಯುತ್ತಾನೆ-

ಮಸ್ತಕವ ಮುಟ್ಟಿ ನೋಡಿದಡೆ, ಮನೋಹರದಳಿವು ಕಾಣಬಂದಿತ್ತು !
ಮುಖ ಮಂಡಲವ ಮುಟ್ಟಿ ನೋಡಿದಡೆ, ಮೂರ್ತಿಯ ಅಳಿವು ಕಾಣಬಂದಿತ್ತು !
ಕೊರಳ ಮುಟ್ಟಿ ನೋಡಿದಡೆ, ಗರಳಧರನ ಇರವು ಕಾಣಬಂದಿತ್ತು !

ತೋಳುಗಳ ಮುಟ್ಟಿ ನೋಡಿದಡೆ ಶಿವಘನವು ಕಾಣಬಂದಿತ್ತು !
ಉರಸ್ಥಲ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಣಬಂದಿತ್ತು !
ಬಸಿರಮುಟ್ಟಿ ನೋಡಿದಡೆ ಬ್ರಹ್ಮಾಂಡವ ಕಾಣಬಂದಿತ್ತು !
ಗುಹ್ಯವ ಮುಟ್ಟಿ ನೋಡಿದಡೆ ಕಾಮದಹನ ಕಾಣಬಂದಿತ್ತು !
ಮಹಾಲಿಂಗ ತ್ರಿಪುರಾಂತಕದೇವಾ
ಮಹಾದೇವಿಯಕ್ಕನ ನಿಲವನರಿಯದೆ ಅಳುಪಿಕೆಟ್ಟೆನು. [ವ-೧೪]

ಮಹಾದೇವಿಕ್ಕಳ ಸರ್ವಾಂಗವೆಲ್ಲ ಲಿಂಗಮಯವಾಗಿತ್ತು. ಅಲ್ಲಿ ಕಾಮವಾಸನೆ ಅಳಿದಿತ್ತು. ಲಿಂಗಭಕ್ತಿಯ ಸುವಾಸನೆಯು ಹೊರಹೊಮ್ಮುತ್ತಿತ್ತು. ಪರೀಕ್ಷಿಸಲು ಬಂದಿದ್ದ ಶರಣ ಕಿನ್ನರಿ ಬ್ರಹ್ಮಯ್ಯ ಅಕ್ಕನ ಘನವ್ಯಕ್ತಿತ್ವ ದರ್ಶನ ಮಾಡಿಕೊಂಡು ಧನ್ಯವಾಗಿ ತಾಯಿಯ ಶ್ರೀಪಾದಂಗಳಿಗೆ ಎರಗಿದನು. ಆಗ ಮಹಾದೇವಿಯಕ್ಕಳು–

ಎನ್ನಂತೆ ಪುಣ್ಯಗೈದವರಂಟೆ ?
ಎನ್ನಂತೆ ಭಾಗ್ಯವಂ ಗೈದವರುಂಟೆ ?
ಕಿನ್ನರನಂತಪ್ಪ ಸೋದರನೆನಗೆ,
ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ
ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ [ವ-೯೪]

ಮಹಾದೇವಿಯಕ್ಕಳು ಕಿನ್ನರಿಬ್ರಹ್ಮಯ್ಯನನ್ನು 'ಸಹೋದರ' ಎಂದು ವಾತ್ಸಲ್ಯದಿಂದ ನುಡಿಯುತ್ತಾ ಆತನ ತಲೆ ನೇವರಿಸಿದಾಗ, ಆತನಿಗೆ ತಾಯಿಯ ಅಂತಃಕರಣದ ದರ್ಶನವಾಯಿತು.

ಕಿನ್ನರಯ್ಯ ನುಡಿದ :

ಶರಣು ಶರಣಾರ್ಥಿ ಎಲೆ ತಾಯೆ ನಮ್ಮವ್ವ
ಶರಣು ಶರಣಾರ್ಥಿ ಶರಣಾರ್ಥಿ ಕರುಣಾಸಾಗರ ನಿಧಿಯೆ,
ದಯಾಮೂರ್ತಿ ತಾಯೆ, ಶರಣಾರ್ಥಿ !
ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕು
ನೀವು ಬಿಡಿಸಿದಿರಾಗಿ, ನಿಮ್ಮ ದಯದಿಂದ ನಾನು
ಹುಲಿನೆಕ್ಕಿ ಬದುಕಿದನು
ಶರಣಾರ್ಥಿ ಶರಣಾರ್ಥಿ ತಾಯೆ [ವ-೧೬]

೧೦. ಬಸವಣ್ಣನವರ ಮಹಾಮನೆ ಪ್ರವೇಶ :

ಕಿನ್ನರಿ ಬ್ರಹ್ಮಯ್ಯ ಭಕ್ತಿಯಿಂದ ಅಕ್ಕಮಹಾದೇವಿ ತಾಯಿಯನ್ನು ಕರೆದುಕೊಂಡು ನೇರವಾಗಿ ಬಸವಣ್ಣನವರ ಮಹಾಮನೆಗೆ ಕರೆತಂದನು.

ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ
ಅಯ್ಯಾ ನಿಮ್ಮ ಶರಣರಿದ್ದ ಪುರವೆ ಕೈಲಾಸಪುರವಯ್ಯಾ
ಅಯ್ಯಾ ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣಬಸವಣ್ಣನಿದ್ದ ಕ್ಷೇತ್ರವು
ಅವಿಮುಕ್ತ ಕ್ಷೇತ್ರವಾಗಿ
ಆನು ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು

ಎಂದು ಭಕ್ತಿಯಿಂದ ಬಸವಮಹಾಗುರುವಿಗೆ ತಲೆಬಾಗಿದಳು, ಮುಂದುವರೆದು ನುಡಿಯುತ್ತಾಳೆ.

ಅರಸಿ ತೊಳಲಿದಡಿಲ್ಲ, ಹರಿಸಿ ಬಳಲಿದಡಿಲ್ಲ
ಬಯಸಿ ಹೊಕ್ಕಡಿಲ್ಲ, ತಪಸ್ಸು ಮಾಡಿದಡಿಲ್ಲ
ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಕೈಗೂಡದು
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು (ವ-೩೯)

ಬಸವಮಹಾಮನೆಯಲ್ಲಿ ಮಹಾತಾಯಿ ಅಕ್ಕನಾಗಮ್ಮ, ಶರಣೆ ಗಂಗಾಂಬಿಕೆ, ನೀಲಾಂಬಿಕೆಯರು ಮಹಾದೇವಿಯಕ್ಕಳನ್ನು ಆತ್ಮೀಯತೆಯಿಂದ ಆದರೋಪಚಾರ ಮಾಡಿದರು. ಮದ್ಯಾಹ್ನದ ಸ್ನಾನ, ಪೂಜೆ-ಪ್ರಸಾದ ಮಾಡಿಸಿ, ವಿಶ್ರಾಂತಿಗೆ ಅನುಕೂಲ ಮಾಡಿದರು.

ಅಂದು ಸಂಜೆಯ ಅನುಭವ ಮಂಟಪದ ಅನುಭಾವಗೋಷ್ಠಿಗೆ ಶರಣೆ ಮಹಾದೇವಿಯಕ್ಕಳನ್ನು ಕರೆತರಲು ಪ್ರಭುದೇವರು ಸೂಚಿಸಿದ್ದರು.

೧೧. ಅನುಭವ ಮಂಟಪದಲ್ಲಿ ಮಹಾದೇವಿಯಕ್ಕ ಪ್ರಭುದೇವರೊಂದಿಗೆ ಸಂವಾದ:

ಪ್ರಪಂಚದ ಮೊಟ್ಟ ಮೊದಲನೆಯ ಪ್ರಜಾಪ್ರಭುತ್ವ ಮಾದರಿಯ ಸಂಸತ್ ಎಂದೇ ಖ್ಯಾತಿ ಪಡೆದಿರುವ, ಸಮಾಜೋಧಾರ್ಮಿಕ ಚಿಂತನೆಗಳ ಚರ್ಚೆ ನಡೆಯುವ, ಅನುಭಾವಗೋಷ್ಠಿಯ ನೆಲೆಯಾದ 'ಅನುಭವ ಮಂಟಪದಲ್ಲಿ' ಸಂಸ್ಥಾಪಕರಾದ ವಿಶ್ವಗುರು ಬಸವಣ್ಣನವರು, ಅನುಭವಮಂಟಪದ ಅಧ್ಯಕ್ಷರಾದ ಅಲ್ಲಮಪ್ರಭುದೇವರು, ಸಂಚಾಲಕರಾದ ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು, ಏಳುನೂರು ಮೇಲ್ಪಟ್ಟು ಶರಣಗಣ, (ಅಕ್ಕಮಹಾದೇವಿಯನ್ನು ಸೇರಿಸಿ ೭೭೦) ಶರಣ-ಶರಣೆಯರು ಕುತೂಹಲದಿಂದ, ಮಹಾದೇವಿಯಕ್ಕಳ ಆಗಮನ ನಿರೀಕ್ಷಿಸುತ್ತಿದ್ದರು.

ವಿಶ್ವಗುರು ಬಸವಣ್ಣನವರ ಮಹಾಮನೆಯಿಂದ ಮಹಾದೇವಿಯಕ್ಕಳನ್ನು ಅನುಭವಮಂಟಪದ ಮಹಾದ್ವಾರದ ಹತ್ತಿರ ಕರೆತಂದರು. ವೈರಾಗ್ಯವೇ ಮೂರ್ತಿ-ರೂಪಾಗಿ ಸಾಗಿ ಬಂದ ಮಹಾದೇವಿಯಕ್ಕ ಹಾಗೂ ಅವಳನ್ನು ನೋಡಲು ನೆರೆದು ಬಂದ ಜನಸಮೂಹ ಕಂಡು, ಮಹಾದ್ವಾರದಲ್ಲಿ ನಿಂತಿದ್ದ ಉಗ್ಘಡಿಸುವ ಗಬ್ಬಿದೇವಯ್ಯನೆಂಬ ಶರಣನು-

ಭಾವ ಭ್ರಮೆವಂತರು ಬಾರದಿರಿ,
ಜ್ಞಾನ ಹೀನರು ಬೇಗ ಹೋಗಿ,
ತ್ರಿವಿಧ ಮಲಕ್ಕೆ ಕಚ್ಚಿ ಮುಟ್ಟಿ ಹೊಡೆದಾಡುವವರತ್ತಲಿರಿ
ನಿರುತ ಸ್ವಯಾನುಭಾವರು ಬನ್ನಿ
ಪರಬ್ರಹ್ಮ ಸ್ವರೂಪರು ಬನ್ನಿ
ಏಕಲಿಂಗ ನಿಷ್ಠಾಪರರು ದೃಢವಂತರು ಬನ್ನಿ
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ
ಎಂದು ಎನಗೆ ಕೊಟ್ಟ ಕಾಯಕ
ಕೂಡಲಸಂಗಮದೇವರಲ್ಲಿ ಬಸವಣ್ಣ (ವ-೧೯೯)

ಎಂದು ಜಾಗಟೆ ಬಾರಿಸುತ್ತಾ ವಚನವನ್ನು ಉಗ್ಘಡಿಸಿದರು. ಜನರು ದೂರ ಸರಿದು ನಿಂತರು. ಮಹಾದೇವಿಯಕ್ಕಳನ್ನು ಕಿನ್ನರಯ್ಯ ಶರಣರೊಂದಿಗೆ ಅನುಭವಮಂಟಪದ ಮಹಾದ್ವಾರ ಹತ್ತಿರ ಬಂದು ಭಕ್ತಿಭಾವದಿಂದ ಕೈಮುಗಿದು ತಲೆಬಾಗಿ ಒಳಗೆ ಪಾದವಿರಿಸುತ್ತಲೇ, ಶರಣ ಮಡಿವಾಳ ಮಾಚಿದೇವರು ಶುಭ್ರವಾದ ಮಡಿಯನ್ನು ಹಾಸಿದರು. ಮಹಾದೇವಿಯಕ್ಕಳು ಆ ಮಡಿಯ ಮೇಲೆ ಪಾದವಿರಿಸಿ ನಡೆಯದೆ, ಅದನ್ನು ಕೈಯಿಂದೆತ್ತಿ ಸರ್ವಾಂಗಕ್ಕೆ ಹೊದೆದುಕೊಂಡು, ಶರಣೆಂದು ಆ ಮಡಿ ಬಟ್ಟೆಯನ್ನು ಹಾಸಿದ ಶರಣರ ಕೈಗೆ ನೀಡಿದಳು. ಬಸವಣ್ಣ ಮೊದಲಾದ ಶರಣ-ಶರಣೆಯರು ಅಕ್ಕನ ಸದುವಿನಯ-ಸದಾಚಾರ ಕಂಡು ಬೆರಗಾದರು. ಸದ್‌ಭಕ್ತ ಶರಣರಿಗೆ ಕೈಮುಗಿದು ನುಡಿದಳು-

ಅಯ್ಯಾ ನಿಮ್ಮ ಸಜ್ಜನ ಸದ್ಭಕ್ತರ ಕಂಡೆನಾಗಿ
ಎನ್ನ ಕಂಗಳ ಪಟಲ ಹರಿಯಿತ್ತಿಂದು.
ಅಯ್ಯಾ ನಿಮ್ಮ ಸಜ್ಜನ ಸದ್ಭಕ್ತರ ಶ್ರೀಚರಣಕ್ಕೆರಗಿದೆನಾಗಿ
ಎನ್ನ ಹಣೆಯ ಲಿಖಿತ ತೊಡೆಯಿತ್ತಿಂದು.
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಸಂಗನಬಸವಣ್ಣನ ಪಾದವ ಕಂಡು
ಮಿಗೆ ಮಿಗೆ ನಮೋ ನಮೋ ಎನುತಲಿರ್ದೆನಯ್ಯಾ (ವ-೩೧)

ಈ ರೀತಿಯಾಗಿ ಮಹಾದೇವಿಯಕ್ಕ ಭಕ್ತಿಭಾವದಿಂದ ಬಸವಗುರುವಿನ ಶ್ರೀಪಾದಕ್ಕೆ ಶರಣೆಂದು ನಿಂದಿರಲು, ಬಸವಣ್ಣನವರು ಮಹಾದೇವಿಯಕ್ಕಳ ಆಧ್ಯಾತ್ಮಿಕ ನಿಲುವನ್ನು ಅನುಭವಮಂಟಪದ ಶೂನ್ಯಪೀಠದ ಅಧ್ಯಕ್ಷ ಅಲ್ಲಮಪ್ರಭುದೇವರಿಗೆ ತೋರಿಸಿ ನುಡಿಯುತ್ತಾರೆ–

ಬಸವಣ್ಣನವರು : ಕಾಯದ ಲಜ್ಜೆಯ ಕಲ್ಪಿತವ ಕಳೆದು
ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆಯೆಂದರಿದು
ತವಕದ ಸ್ನೇಹ ವ್ಯವಹಾರಕ್ಕೆ ಹೊಗದು
ಕೂಡಲಸಂಗಮದೇವಯ್ಯಾ
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ
ನಿಲವ ನೋಡಯ್ಯಾ ಪ್ರಭುವೆ (ವ.೧೧೪೪)

ಅಲ್ಲಮಪ್ರಭುದೇವರು ಮಹಾದೇವಿಯಕ್ಕಳ ಆಧ್ಯಾತ್ಮಿಕ ನಿಲುವನ್ನು ಭಾವಜ್ಞಾನದಿಂದ ಅರಿತರು.ಅನುಭವ ಮಂಟಪದ ಆದ್ಯರು, ವೇದ್ಯರು, ಸಾಧ್ಯರು ಎಂಬ ಸರ್ವ ಶರಣಗಣಂಗಳಿಗೆ ಮಹಾದೇವಿಯಕ್ಕಳ ಸಾಧನೆಯನ್ನು ತಿಳಿಯಪಡಿಸಲೋಸುಗ ಗಂಭೀರಭಾವತಾಳಿ ಪ್ರಶ್ನಿಸತೊಡಗಿದರು.

ಅಲ್ಲಮಪ್ರಭು : ಉದಮದದ ಯೌವನವನೊಳಕೊಂಡ ಸತಿ
ನೀನು ಇತ್ತಲೇಕೆ ಬಂದೆಯವ್ವಾ?
ಸತಿ ಎಂದಡೆ ಮುನಿವರು ನಮ್ಮ ಶರಣರು
ನಿನ್ನ ಪತಿಯ ಕುರುಹ ಹೇಳಿದಡೆ ಬಂದು ಕುಳ್ಳಿರು
ಅಲ್ಲದಡೆ ತೊಲಗು ತಾಯೆ
ನಮ್ಮ ಗುಹೇಶ್ವರನ ಶರಣರಲ್ಲಿ
ಸಂಗಸುಖ ಸನ್ನಿಹಿತವ ಬಯಸುವಡೆ
ನಿನ್ನ ಪತಿ ಯಾರೆಂಬುದ ಹೇಳಾ, ಎಲೆ ಅವ್ವಾ? (ವ.೬೫೯)

ಮಹಾದೇವಿಯಕ್ಕಳ ಉತ್ತರ :
ಆಡುವುದು, ಹಾಡುವುದು, ಹೇಳುವುದು, ಕೇಳುವುದು,
ನಡೆವುದು, ನುಡಿವುದು
ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ
ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು
(ವ. ೫೪)

ಅಲ್ಲಮಪ್ರಭುವಿನ ಪ್ರಶ್ನೆ :

ಕಾಯ ಸತಿಯೆಂದು ಹೇಸಿ ಕಳೆದೆ,
ವಾಯದ ಮನ ಮಾಯೆಯೆಂದು ಹೇಸಿ ಬಿಟ್ಟೆ
ವಾಯದ ಸತಿಯೆಂಬ ಸಂದೇಹವೆಮಗೇಕೆ?
ಸತಿಯರ ಗೋಷ್ಠಿ ವಿಷ ಕಾಣವ್ವಾ
ಗುಹೇಶ್ವರಲಿಂಗದಲ್ಲಿ
ನಿನ್ನ ಪತಿಯ ಕುರುಹ ಹೇಳಾ, ಎಲೆ ಅವ್ವಾ? (ವ.೧೧೦೬)

ಮಹಾದೇವಿಯಕ್ಕಳ ಉತ್ತರ :

–೧–

ಹರನೆ ನೀನೆನಗೆ ಗಂಡನಾಗಬೇಕೆಂದು
ಅನಂತ ಕಾಲ ತಪಸಿದ್ದೆ ನೋಡಾ
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದಡೆ
ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು.
ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು
ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು [ವ–೪೦೮]

–೨–

ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ ಕಂಬ,
ಪವಳದ ಚಪ್ಪರವಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ
ಮದುವೆಯ ಮಾಡಿದರು
ಎಮ್ಮವರೆನ್ನ ಮದುವೆಯ ಮಾಡಿದರು
ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ
ಮದುವೆಯ ಮಾಡಿದರು [ವ–೨೭೩]

–೩–

ಗುರುವೆ ತೆತ್ತಿಗನಾದ, ಲಿಂಗವೆ ಮದುವಣಿಗನಾದ
ನಾನೇ ಮದುವಳಿಗೆಯಾದೆನು
ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿ–ತಂದೆಗಳು.
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ
ಇದು ಕಾರಣ, ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ
ಮಿಕ್ಕಿನ, ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೇ
[ವ–೧೯೬]

ಅಲ್ಲಮ ಪ್ರಭುದೇವರ ಪ್ರಶ್ನೆ :

ತಪ್ಪ ಹೊರಿಸಿ ಹೊರಟಿಹೆನೆಂಬುದು ಸತ್ಯವೆ ?
ತನು ಸೀರೆಯನಳಿದು ನಿರ್ವಾಣವಾದಲ್ಲಿ
ಮನದ ಭ್ರಾಂತು ನಿಶ್ಚಯವಾಗದು
ಕೇಶವೆಂಬ ಸೀರೆ ಅಂಗಕ್ಕೆ ಮರೆಯಾಯಿತ್ತು.
ಅಪಮಾನವೆಂತು ಹರಿಯಿತ್ತು ?
ಅದು ಗುಹೇಶ್ವರಲಿಂಗಕ್ಕೆ ಸಲ್ಲದ ವೇಷ ! [ವ-೧೨೨೭]

ಮಹಾದೇವಿಯಕ್ಕಳ ಉತ್ತರ :

ಕಾಯ ಕರ್ರನೆ ಕಂದಿದಡೇನಯ್ಯಾ ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ ? [ವ-೧೫೭]

ಅಲ್ಲಮಪ್ರಭುದೇವರ ಪ್ರಶ್ನೆ :

ದೇವನೊಲಿದ, ನೀನೊಲಿದೆ ಎಂಬುದು ಅದಾವುದಕ್ಕೆ ?
ಭಾವಶುದ್ಧವಾದಲ್ಲಿ ಸೀರೆಯನಳಿದು ಕೂದಲು ಮರೆಸಲೇತಕ್ಕೆ ?
ಅದು ಅಂತರಂಗದ ನಾಚಿಕೆ ಬಾಹ್ಯದಲ್ಲಿ ತೋರಿತು.
ಅದು ಗುಹೇಶ್ವರಲಿಂಗಕ್ಕೆ ಒಲವರವಲ್ಲ [ವ-೧೨೫೪]

ಮಹಾದೇವಿಯಕ್ಕಳ ಉತ್ತರ :

ಫಲ ಒಳಗೆ ಪಕ್ವವಾಗಿಯಲ್ಲದೆ
ಹೊರಗಣ ಸಿಪ್ಪೆ ಒಪ್ಪಗೆಡದು
ಕಾಮನ ಮುದ್ರೆಯ ಕಂಡು
ನಿಮಗೆ ನೋವಾದಿಹಿತೆಂದು
ಆ ಭಾವದಿಂದ ಮುಚ್ಚಿದೆ.
ಇದಕ್ಕೆ ನೋವೇಕೆ ? ಕಾಡದಿರಣ್ಣಾ,
ಚೆನ್ನಮಲ್ಲಿಕಾರ್ಜುನದೇವನ ಒಳಗಾದವಳ [ವ-೨೮೫]

ಅಲ್ಲಮಪ್ರಭುದೇವರ ಪ್ರಶ್ನೆ :

ನೀ ದೇವರೊಳಗೋ ? ದೇವರು ನಿನ್ನೊಳಗೋ ?
ಎಂಬ ಠಾವನರಿಯೆ.

ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಯಿತ್ತು
ಅದು ಗುಹೇಶ್ವರನೊಪ್ಪದ ಮಾತು [ವ-೧೨೯]

ಮಹಾದೇವಿಯಕ್ಕಳ ಉತ್ತರ :

ಗುಣ ದೋಷ ಸಂಪಾದನೆಯ ಮಾಡುವನ್ನಕ್ಕ
ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ
ಮೋಹದ ಮಂದಿರ, ಮದದಾವರಣ, ಮತ್ಸರದ ಹೊದಿಕೆ
ಅರಿವುದಕ್ಕೆ ಇಂಬಿಲ್ಲ ಕಾಣಿರಣ್ಣಾ [ವ-೯೧]

ಅಲ್ಲಮಪ್ರಭುದೇವರ ಪ್ರಶ್ನೆ :

ಕಾಮದಿಂದ ಖಂಡ, ಕ್ರೋಧದಿಂದ ಅಸ್ಥಿ,
ಲೋಭದಿಂದ ಸಕಲ ವಿಷಯಂಗಳು.
ಮೋಹದಿಂದ ನೋಡಿಹೆನೆಂಬುದೆಲ್ಲವೂ
ಕಾಮನ ಬಲೆಯೊಳಗು.
ಕಾಮನ ಗೆದ್ದ ಠಾವು ಯಾವುದು ಹೇಳಾ
ಗುಹೇಶ್ವರಲಿಂಗಕ್ಕೆ ? [ವ-೧೦೬೭]

ಮಹಾದೇವಿಯಕ್ಕಳ ಉತ್ತರ :

-೧-

ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ
ಜಲವರತ ತಟಾಕದಂತೆ, ಬೆಂದ ನುಲಿಯಂತೆ,
ಮತ್ತೆ ಹಿಂದಣ ಅಂಗ ಉಂಟೇ ಅಣ್ಣಾ,
ಚೆನ್ನಮಲ್ಲಿಕಾರ್ಜನನ ಅಂಗವೇ ಆಶ್ರಯವಾದವಳಿಗೆ
[ವ-೧೭೩]

-೨-

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ.
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ
ನಾನೊಲಿದೆ.
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು

ಚೆನ್ನಮಲ್ಲಿಕಾರ್ಜುನನೆಂಬ ಗಂಡನೆನಗೆ
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ
[ವ-೩೯೫]

ಅಲ್ಲಮಪ್ರಭುದೇವರ ಪ್ರಶ್ನೆ :

ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ
ರೂಪು ನಿರೂಪವನೊಡಗೂಡುವ ಪರಿ ಎಂತು ಹೇಳಾ ?
ಅಸಂಬಂಧ ಸಂಬಂಧವಾಗಿ ಇದೆ.
ದೇಹ ಇಂದ್ರಿಯವೆಂಬ ಜಾತಿ ಸೂತಕವಿರಲು
ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ [ವ-೧೪೭೨]

ಮಹಾದೇವಿಯಕ್ಕಳ ಉತ್ತರ :

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೇ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೇ ಲೇಸು ಕಂಡಯ್ಯಾ
ತಾಯಿ ರಕ್ಕಸಿಯಾದಂತೆ ಕಾಯವಿಕಾರವು
ಚೆನ್ನಮಲ್ಲಿಕಾರ್ಜನಯ್ಯಾ
ನೀನೊಲಿದವರ ಕಾಯಗೊಂಡಿದ್ದರೆನಬೇಡ [ವ-೪೧೭]

ಅಲ್ಲಮಪ್ರಭುದೇವರ ಪ್ರಶ್ನೆ :

ತನುವಿನ ಗುಣವ ವಿವರಿಸಿಹೆನೆಂದಡೆ
ಮನ ಶುದ್ಧವಾಗಬೇಕು.
ಮನದ ಗುಣವ ವಿವರಿಸಿಹೆನೆಂದಡೆ
ಇಂದ್ರಿಯಗಳು ಶುದ್ಧವಾಗಬೇಕು.
ತನು ಮನ ಇಂದ್ರಿಯಂಗಳು ಶುದ್ಧ ಸುಯಿಧಾನವಾಗಿ
ಲಿಂಗಮುಖಕ್ಕೆ ವೇದ್ಯವಾದಲ್ಲದೆ
ಗುಹೇಶ್ವರನ ಬೆರಸಬಾರದು ಕೇಳಾ ತಾಯೆ ! [ವ-೧೨೨೦]

ಮಹಾದೇವಿಯಕ್ಕಳ ಉತ್ತರ :

ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡೆನ್ನ
ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದೆನ್ನ
ಕಂಗಳು ಶುದ್ಧವಾಯಿತ್ತು ಸಕಲಗಣಂಗಳ ನೋಡಿಯೆನ್ನ

ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿಯೆನ್ನ.
ಭಾವನೆ ಎನಗಿದು ಜೀವನವು ಲಿಂಗತಂದೆ,
ನೆಟ್ಟನೆ ನಿಮ್ಮುವ ಪೂಜಿಸಿ ಭವಗೆಟ್ಟೆನು ಕಾಣಾ,
ಚೆನ್ನಮಲ್ಲಿಕಾರ್ಜುನಾ [ವ-೨೨೪]

ಅಲ್ಲಮಪ್ರಭುದೇವರ ಪ್ರಶ್ನೆ :

ಕಾಯ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು.
ಜೀವ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು
ಭಾವ ಶುದ್ಧವಾಯಿತ್ತೆಂದಡೆ ಲಿಂಗ ನೆಲೆಗೊಳ್ಳದು
ಗುಹೇಶ್ವರಲಿಂಗದಲ್ಲಿ ಶುದ್ಧ, ಸುಯಿಧಾನಿಯಾದೆನೆಂದಡೆ
ನಿಜವು ಸಾಧ್ಯವಾಗದು ಕೇಳಾ ಅವ್ವಾ [ವ-೧೧೦೫]

ಮಹಾದೇವಿಯಕ್ಕಳ ಉತ್ತರ :

ಕಾಯದೊಳಗೆ ಅಕಾಯವಾಯಿತ್ತು.
ಜೀವದೊಳಗೆ ನಿರ್ಜೀವವಾಯಿತ್ತು
ಭಾವದೊಳಗೆ ನಿರ್ಭಾವವಾಯಿತ್ತು
ನೆನಹಿನೊಳಗೆ ಮನ ಘನವಾಯಿತ್ತು
ಎನ್ನ ತಲೆ ಮೊಲೆಯ ನೋಡಿ ಸಲಹಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯನ ಧರ್ಮದವಳಾನು [ವ-೧೬೨]

ಅಲ್ಲಮಪ್ರಭುದೇವರ ಪ್ರಶ್ನೆ :

ಕೂಡಲಿಲಲ್ಲದ ಅಗಲಲಿಲ್ಲದ ಘನವ
ಕೂಡುವ ಪರಿ ಎಂತವ್ವಾ?
ಹೇಳಿದರೆ ಅದಕ್ಕದೆ ಕೊರತೆ
ಗುಹೇಶ್ವರಲಿಂಗವ ಬೇರೆ ಮಾಡಿ
ಬೆರೆಸುವ ಪರಿ ಎಂತು ಹೇಳಾ? [ವ-೧೧೨೦]

ಮಹಾದೇವಿಯಕ್ಕಳ ಉತ್ತರ :

–೧–

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ?
ಅಂಗಕ್ಕೆ ಆತ್ಮಂಗೆ ಭಿನ್ನವುಂಟೇ ಅಯ್ಯಾ ?

ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯಕ್ಕೂ ನಿರವಯಕ್ಕೂ ಭಿನ್ನವಿಲ್ಲವಯ್ಯಾ
ಚೆನ್ನಮಲ್ಲಿಕಾರ್ಜುನದೇವರ ಬೆರೆಸಿ
ಮತಿಗೆಟ್ಟವಳನೇತಕ್ಕೆ ನುಡಿಸುವಿರಯ್ಯಾ? [ವ–೧೮೮]

–೨–

ಅಂಗವ ಲಿಂಗಮುಖದಲ್ಲಿ ಅರ್ಪಿಸಿ
ಅಂಗ ಅನಂಗವಾಯಿತ್ತು
ಮನವ ಅರಿವಿಂಗರ್ಪಿಸಿ, ಮನ ಲಯವಾಯಿತ್ತು
ಭಾವವ ತೃಪ್ತಿಗರ್ಪಿಸಿ, ಭಾವ ಬಯಲಾಯಿತ್ತು
ಅಂಗ ಮನ ಭಾವವವಳಿದ ಕಾರಣ
ಕಾಯ ಅಕಾಯವಾಯಿತ್ತು
ಎನ್ನ ಕಾಯದ ಸುಖ ಭೋಗವ
ಲಿಂಗವೆ ಭೋಗಿಸುವನಾಗಿ
ಶರಣಸತಿ– ಲಿಂಗಪತಿಯಾದೆನು
ಇದು ಕಾರಣ,
ಚೆನ್ನಮಲ್ಲಿಕಾಜುನನೆಂಬ ಗಂಡನ
ಒಳ ಹೊಕ್ಕು ಬೆರೆಸಿದನು [ವ–೬]

ಅಲ್ಲಮಪ್ರಭುವಿನ ಪ್ರಶ್ನೆ :

ನಾ ಸತ್ತೆನೆಂದು ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದಂಟೆ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ?
ಈ ಮಾತು ಒಪ್ಪವಲ್ಲ
ಗುಹೇಶ್ವರಲಿಂಗಕ್ಕೆ [ವ–೧೨೮೧]

ಮಹಾದೇವಿಯಕ್ಕಳ ಉತ್ತರ :

ಸತ್ತ ಹೆಣ ಕೂಗಿದುದುಂಟು
ಬೈಚಿಟ್ಟ ಬಯಕೆ ಕರೆದುದುಂಟು
ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು
ಇದು ನಿಶ್ಚಯಿಸಿ ನೋಡಿ ಚೆನ್ನಮಲ್ಲಿಕಾರ್ಜುನದೇವರಲ್ಲಿ
[ವ–೩೮೬]

ಅಲ್ಲಮಪ್ರಭುದೇವರ ಪ್ರಶ್ನೆ :

ಇದು ಎನಗೆ ಆಶ್ಚರ್ಯ ಹೇಳವ್ವ!
ಕಾಯವಿಲ್ಲದ ಸುಖವ, ಜೀವವಿಲ್ಲದ ಭವವ!
ಆ ಠಾವ ಹೇಳಾ ಗುಹೇಶ್ವರಲಿಂಗಕ್ಕೆ? [ವ-೯೨೮]

ಮಹಾದೇವಿಯಕ್ಕಳ ಉತ್ತರ :

ಮರೆದೊರಗಿ ಕನಸ ಕಂಡು ಹೇಳುವಲ್ಲಿ
ಸತ್ತ ಹೆಣ ಎದ್ದಿತ್ತು
ತನ್ನ ಋಣ ನಿಧಾನ ಎದ್ದು ಕರೆಯಿತ್ತು
ಹೆಪ್ಪಿಟ್ಟ ಹಾಲು ಗಟ್ಟಿ ತುಪ್ಪವಾಗಿ ಸಿಹಿಯಾಯಿತ್ತು
ಇದಕ್ಕೆ ತಪ್ಪ ಸಾಧಿಸಲೇಕೆ?
ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ? [ವ-೩೨೮]

ಅಲ್ಲಮಪ್ರಭುದೇವರು ಒಡಂಬಟ್ಟು ಹೇಳಿದ್ದು :

ಇದು ಲೇಸಾಯಿತ್ತು
ತುಂಬಿದ ಲೆಕ್ಕಕ್ಕೆ ಮತ್ತೊಂದೆಂದು ಕಡೆಗಾಣಿಸುವಂತೆ
ಸ್ಥಾಣುವಿನ ಮರೆಯ ಚೋರನಂತೆ
ಅಂಬುಧಿಯ ಕೊಂಬಿನಲ್ಲಿದ್ದ ವಿಹಂಗನಂತೆ
ಎಲ್ಲಿ ಬಂದಡೂ ಗುಹೇಶ್ವರನೆಂಬ ಭಾವ ಒಂದಾಯಿತ್ತು
[ವ-೯೨೯]

ಮಹಾದೇವಿಯಕ್ಕಳು ನಿರಹಂಭಾವದಿಂದ ನುಡಿದದ್ದು :

-೧-

ಎನಗೇಕಯ್ಯಾ? ನಾ ಪ್ರಪಂಚಿನ ಪುತ್ಥಳಿ.
ಮಾಯಿಕದ ಮಲಭಾಂಡ, ಆತುರದ ಭವನಿಳಯ
ಜಲಕುಂಭದ ಎಡೆಯಲ್ಲಿ ಒಸರುವ ನೆಲೆವನೆಗೇಕಯ್ಯಾ
ಬೆರಳು ತಾಳಹಣ್ಣು ಹಿಸುಕಿದಡೆ ಮೆಲಲುಂಟೆ?
ಬಿತ್ತೆಲ್ಲ ಜೀವ, ಅದರೊಪ್ಪದ ತೆರ ಎನಗೆ
ಎನ್ನ ತಪ್ಪನೊಪ್ಪಗೊಳ್ಳಿ
ಚೆನ್ನಮಲ್ಲಿಕಾರ್ಜುನದೇವರ ದೇವ ನೀವೆ ಅಣ್ಣಗಳಿರಾ
[ವ-೯೧]

-೨-

ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ ?
ಸಂದು ಸಂದು ಕಡಿದ ಕಬ್ಬನು ತಂದು
ಗಾಣದಲಿಕ್ಕಿ ಅರೆದಡೆ
ಬೆಂದು ಪಾಕಗುಡದೆ ಸಕ್ಕರೆಯಾಗಿ,
ನೊಂದೆನೆಂದು ಸಿಹಿಯ ಬಿಟ್ಟಿತ್ತೆ ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು
ಮುಂದಿಳುಹಲು ನಿಮಗೇ ಹಾನಿ
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ
ನೀ ಕೊಂದಡೆಯೂ ಶರಣೆಂಬುದ ಮಾಣೆ [ವ-೧೯]

ಅಲ್ಲಮಪ್ರಭುದೇರು ಆನಂದದಿಂದ ಕೊಂಡಾಡಿದ್ದು :

ಅಂಗ ಅಂಗನೆಯ ರೂಪಲ್ಲದೆ
ಮನ ವಸ್ತು ಭಾವದಲ್ಲಿ ಬೆಚ್ಚಂತಿಪ್ಪುದು
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ ಅಕ್ಕಾ !
ಗುಹೇಶ್ವರಲಿಂಗದಲ್ಲಿ ಉಭಯನಾಮವಳಿದೆ
ಎನ್ನಕ್ಕಾ. [ವ-೬೫]

ಅಕ್ಕ ಮಹಾದೇವಿಯು ವಿನಯದಿಂದ ನುಡಿದುದು :

ಅಂಗಸಂದಲ್ಲಿ ಲಿಂಗಸಂಗಿಯಾದೆನು
ಲಿಂಗಸಂಗದಲ್ಲಿ ಅಂಗಸಂಗಿಯಾದೆನು
ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು
ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು
ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರೆಸಿದ ಬಳಿಕ
ಎನ್ನ ನಾನು ಏನೆಂದೂ ಅರಿಯೆನಯ್ಯಾ [ವ-೮]

ಅಕ್ಕಮಹಾದೇವಿಯ ಈ ನುಡಿಯನ್ನು ಕೇಳಿ ಬಸವಣ್ಣನವರು ನುಡಿಸಿ ನೋಡಿದ ಪ್ರಸ್ತಾವದ ವಚನ:

ಬಸವಣ್ಣವರು :

ಅಂಗದಲ್ಲಿ ಲಿಂಗಸಂಗ,
ಲಿಂಗದಲ್ಲಿ ಅಂಗಸಂಗವ ಮಾಡಿಹೆನೆಂದಡೆ
ಸಂದು ಭೇದವಳಿದ ಪರಿ ಎಂತು ಹೇಳಾ ?
ಅಂಗದಲ್ಲಿ ಸಂಗವ ಮಾಡಿಹೆನೆಂದಡೆ
ಮುಂದುಗೆಡಿಸಿ ಕಾಡುವನು ಶಿವನು
ಕಾಮವೆಂಬ ಬಯಕೆಯಲ್ಲಿ
ಅಳಲಿಸುವ ಬಳಲಿಸುವ ಶಿವನು
ಲಿಂಗದಲ್ಲಿ ಅಂಗವ ತಂದು ನಿಕ್ಷೇಪಿಸಿಹೆನೆಂದಡೆ,
ಅಂಗದಿಂದ ಅತ್ತತ್ತಲೋಸರಿಸಿ ಓಡುವನಯ್ಯಾ ಶಿವನು
ಹೆಣ್ಣು ಗಂಡಾದಡೆ ಸಂಗಕ್ಕೆ ಒಲಿವನು ಕೇಳಾ ಶಿವನು
ಕೂಡಸಂಗಮದೇವರ ಬೆರಸುವಡೆ
ಭಿನ್ನವಿಲ್ಲದೆ ಕಲಿಯಾಗಿರಬೇಕು, ಕೇಳಾ ಅವ್ವಾ [ವ–೯೬೫]

ಅಕ್ಕ ಮಹಾದೇವಿಯು ಭಕ್ತಿಯಿಂದ ನುಡಿದುದು :

ಕಾಮನ ಗೆಲಿದೆನು ಬಸವಣ್ಣಾ, ನಿಮ್ಮ ದಯದಿಂದ.
ಸೋಮಧರನ ಹಿಡಿತಪ್ಪೆನು ಬಸವಣ್ಣಾ
ನಿಮ್ಮ ಕೃಪೆಯಿಂದ.
ನಾಮದಲ್ಲಿ ಹೆಣ್ಣು ರೂಪಲ್ಲದೆ ಭಾವಿಸಲು ಗಂಡುರೂಪು
ನೋಡಾ, ಬಸವಣ್ಣಾ ನಿಮ್ಮ ದಯದಿಂದ,
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಕೂಡಿ,
ಎರಡರಿಯದೆ ಮರೆದೆನಯ್ಯಾ ಬಸವಣ್ಣಾ
ನಿಮ್ಮ ದಯದಿಂದ [ವ–೧೫೫]

ಬಸವಣ್ಣನವರು ಮೆಚ್ಚಿ ನುಡಿದುದು :

ಹೆಂಗೂಸಿನಂಗವ ನೋಡಿರೆ, ಪುರಾತನರು
ಬಾಲತನದಂಗವ ನೋಡಿರೆ, ಪುರಾತನರು
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ,
ಲಿಂಗವಂತರು.
ತನ್ನಲ್ಲಿ ತಾನು ನಿಶ್ವಯವಾಗಿ
ಭಾಷೆ ಬೀಸರವೋಗದೆಯಿಪ್ಪ ಇರವು
ಕೂಡಲಸಂಗಮದೇವರಲ್ಲಿ
ನಮ್ಮ ಮಹಾದೇವಿಯಕ್ಕಂಗಾಯಿತ್ತು [ವ–೧೪೦೪]

ಅಕ್ಕ ಮಹಾದೇವಿಯ ಸದುವಿನಯದ ನುಡಿಗಳು :

-೧-

ಬಸವಣ್ಣಾ, ನಿಮ್ಮಂಗದಾಚಾರವ ಕಂಡು
ಎನಗೆ ಲಿಂಗಸಂಗವಾಯಿತ್ತಯ್ಯಾ
ಬಸವಣ್ಣಾ, ನಿಮ್ಮ ಮನದ ಸುಜ್ಞಾನವ ಕಂಡು
ಎನಗೆ ಜಂಗಮಸಂಬಂಧವಾಯಿತ್ತಯ್ಯಾ
ಬಸವಣ್ಣಾ, ನಿಮ್ಮ ಸದ್ಭಕ್ತಿಯ ತಿಳಿದು
ಎನಗೆ ನಿಜವು ಸಾಧ್ಯವಾಯಿತ್ತಯ್ಯಾ
ಚೆನ್ನಮಲ್ಲಿಕಾರ್ಜನನ ಹೆಸರಿಟ್ಟ ಗುರು
ನೀವಾದ ಕಾರಣ, ನಿಮ್ಮ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು
ಕಾಣಾ ಸಂಗನಬಸವಣ್ಣಾ [ವ-೨೯೬]

-೨-

ಅಂಗದಲ್ಲಿ ಆಚಾರವ ತೋರಿದ
ಆ ಆಚಾರವೆ ಲಿಂಗವೆಂದರುಹಿದ
ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ
ಆ ಅರಿವೇ ಜಂಗಮವೆಂದು ತೋರಿದ
ಚೆನ್ನಮಲ್ಲಿಕಾರ್ಜುನಾ,
ಎನ್ನ ಹೆತ್ತ ತಂದೆ ಸಂಗನಬಸವಣ್ಣನು
ಎನಗೀ ಕ್ರಮವನರುಹಿದನಯ್ಯಾ [ವ-೨]

-೩-

ಎನ್ನ ಭಕ್ತಿ ಬಸವಣ್ಣನ ಧರ್ಮ
ಎನ್ನ ಜ್ಞಾನ ಪ್ರಭುದೇವರ ಧರ್ಮ
ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ
ಈ ಮೂವರು ಒಂದೊಂದ ಕೊಟ್ಟರೆನಗೆ
ಮೂರು ಭಾವವಾಯಿತ್ತು
ಆ ಮೂರನೂ ನಿಮ್ಮಲ್ಲಿ ಸಮರ್ಪಿಸಿದ ಬಳಿಕ
ಎನಗಾವ ಜಂಜಡವಿಲ್ಲ
ಚೆನ್ನಮಲ್ಲಿಕಾರ್ಜನದೇವರ ನೆನಹಿನಲ್ಲಿ
ನಿಮ್ಮ ಕರುಣದ ಕಂದನಾಗಿದ್ದೆ
ಕಾಣಾ ಸಂಗನಬಸವಣ್ಣಾ [ವ-೯೯]

೧೨. ಬಸವಾದಿ ಶರಣರಿಂದ ಗೌರವ–ಸ್ತುತಿ :

ಅಕ್ಕಮಹಾದೇವಿಯ ನಿರ್ವಾಣದ ಸಹಜ ನಿಲವ ಕಂಡು ಬಸವಾದಿ ಶರಣರು ಗೌರವಾದರಗಳಿಂದ ಸ್ತುತಿಸಿದುದು:

ಬಸವಣ್ಣನವರು :

ಅಜ್ಞಾನ ಹಿಂಗಿತ್ತು, ಅಹಂಕಾರವಡಗಿತ್ತು
ಅರಿಷಡ್ವರ್ಗಂಗಳು ಹರಿಹಂಚಾದವು
ಅಷ್ಟಮದಂಗಳು ಪಟ್ಟಪರಿಯಾದವು
ದಶವಾಯುಗಳು ವಶವರ್ತಿಯಾದವು
ಇಂದ್ರಿಯಗಳು ಬಂಧನವಡೆದವು
ಮನೋವಿಕಾರ ನಿಂದಿತ್ತು
ಕೂಡಲಸಂಗಮದೇವಾ
ನಿಮ್ಮಲ್ಲಿ ನಮ್ಮ ಮಹಾದೇವಿಯಕ್ಕಗಳ
ನಿರ್ವಾಣದ ಸಹಜ ನಿಲವ ಕಂಡು
ನಮೋ ನಮೋ ಎನುತಿರ್ದೆನಯ್ಯಾ ಪ್ರಭುವೆ [ವ–೯೨೬]

ಅಲ್ಲಮಪ್ರಭುದೇವರು :

ಆದಿಶಕ್ತಿ, ಅನಾದಿಶಕ್ತಿ, ಎಂಬರು,
ಆದನಾರು ಬಲ್ಲರಯ್ಯಾ ?
ಆದಿ ಎಂದಡೆ ಕುರುಹಿಂಗೆ ಬಂದಿತ್ತು
ಅನಾದಿ ಎಂದಡೆ ನಾಮಕ್ಕೆ ಬಂದಿತ್ತು
ಆದಿಯೂ ಅಲ್ಲ, ಅನಾದಿಯೂ ಅಲ್ಲ
ನಾಮವಿಲ್ಲದ ಸೀಮೆಯಿಲ್ಲದ ನಿಜಭಕ್ತಿಯೇ
ಚಿಚ್ಛಕ್ತಿಯಾಯಿತ್ತು ನೋಡಾ
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ
ಗುಹೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ
ಎಂಬೆನು [ವ–೮೯೯]

ಚೆನ್ನಬಸವಣ್ಣನವರು :

ಅಜಕೋಟಿ ಕಲ್ಪ ವರುಷದವರೆಲ್ಲ ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ ?
ನಡುಬಾಗಿ ಗುಡುಗೂರಿ ತಲೆ ನಡುಗಿ ನೆರೆ ತೆರೆಹೆಚ್ಚಿ
ಮತಿಗೆಟ್ಟು, ಒಂದನಾಡಹೋಗಿ ಒಂಬತ್ತನಾಡುವ

ಅಜ್ಞಾನಿಗಳೆಲ್ಲರೂ ಹಿರಿಯರೆ ?
ಅನುವನರಿದು, ಘನವ ಬೆರೆಸಿ,
ಹಿರಿದು ಕಿರಿದು ಎಂಬ ಭೇದವ ಮರೆದು
ಕೂಡಲಚೆನ್ನಸಂಗಯ್ಯನಲ್ಲಿ
ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು [ವ–೯೨೧]

ಸಿದ್ದರಾಮೇಶ್ವರರು :

ಅಹುದಹುದು ಮತ್ತೇನು ?
ಮರಹಿಂಗೆ ಹಿರಿದು ಕಿರಿದುಂಟಲ್ಲದೆ
ಅರುಹಿಂಗೆ ಹಿರಿದು ಕಿರಿದುಂಟೆ ಹೇಳಯ್ಯಾ ?
ಸಾವರಿಗೆ ಭಯವುಂಟಲ್ಲದೆ
ಅಜಾತಂಗೆ ಭಯವುಂಟೆ ಹೇಳಯ್ಯಾ ?
ಕಪಿಲಸಿದ್ದಮಲ್ಲಿನಾಥನಲ್ಲಿ
ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು
ಶುದ್ಧನಾದೆ ಕಾಣಾ ಚೆನ್ನಬಸವಣ್ಣಾ [ವ–೧೩೧೦]

ಚೆನ್ನಬಸವಣ್ಣನವರು :

ಆದ್ಯರ ಅರವತ್ತು ವಚನಕ್ಕೆ
ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ
ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ
ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ
ಕೂಡಲಚೆನ್ನಸಂಗಯ್ಯನಲ್ಲಿ ಮಹಾದೇವಿಯಕ್ಕಳ
ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ [ವ–೨೨೫]

ಮಡಿವಾಳ ಮಾಚಿದೇವರು :

ಕಾಮಿಯಾಗಿ ನಿಃಕಾಮಿಯಾದಳು
ಸೀಮೆಯಲಿರ್ದು ನಿಃಸ್ಸೀಮೆಯಾದಳು
ಭವಿಯ ಸಂಗವ ತೊರೆದು ಭವಭಾದೆಯ ಹರಿದಳು
ಬಸವಣ್ಣನೆ ಗತಿಯೆಂದು ಬರಲು
ನಾನು ಮಡಿಯ ಹಾಸಿ ನಡೆಸಿದೆ:

ನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು
ಆ ಮಡಿಯ ಬೆಳಗಿನೊಳಗೆ ನಿರ್ವಯಲಾದಳು
ಕಲಿದೇವರದೇವಾ
ಮಹಾದೇವಿಯಕ್ಕಳ ನಿಲವ ಬಸವಣ್ಣನಿಂದ
ಕಂಡು ಬದುಕಿದೆನಯ್ಯಾ ಪ್ರಭುವೆ [ವ-೧೨೦]

ಈ ರೀತಿಯಾಗಿ ಬಸವಾದಿ ಶರಣ ಗಣಂಗಳು ಮಹಾದೇವಿಯಕ್ಕಳ ನಿಜವೈರಾಗ್ಯ ಹಾಗೂ ಅನುಭಾವದ ನಿಲುವನ್ನು ಕಂಡು ಗೌರವ-ಪ್ರೀತಿ-ವಿಶ್ವಾಸಗಳಿಂದ ಸ್ತುತಿಸಿ ಅನುಭವ ಮಂಟಪದಲ್ಲಿ ಬರಮಾಡಿಕೊಂಡರು.

ಆಗ ಮಹಾದೇವಿಯಕ್ಕ ವಿನೀತಳಾಗಿ, ಶರಣರ ಶಿಶುವಾಗಿ ಬದುಕಿದೆನೆಂದು ತಿಳಿಸಿದಳು.

ಬಸವಣ್ಣನ ಮನೆಯ ಮಗಳಾದ ಕಾರಣ
ಭಕ್ತಿ ಪ್ರಸಾದವ ಕೊಟ್ಟನು
ಚೆನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟನು
ಪ್ರಭುದೇವರ ತೊತ್ತಿನ ತೊತ್ತಿನ ಮರಿದೊತ್ತಿನ
ಮಗಳಾದ ಕಾರಣ ಜ್ಞಾನ ಪ್ರಸಾದವ ಕೊಟ್ಟನು
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ
ಪ್ರಾಣ ಪ್ರಸಾದವ ಸಿದ್ಧಿಸಿಕೊಟ್ಟನು
ಮಡಿವಾಳಯ್ಯನ ಮನೆಯ ಮಗಳಾದ ಕಾರಣ
ನಿರ್ಮಲ ಪ್ರಸಾದವ ನಿಶ್ಚೈಸಿಕೊಟ್ಟನು
ಇಂತೀ ಅಸಂಖ್ಯಾತ ಗಣಂಗಳೆಲ್ಲರೂ
ತಮ್ಮ ಕರುಣದ ಕಂದನೆಂದು
ತಲೆದಡಹಿದ ಕಾರಣ
ಚೆನ್ನಮಲ್ಲಿಕಾರ್ಜನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು
[ವ-೨೯೪]

ಎಂದು ಭಕ್ತಿಭಾವದಿಂದ ನುಡಿಯುತ್ತಾ-

ಅನಿಮಿಷನಲ್ಲಮಯ್ಯ, ಮರುಳಶಂಕರಯ್ಯ
ಕೋಲ ಶಾಂತಯ್ಯ, ಮಾದಾರ ಧೂಳಯ್ಯ
ಮಿಂಡ ಮಲ್ಲಿನಾಥ, ಚೆನ್ನಬಸವಣ್ಣ, ಚೇರಮರಾಯ,
ತೆಲುಗ ಜೊಮ್ಮಣ್ಣ, ಕಿನ್ನರಯ್ಯ, ಹಲಾಯುಧ,

ದಾಸಿಮಯ್ಯಾ, ಭಂಡಾರಿ ಬಸವರಾಜ ಮುಖ್ಯವಾದ
ಚೆನ್ನಮಲ್ಲಿಕಾರ್ಜನನ ಶರಣರಿಗೆ ನಮೋ ನಮೋ ಎಂಬೆನು
[ವ-೧೯]

ಎಂದು ಅನುಭವ ಮಂಟಪದಲ್ಲಿ ಅನುಭಾವಗೋಷ್ಠಿಯಲ್ಲಿ ಉಪಸ್ಥಿತರಿದ್ದ ಸರ್ವ ಶರಣ ಸಂಕುಳಕ್ಕೆ ಶರಣುಗಳನ್ನು ಸಲ್ಲಿಸಿದಳು.

ಅಂದಿನ ಅನುಭಾವಗೋಷ್ಠಿಯಲ್ಲಿ ಉಪಸ್ಥಿತರಿದ್ದ ಶರಣ-ಶರಣೆಯರು ಅಕ್ಕಮಹಾದೇವಿ ತಾಯಿಯ ಲಿಂಗಾನುಭಾವದ ನುಡಿಗಳನ್ನು ಚಿಂತನ-ಮಂಥನ ಮಾಡುತ್ತ ತಮ್ಮ ತಮ್ಮ ನಿಜ ನಿವಾಸಗಳಿಗೆ ತೆರಳಿದರು. ಮಹಾಮನೆಯ ಮಹಾತಾಯಿ ಶರಣೆ ಅಕ್ಕನಾಗಮ್ಮನವರು, ಶರಣೆ ನೀಲಾಂಬಿಕೆ, ಶರಣೆ ಗಂಗಾಂಬಿಕೆಯರು ಮಹಾದೇವಿಯಕ್ಕಳನ್ನು ಬಸವಮಹಾಮನೆಗೆ ಕರೆದುಕೊಂಡು ಹೋದರು.

೧೩. ಕಲ್ಯಾಣದಲ್ಲಿ ಸಾಧನೆ-ಲಿಂಗಾನುಭಾವ ಸಿದ್ಧಿ :

ಅವ್ವ ನೀಲವ್ವಳ ಮೋಹದ ಮಗಳಾಗಿ, ಅಪ್ಪ ಬಸವಣ್ಣನ ಸುಚಿತ್ತದ ಪುತ್ರಿಯಾಗಿ, ಸದ್ಗುರು ಪ್ರಭುದೇವರ ಸತ್ಯದ ಸೊಸೆಯಾಗಿ, ಚೆನ್ನಮಲ್ಲಿಕಾರ್ಜುನನ ಅರ್ಧಾಂಗಿಯಾಗಿ ಕಲ್ಯಾಣದ ಶರಣ ಸಂಕುಳದಲ್ಲಿ ಆನಂದದಲ್ಲಿ ದಿನಂಗಳನು ಕಳೆಯತೊಡಗಿದಳು.

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ
ವಾಯುವಿನ ಚಲನೆ, ತರು ಗುಲ್ಮ ಲತಾದಿಗಳಲ್ಲಿಯ
ತಳಿರು ಪುಷ್ಪ ಷಡುವರ್ಣಂಗಳೆಲ್ಲ ಹಗಲಿನ ಪೂಜೆ
ಚಂದ್ರ ಪ್ರಕಾಶ, ನಕ್ಷತ್ರ, ಅಗ್ನಿ, ವಿದ್ಯುತ್ತಾದಿಗಳು
ದೀಪ್ತಮಯವೆನಿಸಿಪ್ಪುವೆಲ್ಲಾ ಇರುಳಿನ ಪೂಜೆ
ಹಗಲಿರುಳು ನಿನ್ನ ಪೂಜೆಯಲ್ಲಿ
ಎನ್ನ ಮರೆದಿಪ್ಪೆನಯ್ಯಾ, ಚೆನ್ನಮಲ್ಲಿಕಾರ್ಜನಾ [ವ-೨೩೭]

ಈ ರೀತಿ ಇಷ್ಟಲಿಂಗ ಪೂಜೆಯು ಭಾವ ವಿಕಾಸವಾಗುತ್ತಾ-ವಿಶ್ವಮಹಾಲಿಂಗ ಪೂಜೆಯಲ್ಲಿ ಪರಿವರ್ತನೆಗೊಂಡು ಮಹಾದೇವಿಯಕ್ಕ ಲಿಂಗಾನುಭಾವ ಸಿದ್ಧಿ ಪಡೆದಳು.

ಲಿಂಗಾನುಭಾವ ಸಿದ್ಧಿಯಾದ ಬಳಿಕ
ಮತ್ತೇಕಯ್ಯಾ ಕೂಟವೆಮಗೆ ? ಹೆರರೊಡನೆ
ಹೇಳಿರಯ್ಯಾ, ಎನ್ನ ದೇವ ಚೆನ್ನಮಲ್ಲಿಕಾರ್ಜುನನು
ಕರುಣಿಸಿದ ಬಳಿಕ ! [ವ-೩೫೭]

೧೪. ಅನುಭಾವ ಸಾಹಿತ್ಯ ರಚನೆ :

ಮೂವತ್ತಾರು ವರುಷ ಭಕ್ತಿಗೆ ಬೀಡಾಗಿದ್ದ ಕಲ್ಯಾಣದಲ್ಲಿ, ಇಪ್ಪತ್ತೇಳು ವರುಷ ಅನುಭವ ಮಂಟಪದಲ್ಲಿ ಶಿವಾನುಭವ ಗೋಷ್ಠಿ-ಚಿಂತನ ನಡೆದಿದ್ದವು. ಬಸವಾದಿ ಶರಣರ ಸಂಗದಲ್ಲಿ ಅಕ್ಕಮಹಾದೇವಿಯು ಆಧ್ಯಾತ್ಮ ಕೋಗಿಲೆಯಾಗಿ, ಪ್ರಪಂಚದ ಪ್ರಪ್ರಥಮ ಕವಿಯಿತ್ರಿಯಾಗಿ ಸ್ವಾನುಭಾವದ ವಚನಗಳನ್ನು ರಚಿಸಿದಳು. ಅಕ್ಕ ಮಹಾದೇವಿ ರಚಿಸಿದ ಸಾಹಿತ್ಯ ಕೆಳಗಿನಂತಿದೆ-

೧) ಷಟ್‌ಸ್ಥಲ ವಚನಗಳು [ಒಟ್ಟು-೪೩೨]
೨) ಸೃಷ್ಟಿಯ ವಚನ [೧]
೩) ಯೋಗಾಂಗ ತ್ರಿವಿಧಿ [ಒಟ್ಟು-೬೩ ತ್ರಿಪದಿಗಳು]
೪] ಪದಗಳು [ಸ್ವರವಚನಗಳು-೧೭]

ಇವುಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ.

೧) ಮಹಾದೇವಿಯಕ್ಕನ ವಚನಗಳು:

ಅಷ್ಟಾವರಣದ ಅರಿವು, ಪಂಚಾಚಾರದ ಆಚಾರ, ಷಟ್‌ಸ್ಥಲದ ಅನುಭಾವ ಅಂಗವಿಸಿಕೊಂಡು ಲಿಂಗಾಂಗಯೋಗದ ನಿಲುಕಡೆಯ ಸಾಧಿಸಿ, ಲಿಂಗಾಂಗ ಸಾಮರಸ್ಯದ ನಿಜಾನಂದವನ್ನು ತಮ್ಮ ಸ್ವಾನುಭಾವದ ವಚನಗಳಲ್ಲಿ ನಿರೂಪಿಸಿದ್ದಾಳೆ. ಮಹಾದೇವಿಯಕ್ಕ. ಸಧ್ಯ ಲಭ್ಯವಾಗಿ ಪ್ರಕಟವಾಗಿರುವ ೪೩೨ ವಚನಗಳು ಷಟ್‌ಸ್ಥಲ ಚೌಕಟ್ಟಿನಲ್ಲಿ ಪ್ರಕಟವಾಗಿವೆ.

ಅಕ್ಕಮಹಾದೇವಿಯ ವಚನಗಳಲ್ಲಿ ಜೀವನಾನುಭವ-ಶಿವಾನುಭವಗಳ ಸಂಗಮವಿದೆ. ಸಕಲಜೀವಾತ್ಮರ ಲೇಸು, ಮಾನವಕುಲದ ಕಲ್ಯಾಣವಿದೆ. ವಿಶ್ವಮಾನವರಿಗೆಲ್ಲ ಅಮೂಲ್ಯ ಸಂದೇಶವಿದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ ?
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದಡೆ
ಮನದಲಿ ಕೋಪವ ತಾಳದೆ
ಸಮಾಧಾನಯಾಗಿರಬೇಕು [ವ-೩೦೩]

ಮಾನವನು ಲೋಕದಲ್ಲಿ ಹುಟ್ಟಿ ಬಂದಿದ್ದಾನೆಂದ ಮೇಲೆ, ಸಹಜವಾಗಿ ಸ್ತುತಿ-ನಿಂದೆಗಳು ಬರುತ್ತವೆ. ಸ್ತುತಿ ಬಂದಾಗ ಹಿಗ್ಗದೇ, ನಿಂದೆ ಬಂದಾಗ ಕುಗ್ಗದೇ, ಮನದಲ್ಲಿ ಸಿಟ್ಟು ತಾಳದೇ ಶಾಂತಿ-ಸಮಾಧಾನದಿಂದಿರಬೇಕು ಎಂಬುದು ಮಹಾದೇಯಕ್ಕಳ ಅಮರ ಸಂದೇಶವಾಗಿದೆ.

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿರ್ದ ಮಹಾಘನವನರಿಯರು
ಚೆನ್ನಮಲ್ಲಿಕಾರ್ಜನಾ [ವ-೪೦೪]

ಒಂದು ಜಾವ ಎಂದರೆ ಮೂರು ತಾಸು, ನಾಲ್ಕು ಜಾವ ಎಂದರೆ ಹನ್ನೆರಡು ತಾಸು, ಬಹುತೇಕ ಈ ಲೋಕದ ಜನರು ಹಗಲು ಹನ್ನೆರಡು ತಾಸುಗಳನ್ನು ಹೊಟ್ಟೆಯ ಹೊರೆಯುವುದಕ್ಕೆ ಅಂದರೆ ಅನ್ನ-ಆಹಾರಕ್ಕಾಗಿಯೇ ಪರಿತಪಿಸುತ್ತಾರೆ. ಇರುಳು ಎಂದರೆ ರಾತ್ರಿ ಹನ್ನೆರಡು ತಾಸು ಕಾಮಾದಿ ವ್ಯಸನಗಳಿಗೆ ಪರಿತಪಿಸುತ್ತಾರೆ. ಇವರುಗಳಿಗೆ ತಮ್ಮೊಳಗಿರುವ ಮಹಾಘನವಸ್ತು, ಲಿಂಗಚೈತನ್ಯದ ಅರಿವಿಲ್ಲ. ಒಬ್ಬ ಅಗಸನು ಬಟ್ಟೆಯನ್ನು ತೊಳೆಯಲು ನದಿಯ ನೀರಿನಲ್ಲಿಯೇ ನಿಂತಿದ್ದಾನೆ. ಬಾಯಾರಿಕೆಯಾದಾಗ ತನ್ನ ಕಾಲಬುಡದಲ್ಲಿಯೇ ತಿಳಿಯಾದ ನೀರು ಹರಿಯುತ್ತಿದೆ ಎಂಬ ಪ್ರಜ್ಞೆಯಿಲ್ಲದೇ, ಬಾಯಾರಿಕೆ ತಣಿಸಲು ನೀರಿಗಾಗಿ ಪರಿತಪಿಸಿ ಸಾಯುವ ರೀತಿಯಲ್ಲಿ ಲೋಕದ ಜನರು ದೇವರು ತಮ್ಮಲ್ಲಿದ್ದಾನೆ ಎಂಬ ಪ್ರಜ್ಞೆಯಿಲ್ಲದೆ ತಿರು-ತಿರುಗಿ ಸಾಯುತ್ತಿದ್ದಾರೆ ಎಂದು ಅಕ್ಕ ಉಪದೇಶಿಸುತ್ತಾಳೆ.

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ ! ಶಿವನ ನೆನೆಯಿರೆ !
ಈ ಜನ್ಮ ಬಳಿಕಿಲ್ಲ.
ಚೆನ್ನಮಲ್ಲಿಕಾರ್ಜುನ ದೇವರ ನೆನೆದು
ಪಂಚಮಹಾಪಾತಕರೆಲ್ಲರೂ ಮುಕ್ತಿವಡೆದರಂದು : [ವ-೮೦]

ಮಹಾದೇವಿಯಕ್ಕಳೇ ಹೇಳಿರುವಂತೆ-ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ, ಎಂಬತ್ನಾಲ್ಕು ಲಕ್ಷ ಜೀವರಾಶಿಗಳ ಗರ್ಭದಲ್ಲಿ ಹಾಯ್ದು ತಿರುತಿರುಗಿ ಮಾನವ ಜನ್ಮ ಬಂದಿದೆ. ಈ ಮಾನವ ಜನ್ಮ ಮರಳಿ ಸಿಗಲಾರದು ಪ್ರತಿಯೊಬ್ಬರ ಆಯುಷ್ಯ ಎಷ್ಟು ಎಂದು ಯಾರಿಗೂ ತಿಳಿಯದು ಶಿವನು ಕೊಟ್ಟಿರುವ ಆಯುಷ್ಯ ರಾಶಿಯು ಉದಯ-ಅಸ್ತಮಾನಗಳೆಂಬ ಎರಡು ಕೊಳಗಗಳಿಂದ ಅಳೆದು.

ಮುಗಿಯುದ ಪೂರ್ವದಲ್ಲಿಯೇ ಶಿವನನ್ನು ನೆನೆಯಬೇಕು. ಪಂಚಮಹಾಪಾತಕ ಮಾಡಿದವರೂ ಕೂಡ ಪಶ್ಚಾತ್ತಾಪ ಪಟ್ಟು ಪರಮಾತ್ಮನ ನೆನೆದು ಮುಕ್ತಿ ಪಡೆದಿರುವರು ಎಂದು ಅಕ್ಕಮಹಾದೇವಿ ತಾಯಿ ತಿಳಿಸುತ್ತಾರೆ.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು
ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚೆನ್ನಮಲ್ಲಿಕಾರ್ಜುನಾ [ವ-೨೧೨]

ಮರೆವಿನ ಮಾನವ ಅರಿವಿನ ಶರಣನಾಗಬೇಕಾದರೆ ಸದ್ಗುರುವು ಕರುಣೆದೋರಿ ಇಷ್ಟಲಿಂಗ ಸಂಸ್ಕಾರವಿತ್ತು, ಸಾತ್ವಿಕ ಸದ್ಭಕ್ತ ಜೀವನ ಸಾಗಿಸಲು ಉಪದೇಶಿಸಿದ್ದಾನೆ. ಈ ಸದ್ಭಕ್ತನ ಕಾಯಕದಿಂದ ತನು ಕರಗಿದರೆ ಲಿಂಗಕ್ಕೆ ಮಜ್ಜನ, ಮನ ಕರಗಿದರೆ ಲಿಂಗಕ್ಕೆ ಪುಷ್ಪ, ಹದುಳಿಗನಾಗಿದ್ದರೆ ಗಂಧಾಕ್ಷತೆ, ಅರಿವು ಕಣ್ದೆರೆದರೆ ಆರತಿಯು, ಭಾವಶುದ್ಧವಿದ್ದರೆ ಧೂಪ, ಪರಿಣಾಮಿಯಾಗಿದ್ದರೆ ನೈವೇದ್ಯ, ಕಾಯಾ-ವಾಚಾ-ಮನಸಾ (ತ್ರಿಕರಣ) ಶುದ್ಧವಿದ್ದರೆ ತಾಂಬೂಲ, ಹೃದಯ ಕಮಲ ಅರಳಿದರೆ ದೇವನ ಇರುವಿಕೆ ಹೀಗಾದರೆ ಅದು ನಿಜವಾದ ಲಿಂಗಪೂಜೆ. ಅಂಥವರಲ್ಲಿ ದೇವನು ಇಂಬುಗೊಂಡಿರುತ್ತಾನೆ ಎಂದು ಅಕ್ಕ ಸ್ವಾನುಭಾವದಿಂದ ತಿಳಿಪಡಿಸುತ್ತಾಳೆ.

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ
ಮರುಳಾಗಿ ತೋರುವುದು
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ [ವ-೨೭೯]

ಬಸವಾದಿ ಶರಣರ ಪೂರ್ವದಲ್ಲಿ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಪುರಷನ ಆಧ್ಯಾತ್ಮ ಸಾಧನೆಗೆ ಸ್ತ್ರೀಯನ್ನು 'ಮಾಯೆ' ಎಂದು ಪರಿಗಣಿಸಲಾಗಿತ್ತು. ಈ ಅನಿಷ್ಟ-ಕೀಳು ಸಂಪ್ರದಾಯವನ್ನು ಖಂಡಿಸಿ, ಬಸವಣ್ಣನವರು ಸ್ತ್ರೀ-ಪುರುಷರಿಬ್ಬರೂ ಸಮಾನರು, ಶ್ರೇಷ್ಠ-ಕನಿಷ್ಠ ಎಂಬುದಿಲ್ಲ ಎಂಬ ಸಮಾನಗೌರವದ ಸಿದ್ಧಾಂತವನ್ನು ಆಚರಣೆಗೆ ತಂದರು. ಆದ್ದರಿಂದಲೇ ಅಕ್ಕಮಹಾದೇವಿತಾಯಿಯವರು ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿದರೆ, ಸ್ತ್ರೀಯ ಮುಂದೆ ಮಾಯೆಯು ಪುರುಷನೆಂಬ ಅಭಿಮಾನವಾಗಿ ಕಾಡುತ್ತದೆ. ಈ ಲೋಕವೆಂಬ ಜನರಿಗೆ ಮಾಯೆ ಮುಸುಕಿ ಶರಣ ಚಾರಿತ್ರ್ಯ ಮರುಳಾಗಿ ತೋರುತ್ತದೆ. ಆದರೆ ಶರಣರಿಗೆ ಮಾಯೆಯೂ ಇಲ್ಲ. ಮರವೆಯೂ ಇಲ್ಲ, ಅಭಿಮಾನವೂ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತಾರೆ.

ಒಬ್ಬಂಗೆ ಇಹವುಂಟು, ಒಬ್ಬಂಗೆ ಪರವುಂಟು
ಒಬ್ಬಂಗೆ ಇಹವಿಲ್ಲ, ಒಬ್ಬಂಗೆ ಪರವಿಲ್ಲ
ಒಬ್ಬಂಗೆ ಇಹಪರವೆರಡೂ ಇಲ್ಲ
ಚೆನ್ನಮಲ್ಲಿಕಾರ್ಜುನದೇವರ ಶರಣರಿಗೆ
ಇಹ ಪರವೆರಡೂ ಉಂಟು [ವ-೧೨೩]

ಇದು ಅಕ್ಕಮಹಾದೇವಿ ತಾಯಿಯವರ ಬೆಡಗಿನ ವಚನ. ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಅನೇಕ ಮತ-ಸಿದ್ಧಾಂತಗಳು ಪ್ರತಿಪಾದಿತವಾಗುತ್ತಾ ಬಂದಿವೆ. ಅವುಗಳ ವಿಚಾರಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ.

೧) ಒಬ್ಬಂಗೆ ಇಹವುಂಟು :- ಎಂದರೆ- ಚಾರ್ವಾಕಮತದವರು ಕೇವಲ ಲೌಕಿಕ ಜೀವನವನ್ನೇ ಸತ್ಯವೆಂದು ಸಾರಿ ಭೋಗಜೀವನ ಸಾಗಿಸುವವರು, ಇವರಿಗೆ 'ಇಹ' ಮಾತ್ರ ಇದೆ.

೨) ಒಬ್ಬಂಗೆ ಪರವುಂಟು :- ಎಂದರೆ ಬ್ರಹ್ಮೇವ ಸತ್ಯ ಜಗನ್ಮಿಥ್ಯಾ ಎಂಬ ವಾಗಾದ್ವೈತಿಗೆ ಇಹದ ಬದುಕು ಮಿಥ್ಯ ಹಾಗೂ ಪರದ ಬದುಕು ಸತ್ಯ ಎಂದು ಆಧ್ಯಾತ್ಮ ಜೀವನ ಸಾಗಿಸುವವರು. ಇವರಿಗೆ ಪರ ಮಾತ್ರ ಇದೆ.

೩) ಒಬ್ಬಂಗೆ ಇಹವಿಲ್ಲ :- ಅಂದರೆ ಕೇವಲಾದ್ವೈತಿಗೆ ಸಂಸಾರ, ಮಾಯೆ ಈತ ಮಾಯಾವಾದದ ಅನುಯಾಯಿಯು. ಈತನಿಗೆ ಈ ಇಹದ ಬದುಕಿಲ್ಲ.

೪) ಒಬ್ಬಂಗೆ ಪರವಿಲ್ಲ :- ಕೇವಲ ಇಂದ್ರಿಯಜನ್ಯ ಭೋಗಜೀವನ ಒಪ್ಪುವವರಿಗೆ ಇಂದ್ರಿಯಾತೀತ ಪಾರಮಾರ್ಥಿಕ ವಿಚಾರಗಳಿಲ್ಲ.

೫) ಒಬ್ಬಂಗೆ ಇಹಪರವೆರಡೂ ಇಲ್ಲಾ :– ಎಂದರೆ ನಿರಾಶಾವಾದಿ ವಿಚಾರಧಾರೆಯ ಮತದವನು. ಇಹದ ಬದುಕಿನಲ್ಲಿ ಆಸಕ್ತಿಯೂ ಇಲ್ಲ, ಪರದ ಬದುಕಿನ ಬಯಕೆಯೂ ಇಲ್ಲದವನು.

೬) ಶರಣರಿಗೆ ಇಹಪರವರೆಡೂ ಉಂಟು :– ಲೌಕಿಕ–ಪಾರಮಾರ್ಥಗಳೆರಡನ್ನು ಅಭೇದವಾಗಿ ಒಪ್ಪಿಕೊಂಡು ಸುಂದರ ಜೀವನ ನಡೆಸುವವರು. ಜಗತ್ತು ಸತ್ಯ, ದೇವನೂ ಸತ್ಯ, ಜೀವನವೂ ಸತ್ಯ ಎಂಬ ಸಿದ್ಧಾಂತದವರು ಶರಣರು ಎಂದು ಅಕ್ಕ ತಿಳಿಸುತ್ತಾರೆ.

೨) ಅಕ್ಕಗಳ ಸೃಷ್ಟಿಯ ವಚನ :–

ಆದಿ ಅನಾದಿ ನಿತ್ಯಾ ನಿತ್ಯವ ತಿಳಿಯಲರಿಯದೆ
ವಾಯಕ್ಕೆ ಪರಬ್ರಹ್ಮವ ನುಡಿವ
ವಾಯುಪ್ರಾಣಿಗಳವರೆತ್ತ ಬಲ್ಲರೋ
ಆ ಪರಬ್ರಹ್ಮದ ನಿಜದ ನಿಲವ ?
ಅದೆಂತೆಂದಡೆ :
ಆದಿಯೇ ದೇಹ, ಅನಾದಿಯೇ ನಿರ್ದೇಹ
ಆದಿಯೇ ಸಕಲ, ಅನಾದಿಯೇ ನಿಷ್ಕಲ,
ಆದಿಯೇ ಜಡ, ಅನಾದಿಯೇ ಅಜಡ,
ಆದಿಯೇ ಕಾಯ, ಅನಾದಿಯೇ ಪ್ರಾಣ
ಈ ಎರಡರ ಯೋಗವ ಭೇದಿಸಿ
ತನ್ನಿಂದ ತಾನೆ ತಿಳಿದು ನೋಡಲು–
ಆದಿ ಸಂಬಂಧವಪ್ಪ ಭೂತಂಗಳು ನಾನಲ್ಲ
ದಶವಿಧೇಂದ್ರಿಯಗಳು ನಾನಲ್ಲ
ಅಷ್ಟಮದಂಗಳು, ಸಪ್ತ ವ್ಯಸನಂಗಳು
ಅರಿಷಡ್ವರ್ಗಂಗಳು, ಷಡೂರ್ಮಿಗಳು, ಷಡ್‌ಭ್ರಮೆಗಳು,
ಷಡ್ಭಾವ ವಿಕಾರಂಗಳು, ಷಟ್‌ಕರ್ಮಂಗಳು, ಷಡ್ಧಾತುಗಳು,
ತನುತ್ರಯಂಗಳು, ಜೀವತ್ರಯಂಗಳು, ಭಾವತ್ರಯಂಗಳು
ಮನತ್ರಯಂಗಳು, ಗುಣತ್ರಯಂಗಳು, ಮಲತ್ರಯಂಗಳು,
ತಾಪತ್ರಯಂಗಳು, ಅಂತಃಕರಣಂಗಳು
ಇಂತಿವಾದಿಯಾಗಿ ತೋರುವ ತೋರಿಕೆಯೇನೂ
ನಾನಲ್ಲ, ನನ್ನವಲ್ಲ,
ಇಂತಿವೆಲ್ಲವೂ ನನ್ನಾಧೀನವಾಗಿಪ್ಪವು

ನಾನಿವರಾಧೀನದವಳಲ್ಲ..
ನಾನು ತೂರ್ಯಾ ತೂರ್ಯತೀತವಪ್ಪ
ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ವಸ್ತುವೇ
ತನ್ನಿರವೆಂದು ತಿಳಿಯೆ,
ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆ ಬಿಟ್ಟು
ನಿರಾಳದಲ್ಲಿ ನಿಜವನೈದಲರಿಯದೆ
ಮತ್ತೆಯುಂ ಭೌತಿಕ ತತ್ವ ಸಂಬಂಧಿಯಾಗಿ ಇರುತ್ತಿರಲು
ಇಂತೀ ತತ್ವದಾದಿ ತಾನೆಂತೆನಲು,
ಆ ಪರಬ್ರಹ್ಮವಪ್ಪ ನಿತ್ಯ ನಿರಾಳ ನಿಃಶೂನ್ಯಲಿಂಗವೆ
ತನ್ನ ಲೀಲಾ ವಿಲಾಸದಿಂದ ತಾನೆ ಸುನಾದ ಬಿಂದು ಪ್ರಕಾಶ
ತೇಜೋಮೂರ್ತಿಯಾಗಿ ನಿಂದು ಮಹಾಲಿಂಗವೆಂದೆನಿಸಿತ್ತು.
ಆ ಮಹಾಲಿಂಗವೇ ಪಂಚಸಾದಾಖ್ಯವೆಂದೆನಿಸಿತ್ತು.
ಆ ಪಂಚ ಸಾದಾಖ್ಯವೆ ಪಂಚಲಿಂಗ ಪ್ರಕಾಶವೆಂದೆನಿಸಿತ್ತು.
ಆ ಪಂಚಲಿಂಗ ಪ್ರಕಾಶವೇ ಪಂಚಮುಖವೆಂದೆನಿಸಿತ್ತು.
ಆ ಪಂಚಮುಖದಿಂದವೆ ಪಂಚಾಕ್ಷರಿಯುತ್ಪತ್ತಿ.
ಆ ಪಂಚಾಕ್ಷರಿಯಿಂದವೆ ಪಂಚಕಲೆಗಳುತ್ಪತ್ತಿ.
ಆ ಪಂಚಕಲೆಗಳಿಂದವೆ ಪಂಚಶಕ್ತಿಗಳುತ್ಪತ್ತಿ.
ಆ ಪಂಚಶಕ್ತಿಗಳಿಂದವೆ
ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳುತ್ಪತ್ತಿ.
ಆ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳಿಂದವೆ
ಪಂಚ ತನ್ಮಾತ್ರಯಂಗಳುತ್ಪತ್ತಿ.
ಆ ಪಂಚ ತನ್ಮಾತ್ರಯಂಗಳಿಂದವೆ ಪಂಚಭೂತಂಗಳುತ್ಪತ್ತಿ.
ಆ ಪಂಚ ಭೂತಂಗಳೇ ಪಂಚೀಕರಣವನೈದು
ಆತ್ಮಂಗೆ ಅಂಗವಾಯಿತ್ತು
ಆ ಅಂಗಕ್ಕೆ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಂಗಳು
ಪ್ರತ್ಯಂಗವೆಂದೆನಿಸಿತ್ತು.
ಇಂತು ದೇಹ ಸಂಬಂಧಮಂ
ಶಿವ ತನ್ನ ಚಿದಂಶಿಕನಪ್ಪ ಆತ್ಮಂಗೆ ಸಂಬಂಧಿಸಿದನಾಗಿ,
ಆ ಸಂಬಂಧಿಸಿದ ಕಾಯದ ಪೂರ್ವಾಶ್ರಯವು
ಎಲ್ಲಿ ಆಯಿತ್ತು ಅಲ್ಲಿಗೇ ಅಡಗಿಸಿ
ಆ ಕಾಯದ ಪೂರ್ವಾಶ್ರಯವನಳಿದು

ಮಹಾ ಘನಲಿಂಗವ ವೇಧಿಸಿ ಕೊಟ್ಟು
ಶಿವ ತಾನೆ ಗುರುವಾಗಿ ಬಂದು
ಮಹಾಘನಲಿಂಗವ ವೇಧಿಸಿಕೊಟ್ಟ ಪರಿ ಎಂತೆಂದಡೆ:
ಆತ್ಮಗೂಡಿ ಪಂಚಭೂತಂಗಳನೆ ಷಡ್ವಿಧ ಅಂಗವೆಂದೆನಿಸಿ
ಆ ಅಂಗಕ್ಕೆ ಆ ಕಲೆಗಳನೆ ಷಡ್ವಿಧ ಶಕ್ತಿಗಳೆಂದೆನಿಸಿ
ಆ ಶಕ್ತಿಗಳಿಗೆ ಷಡ್ವಿಧ ಭಕ್ತಿಯನಳವಡಿಸಿ
ಆ ಭಕ್ತಿಗಳಿಗೆ ಭಾವ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳನೆ
ಷಡ್ವಿಧ ಹಸ್ತಂಗಳೆಂದೆನಿಸಿ,
ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ
ಪಂಚಲಿಂಗಗಳನೆ ಷಡ್ವಿಧ ಲಿಂಗಂಗಳೆಂದೆನಿಸಿ
ಆ ಲಿಂಗಗಳಿಗೆ ಷಡಕ್ಷರಿಯನೆ ಷಡ್ವಿಧ ಮಂತ್ರಂಗಳೆಂದೆನಿಸಿ
ಆ ಮಂತ್ರ ಲಿಂಗಂಗಳಿಗೆ ಹೃದಯಗೂಡಿ
ಪಂಚೇಂದ್ರಿಯಂಗಳನೆ ಷಡ್ವಿಧ ಮುಖಂಗಳೆಂದೆನಿಸಿ
ಆ ಮುಖಂಗಳಿಗೆ ತನ್ಮಾತ್ರಯಂಗಳನೆ ದ್ರವ್ಯ ಪದಾರ್ಥಗಳೆಂದೆನಿಸಿ
ಆ ದ್ರವ್ಯ ಪದಾರ್ಥಗಳು, ಆಯಾಯಾ ಮುಖದ ಲಿಂಗಂಗಳಲ್ಲಿ
ನಿರಂತರ ಸಾವಧಾನದಿಂದ ಅರ್ಪಿತವಾಗಿ ಬೀಗಲೊಡನೆ
ಅಂಗಸ್ಥಲಂಗಳಡಗಿ ತ್ರಿವಿಧ ಲಿಂಗಾಂಗ ಸ್ಥಲಂಗಳುಳಿದು
ಕಾಯ ಗುರು, ಪ್ರಾಣಲಿಂಗ, ಜ್ಞಾನ ಜಂಗಮ
ಗುರುವಿನಲ್ಲಿ ಶುದ್ಧ ಪ್ರಸಾದ, ಲಿಂಗದಲ್ಲಿ ಸಿದ್ಧ ಪ್ರಸಾದ
ಜಂಗಮದಲ್ಲಿ ಪ್ರಸಿದ್ಧ ಪ್ರಸಾದ
ಇಂತೀ ತ್ರಿವಿಧ ಪ್ರಸಾದವು ಏಕಾರ್ಥವಾಗಿ
ಮಹಾಘನ ಪರಿಪೂರ್ಣ ಪ್ರಸಾದ ಅಳವಟ್ಟ ಶರಣ
ಜ್ಞಾನಿಯಲ್ಲ, ಅಜ್ಞಾನಿ ಮುನ್ನವೇ ಅಲ್ಲ
ಶೂನ್ಯವಲ್ಲ, ನಿಃಶೂನ್ಯ ಮುನ್ನವೇ ಅಲ್ಲ
ದ್ವೈತಿಯಲ್ಲ, ಅದ್ವೈತಿ ಮುನ್ನವೇ ಅಲ್ಲ
ಇಂತೀ ಉಭಯಾತ್ಮಕ ತಾನೆಯಾಗಿ !
ಇದು ಕಾರಣ
ಇದರ ಆಗು-ಹೋಗು ಸಕೀಲ ಸಂಬಂಧವ
ಚೆನ್ನಮಲ್ಲಿಕಾರ್ಜನಯ್ಯಾ, ನಿಮ್ಮ ಶರಣರೆ ಬಲ್ಲರು.

ಅಕ್ಕಮಹಾದೇವಿ ತಾಯಿಯು, ಈ ವಚನದಲ್ಲಿ ಚೆನ್ನಬಸವಣ್ಣನವರ 'ಕರಣ ಹಸಿಗೆ' ಯನ್ನು ಅರಿತು-ಅಂಗವಿಸಿಕೊಂಡು ಅದರ ಸಾರಸತ್ವವನ್ನು ತಮ್ಮ ಈ ಒಂದು ವಚನದಲ್ಲಿ ನಿರೂಪಿಸಿದ್ದಾರೆ.

ಆದಿ-ಆಧಾರವಿಲ್ಲದಂದು, ಸುರಾಳ-ನಿರಾಳವಿಲ್ಲದಂದು ಶೂನ್ಯ-ನಿಃಶೂನ್ಯವಿಲ್ಲದಂದು ಆ ಪರಾತ್ಪರ ಪರವಸ್ತು (ಪರಬ್ರಹ್ಮ, ಪರಶಿವ) ತನ್ನ ಲೀಲಾ ವಿಲಾಸದಿಂದ ಚಿನ್ನಾದ- ಚಿದ್ಬಿಂದು-ಚಿತ್ಕಲೆಯ ಮೂಲಕ ಬ್ರಹ್ಮಾಂಡ-ಪಿಂಡಾಂಡಗಳನ್ನು ಸೃಷ್ಟಿಸಿತು. ಇದರ ಒಡಲೊಳಗೆ ಅದ್ಭುತವಾದ ತತ್ವಂಗಳನಿರಿಸಿತು. ಇವುಗಳ ಸಕೀಲ ಸಂಬಂಧವನ್ನು ಲಿಂಗಾನುಭಾವಿಗಳಾದ ಶರಣರೆ ಬಲ್ಲರು ಎಂಬುದನ್ನು ಮಹಾದೇವಿಯಕ್ಕನವರು ತಿಳಿಸಿದ್ದಾರೆ.

೩) ಅಕ್ಕಗಳ ಯೋಗಾಂಗ ತ್ರಿವಿಧಿ :

ಅಷ್ಟಾವರಣವೆ ಅಂಗವಾಗಿ, ಪಂಚಾಚಾರವೆ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿಪ್ಪ ಅರಿವು-ಆಚಾರ-ಅನುಭಾವ ಸಂಪನ್ನ ಇಷ್ಟಲಿಂಗ ಪರಂಪರರೆಯ ವಿಶ್ವ ವಿನೂತನವಾದ ಲಿಂಗಾಯತ ಧರ್ಮ-ಸಿದ್ಧಾಂತ-ಲಿಂಗಾಂಗಯೋಗವನ್ನು ೧೨ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ೧೨ ವರುಷಗಳ ಕಾಲ ಕಪ್ಪಡಿಸಂಗಮದಲ್ಲಿ ಸಾಧನೆಗೈದು, ಸಾಧಿಸಿ ಲೋಕಕ್ಕೆ ಕರುಣಿಸಿದರು. ಸ್ತ್ರೀ-ಪುರುಷರೆಂಬ ಭೇಧವಿಲ್ಲದೆ ಪ್ರತಿಯೊಬ್ಬ ಸಾಧಕನು ಬಸವಗುರು ಕರುಣೆಯಿಂದ ಇಷ್ಟಲಿಂಗ ಸಂಸ್ಕಾರ ಹೊಂದಿ, ಲಿಂಗದ ನೆಲೆ ಕಲೆಗಳನ್ನು ಅರಿತು ಲಿಂಗಾಂಗಯೋಗ(ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗವ ನೋಡುತ್ತಾ ತನು-ಮನ-ಭಾವಗಳಲ್ಲಿ ಇಷ್ಟ-ಪ್ರಾಣ-ಭಾವಲಿಂಗದ ಸಾಮರಸ್ಯ ಹೊಂದುವನು. ಷಡಂಗದಲ್ಲಿ ಷಡ್ಲಿಂಗೋಪಾಸನೆಯಗೈಯುತ್ತಾ ಲಿಂಗಾಂಗ ಯೋಗದಿ ಪರಮಾನಂದವನನುಭವಿಸಿ ಶಬ್ಧಮುಗ್ಧನಾಗುವನು. ಇಂತಹ ಪರಮಾನಂದವು ಮಹಾದೇವಿಯಕ್ಕಳ 'ಯೋಗಾಂಗ ತ್ರಿವಿಧಿ' ಯಲ್ಲಿ ಹೊರಹೊಮ್ಮಿದೆ.

ಎಲ್ಲ ದೇವರ ದೇವ ವಲ್ಲಭನೆ ಗುರು ಚೆನ್ನ
ಮಲ್ಲಿಕಾರ್ಜುನನೆ ಮನದೊಳಗೆ । ಇರು ಕಂಡ ।
ಬಲ್ಲಂತೆ ನಿಮ್ಮ ಸ್ತುತಿಸುವೆನು ॥ ೧ ॥

ಆಕಾಶದೊಳಗಣ ಜ್ಯೋತಿಯ ಪ್ರಭೆ ಬಂದು
ಲೋಕಂಗಳೊಳಗೆ ಮುಸುಕಲು । ಅದರೊಳಗೆ
ಏಕಾಂಗಿಯಾದಡವ ಯೋಗಿ ॥ ೨ ॥

ಅಷ್ಟದಳ ಕಮಲದ ಬಟ್ಟ ಬಯಲೊಳಗೊಂದು
ಮುಟ್ಟಬಾರದ ಘನವಿಹುದು । ಅದರೊಳಗೆ
ದೃಷ್ಟಿ ಇಟ್ಟವನೆ ನಿಜಮುಕ್ತ ॥ ೩ ॥

ಒಂದೆಂಬ ಮನೆಯನು ಮೂರುಭಾಗವ ಮಾಡಿ
ಮೂರು ಪುರುಷರಿಗೆ ಆಳವಡಿಸಿ । ಮೂವರನು
ಮೀರಿ ನಾನಳಿದು ಬಯಲಾದೆ ॥ ೪॥

ಕೋಟಿ ರವಿ ಶಶಿಗಳಿಗೆ ಮೀರಿದ ಪ್ರಭೆ ಬಂದು
ನಾಟಿತ್ತು ಎನ್ನ ಕರದೊಳಗೆ । ಅದರಿಂದ
ದಾಟಿದೆನು ಭವದ ಕುಳಿಗಳ ॥ ೫॥

ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
ಸುರಿವ ಅಮೃತವ ಸವಿದುಂಡ । ಕಾರಣವು
ತೊರೆದೆನು ಜನನ ಮರಣಗಳ ॥ ೬॥

ಒಂಬತ್ತು ದ್ವಾರದ ಇಂಬುಗಳ ಬಲಿಯುತ್ತ
ತುಂಬಿ ಸುಷುಮ್ನೆಯೊಳೊಮ್ಮನದಿ । ನೋಡಲ್ಕೆ
ಕುಂಭದೊಳಮೃತವು ಸುರಿಯಿತ್ತು ॥ ೭ ॥

ಪಶ್ಚಿಮದ ಕೊಳದಲ್ಲಿ ಅಚ್ಚ ತಾವರೆ ಅರಳಿ
ನಿಶ್ಚಲದ ಗಂಧವೆಸೆಯಲು । ಅದ ಕಂಡು
ಸಚ್ಚಿತ್ತದ ಭ್ರಮರ ಎರಗಿತ್ತು ॥ ೮ ॥

ಬೆಟ್ಟದ ಮೇಲಣ ಕಿಚ್ಚು ಸುಟ್ಟಿತು ಕಾನನವ
ಅಷ್ಟಮೃಗಜಾತಿ ಅಳಿದವು । ಅದ ಕಂಡು
ಬಟ್ಟ ಬಯಲೊಳಗೆ ಮರೆದೆನು ॥ ೯ ॥

ಕುಂಡಲಿಯ ಸರ್ಪ ತುಂಡ ಮೇಲಕೆ ತೆಗಿಯೆ
ಮಂಡಲ ಮೂರು ಬೆಳಗಾಗೆ । ನಡುವಣ
ಅಖಂಡ ಜ್ಯೋತಿಯಲಿ ಬಯಲಾದೆ ॥ ೧೦ ॥

ಅಷ್ಟಾವರಣದ ಹಣ್ಣು ಬಿಟ್ಟ ಬಯಲೊಳಗಿರಲು
ಅಷ್ಟಾಂಗಯೋಗವ ಮಾಡಿ । ಬಳಲುವರು
ದೃಷ್ಟಿಲಿರುವುದನು ಮರೆಯುವರು ॥ ೧೧ ॥

ನಡೆವೆನು ಲಿಂಗದ ಕೂಡೆ, ನುಡಿವೆನು ಲಿಂಗದೊಡನೆ
ಎಡೆಬಿಡದೆ ಬಪ್ಪ ವಿಷಯದ । ಭೋಗಂಗಳ
ಕೊಡುವೆನು ಲಿಂಗಮುಖಂಗಳಿಗೆ ॥ ೧೨ ॥

ಷಟ್‌ಚಕ್ರದೊಳಗಣ ಷಡ್ವಿಧಲಿಂಗಕ್ಕೆ
ಷಡ್ವಿಧೇಂದ್ರಿಯಗಳ ಮುಖಮಾಡಿ । ವಿಷಯಗಳ
ಷಡ್‌ಭಕ್ತಿಯಿಂದ ಕೊಡುತಿರ್ದೆ ॥ ೧೩ ॥

ಆಧಾರದೊಳಗಣ ಆದಿಯ ಲಿಂಗಕ್ಕೆ
ಮೇದಿನಿ ಘ್ರಾಣ ಮುಖ ಮಾಡಿ । ಗಂಧದ
ಮೋದವ ಕೊಡುವ ನಿಜಭಕ್ತ ॥ ೧೪ ॥

ಆರೆಸಳ ಕಮಲದಲಿ ತೋರುವ ಲಿಂಗಕ್ಕೆ
ಸಾರ ಜಿಹ್ವೆಗಳ ಮುಖ ಮಾಡಿ । ರಸಗಳ
ಪೂರೈಸಿ ಕೊಡುವ ನಿಜ ನಿಷ್ಠ ॥ ೧೫ ॥

ಪತ್ತೆಸಳ ಕಮಲದಲಿ ಗೊತ್ತಿನ ಲಿಂಗಕ್ಕೆ
ಮತ್ತೆ ನೇತ್ರಗಳ ಮುಖ ಮಾಡಿ । ರೂಪಿನ
ತುತ್ತುಗಳ ಕೊಡುವ ಅವಧಾನಿ ॥ ೧೬ ॥

ದ್ವಾದಶ ದಳ ಕಮಲದ ಮೋದದ ಜಂಗಮಕೆ
ಸಾದರದ ತ್ವಕ್ಕ ಮುಖ ಮಾಡಿ । ಸ್ಪರುಶನದ
ಸ್ವಾದವ ಕೊಡುವ ಅನುಭಾವಿ ॥ ೧೭ ॥

ಷೋಡಶ ದಳ ಕಮಲದಲಿ ಆಡುವ ಲಿಂಗಕ್ಕೆ
ಗಾಢದ ಶ್ರೋತ್ರ ಮುಖ ಮಾಡಿ । ಶಬ್ದವ
ನೀಡಿ ಕೊಡುತಿಹನು ಪರಿಣಾಮಿ ॥ ೧೮ ॥

ದ್ವಿದಳ ತ್ರಿಕೂಟದಲಿ ಹುದುಗಿದ ಲಿಂಗಕ್ಕೆ
ಸದಮಲದ ಹೃದಯ ಮುಖ ಮಾಡಿ । ತೃಪ್ತಿಯ
ಒದಗಿ ಕೊಡುತಿಹನು ಚದುರೈಕ್ಯ ॥ ೧೯ ॥

ಅಂಗದಾಶ್ರಯವಳಿದು ಲಿಂಗದಾಶ್ರಯವುಳಿದು
ಲಿಂಗದೊಳು ಮನವು ಒಡವೆರೆದ । ಕಾರಣವು
ಅಂಗಗುಣವೆನಗೆ ಇನಿತಿಲ್ಲ ॥ ೨೦ ॥

ಲಿಂಗವು ಬಂದೆನ್ನ ಅಂಗದೊಳು ನೆಲೆಸಲು
ಅಂಗವು ಲಿಂಗದೊಳಗಾದ । ಕಾರಣವು
ಹಿಂಗಿದವು ಎನ್ನ ಭವಗಳು ॥ ೨೧ ॥

ಎನ್ನ ಕಾಯವೆ ಗುರು ಎನ್ನ ಪ್ರಾಣವೆ ಲಿಂಗ
ಎನ್ನಂತರಾತ್ಮ ಚರಲಿಂಗ । ವಾಗಲು
ಇನ್ನುಂಟೆ ಎನಗೆ ತನುಮನವು ॥ ೨೨ ॥

ನಲ್ಲಳು ನಲ್ಲನ ಸುಖವ ಎಲ್ಲರಿಗೆ ಅರುಹುವಳೆ
ಬಲ್ಲಡೆ ಅದರ ತೆರನಂತೆ । ಲಿಂಗ ಸುಖ
ಬಲ್ಲವರು ಪರರಿಗುಸುರುವರೆ ॥ ೨೩ ॥

ಭಕ್ತರ ಮನೆಯಲ್ಲಿ ತೊತ್ತಾಗಿ ಇರಿಸೆನ್ನ
ಭಕ್ತರುಂಡುಳಿದ ವರಶೇಷ । ಗಳ ಕೊಂಬ
ನಿತ್ಯ ಸುಖವೆನಗೆ ಕೊಡು ಗುರುವೆ ॥ ೨೪ ॥

ಬಲ್ಲವರೆ ಬಲ್ಲರು ಎಲ್ಲರಿಗೆ ತಿಳಿಯದು
ಕಲ್ಲೊಳಗೆ ಅನಲ ಇರುವಂತೆ । ಇದರನುವ
ಬಲ್ಲವರಿಗರ್ಥ ತಿಳಿಯುವುದು ॥ ೨೫ ॥

ಯೋಗಾಂಗ ತ್ರಿವಿಧಿಯ ರಾಗದಿಂ ಬರೆದೋದೆ
ರೋಗ ಭವಬಾಧೇ ಪರಿವುದು । ಲಿಂಗದೊಳಗಾಗಿ
ಸುಖದಿಂದ ಮೆರೆವರು ॥ ೨೬ ॥

೬೭ ಯೋಗಾಂಗ ತ್ರಿವಿಧಿಯಲ್ಲಿ ೨೬ ತ್ರಿವಿಧಿಗಳನ್ನು ಆಯ್ದು, ಲಿಂಗಭಕ್ತರ ಅವಗಾಹನೆಗಾಗಿ ಇಲ್ಲಿ ಇಡಲಾಗಿದೆ.

೪) ಮಹಾದೇವಿಯಕ್ಕನ ಪದಗಳು (ಸ್ವರ ವಚನಗಳು)

ಅರಿವು–ಆಚಾರ–ಅನುಭಾವ ಸಂಪನ್ನವಾದ ಬಸವಾದಿ ಶರಣರು ವ್ಯಷ್ಟಿ–ಸಮಷ್ಟಿಯ ಕಲ್ಯಾಣಕ್ಕಾಗಿ ವಚನಗಳನ್ನು ಬರೆದಿರುವಂತೆ, ತಮ್ಮ ಹೃದಯದ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲೋಸುಗ ಕವಿತೆ (ಪದ)ಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಅವು 'ಸ್ವರವಚನಗಳು' ಎಂದು ಪ್ರಸಿದ್ಧವಾಗಿವೆ. ೧೫ನೇ ಶತಮಾನದ ಕಾಲಕ್ಕೆ ಇವನ್ನು ಕೀರ್ತನೆಗಳು ಎಂದೂ ವಿದ್ವಾಂಸರು ಕರೆಯುತ್ತಾ ಬಂದಿದ್ದಾರೆ. ಈ ಕವಿತೆಗಳನ್ನು ರಾಗ ಸಂಯೋಜನೆಗೊಳಿಸಿ, ತಾಳ–ಲಯಕ್ಕೆ ಅಳವಡಿಸಿ ಸಂಗೀತರೂಪದಲ್ಲಿ (ದಕ್ಷಿಣಾದಿ ಹಾಗೂ ಉತ್ತರಾದಿ) ಹಾಡುತ್ತಿರುವುದನ್ನು ಕಾಣುತ್ತೇವೆ.

ಅಕ್ಕಮಹಾದೇವಿಯವರ ೧೭ ಪದಗಳು ಸದ್ಯಕ್ಕೆ ಲಭ್ಯವಾಗಿವೆ.

೧.	ಪ್ರಾಣಲಿಂಗಾರ್ಚನೆ	ರಾಗ : ಲಲಿತೆ
೨.	ಶರಣನ ನಿಲವು	ರಾಗ : ಬವುಳಿ
೩.	ಅಂಬಿಗ	ರಾಗ : ನಾದರಾಮಕ್ರೀ
೪.	ಕರೆದು ಹೇಳಿ ಎಮ್ಮವರಿಗೆ	ರಾಗ : ನಾದರಾಮಕ್ರೀ
೫.	ಒಲ್ಲೆನೊಗೆತನವ	ರಾಗ : ಶಂಕರಾಭರಣ
೬.	ಗಂಡನ ಮನೆ ಬಿರಿಸು	ರಾಗ : ಶುದ್ಧ ಕಾಂಬೋಧಿ
೭.	ಆಪತ್ತಿಗೊಳಗಾದೆ	ರಾಗ : ಶುದ್ಧ ಕಾಂಬೋಧಿ
೮.	ತವರು ಮನೆ ಕಲ್ಯಾಣ	ರಾಗ : ಶುದ್ಧ ಕಾಂಬೋಧಿ
೯.	ಗಂಡನುಳ್ಳ ಗರತಿ	ರಾಗ : ದೇಸಿ
೧೦.	ನಮ್ಮ ಮನೆಯಲಿಂದು ಹಬ್ಬ	ರಾಗ : ದೇಸಿ
೧೧.	ಮೂಗುತಿ ಹೋಯಿತು	ರಾಗ : .....
೧೨.	ಕನಸಿನ ಸುಖ	ರಾಗ : ಶುದ್ಧ ಕಾಂಬೋಧಿ
೧೩.	ಕೈಯ ತೋರೆಯಮ್ಮ	ರಾಗ : ತೆಲುಗ ಕಾಂಬೋಧಿ
೧೪.	ಮನೆಗೇಕೆ ಬಾರೆ ?	ರಾಗ : ಮಧು ಮಾಧವಿ
೧೫.	ಮಾನ ಭಂಗವ ಮಾಡಿದ	ರಾಗ : ಪಹಡಿ
೧೬.	ನಿಜದುಯ್ಯಾಲೆ	ರಾಗ : ನಾರಾಯಣಿಗೌಳ
೧೭.	ಅರುಹಿಂದಲಾಚರಿಸಬೇಕು	ರಾಗ : ಪಹಾಡಿ

[ಕೃಪೆ: ಮಹಾದೇವಿಯಕ್ಕನ ವಚನಗಳು– ಸಂ.ಡಾ.ಆರ್.ಸಿ.ಹಿರೇಮಠ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮, ೧೯೭೩]

ಅಂಬಿಗ [ರಾಗ : ನಾದರಾಮಕ್ರೀ]

ನಂಬಿದೆ ಗುರುವೆ ನಂಬಿದೆ ಸ್ವಾಮಿ ನಂಬಿದೆ
ಅಂಬಿಕಾ ರಮಣ ನೀನಂಬಿಗ ॥ ಪ ॥

ಹೊಳೆಯ ಭರವ ನೋಡಂಬಿಗ
ಸೆಳಹು ಬಹಳ ಕಾಣಂಬಿಗ
ಸುಳುಹಿನೊಳಗೆ ಬಿದ್ದೆನಂಬಿಗ । ಎನ್ನ
ನೆಳೆದುಕೊಳ್ಳೊ ನೀನಂಬಿಗ ॥ ೧ ॥

ಆರು ತೆರೆಯು ನೋಡಂಬಿಗ । ಬಲು

ಮೀರಿ ಬರುತಲಿವೆ ಅಂಬಿಗ
ಹಾರಲೊದೆದು ಎನ್ನ ತಡಿಗೆ ಸಾರಿಸು ನೀ
ದೂರ ಮಾಡದಿರು ಅಂಬಿಗ ॥ ೨ ॥

ತುಂಬಿದ ಹರಿಗೋಲಂಬಿಗ । ಅದ
ಕೊಂಬತ್ತು ಛಿದ್ರ ನೋಡಂಬಿಗ
ಸಂಭ್ರಮವನು ನೋಡಂಬಿಗ ಇದ
ರಿಂಬನರಿದು ತೆಗೆಯಂಬಿಗ ॥ ೩ ॥

ಹತ್ತು ಹತ್ತು ನೋಡಂಬಿಗ
ಹತ್ತಿದರೈವರು ಅಂಬಿಗ
ಮುತ್ತಿಗೆಗೊಳಗಾದೆನಂಬಿಗ । ಎನ್ನ
ನೆತ್ತಿಕೊಳ್ಳೊ ನೀನಂಬಿಗ ॥ ೪ ॥

ಸತ್ಯವೆಂಬ ಹುಟ್ಟಂಬಿಗ ಸದ್
ಭಕ್ತಿಯೆಂಬ ಪಥವಂಬಿಗ
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿ ಮಂಟಪಕೊಯ್ಯೊ ಅಂಬಿಗ ॥ ೫ ॥

[ಕೃಪೆ: ಮಹಾದೇವಿಯಕ್ಕನ ವಚನಗಳು– ಸಂ.ಡಾ.ಆರ್.ಸಿ.ಹಿರೇಮಠ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮, ೧೯೭೩]

ಜೀವಾತ್ಮನು ಭವಸಾಗರದಿಂದ ದಾಟಿಸಲು ಸದ್ಗುರುವೆಂಬ ಅಂಬಿಗನಲ್ಲಿ ಪ್ರಾರ್ಥಿಸುವ ಹೃದಯದ ಬೇಡಿಕೆಯ ಚಿತ್ರಣ ಈ ಪದದಲ್ಲಿದೆ.

ಸಂಸಾರವೆಂಬ ಹೊಳೆ (ನದಿ)ಯ ಪ್ರವಾಹ ತೀವ್ರವಾಗಿದೆ, ಅದರಲ್ಲಿ ದುಷ್ಕ್ರಿಯೆಗಳ ಒತ್ತುಗಳಿವೆ, ತಿರುಗುಣಿಯ ಮಡುವು (ಸುಳುವು, ಸುಳಿ) ಗಳಿವೆ. ಇದರಲ್ಲಿ ಬಿದ್ದಿರುವ ನನ್ನನ್ನು (ಜೀವಾತ್ಮನನ್ನು) ಮೇಲಕ್ಕೆ ಎಳೆದುಕೊಳ್ಳು ಗುರುವೆ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ತೆರೆಗಳು ಒಂದರ ಮೇಲೊಂದು ಒತ್ತಿಕೊಂಡು ಬರುತ್ತಿವೆ. ಇವುಗಳನ್ನು ದೂರ ಮಾಡಿ, ನನ್ನನ್ನು ಮುಕ್ತಿಯೆಂಬ ದಡಕ್ಕೆ ತಲುಪಿಸು, ದೂರ ಮಾಡದಿರು ಗುರುವೆ.

ಈ ಶರೀರವೆಂಬ ನಾವೆಯು ೨೫ ತತ್ವಗಳಿಂದ ತುಂಬಿಕೊಂಡಿದೆ. ಅದಕ್ಕೆ ನವದ್ವಾರಗಳು (೨ ಕಣ್ಣುಗಳು, ೨ ಕಿವಿಗಳು, ೨ ಮೂಗಿನ ದ್ವಾರಗಳು, ಒಂದು ಬಾಯಿ, ಒಂದು ಗುದ, ಒಂದು ಗುಹ್ಯ, ಹೀಗೆ ಒಟ್ಟು ಒಂಬತ್ತು ದ್ವಾರಗಳು

ಇರುತ್ತವೆ. ದಶವಿಧ ಇಂದ್ರಿಯಗಳು ಮನದೊಂದಿಗೆ ವಿಲಾಸಭೋಗದ ಸಂಭ್ರಮ-ದಲ್ಲಿವೆ. ಇದರ ಅನುವು-ಅವಕಾಶ ನೋಡಿಕೊಂಡು ನನ್ನನ್ನು ಹೊರಗೆ ತೆಗೆಗುರುವೆ.

ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚ ವಾಯುಗಳು, ಪಂಚ ವಿಷಯಂಗಳು, ಪಂಚ ಅಂತಃಕರಣಗಳು ಸೇರಿ ಒಟ್ಟು ೨೫ ತತ್ವಗಳು ಇವುಗಳ ಆಕ್ರಮಣ (ಪ್ರಪಂಚ)ಕ್ಕೊಳಗಾಗಿರುವೆ. ಇವುಗಳಿಂದ ನನ್ನನ್ನು ಮೇಲೆತ್ತಿಕೊಳ್ಳು ಗುರುವೆ.

ಸತ್ಯವೆಂಬ ಹುಟ್ಟು ಹಾಕುತ್ತಾ, ಸದ್‌ಭಕ್ತಿಯೆಂಬ ಪಥವಿಡಿದು ನಿತ್ಯ ಮುಕ್ತನಾಗಿರುವ ಚೆನ್ನಮಲ್ಲಿಕಾರ್ಜನನೆಂಬ (ಮಹಾಲಿಂಗ) ದೇವನ ಮುಕ್ತಿ ಮಂಟಪಕ್ಕೆ ಕರೆದೊಯ್ಯು ಗುರುವೆಂಬ ಅಂಬಿಗನೆ.

ಈ ರೀತಿಯಾಗಿ ಮಹಾದೇವಿಯಕ್ಕ ಸದ್ಗುರುವೆಂಬ ಅಂಬಿಗನಲ್ಲಿ ಮೊರೆ ಇಡುತ್ತಿದ್ದಾಳೆ.

ತವರು ಮನೆ ಕಲ್ಯಾಣ (ರಾಗ : ಶುದ್ಧ ಕಾಂಬೋಧಿ)

ಹೋದೆನೂರಿಗೆ ಇದ್ದೆ ನಾನಲ್ಲಿ
ಹೋದಡೆ ಮರಳಿ ಬಾರೆನವ್ವಾ ತಾಯಿ ।ಪ॥

ಅತ್ತೆ ಮಾವನು ಭಾವ ಮೈದುನ ಮಲಮಗ
ಚಿತ್ತವನೊರೆದು ನೋಡುವ ಗಂಡನು
ಕತ್ತಲೆಮನೆಯಲ್ಲಿ ಕರೆದು ಅನ್ನವನಿಕ್ಕಿ
ಅತ್ತಿಗೆ ಹತ್ತೆಂಟ ಬಯ್ವಳವ್ವ ತಾಯಿ ॥೧॥

ಅಯ್ವರು ಭಾವದಿರಯ್ವರು ನಗೆವೆಣ್ಣು
ಅಯ್ವರು ಕೂಡಿ ಕಾಡುವರು
ಹೊಯ್ವರು ಬಯ್ವರು ಮಿಗೆ ನೋಯ ನುಡಿವರೀ
ರಯ್ವರ ಕಾಟಕಾನಾರೆನವ್ವಾ ತಾಯಿ ॥೨॥

ಎನ್ನ ಮಾತಾ-ಪಿತರು ಅಮರಗಣಂಗಳು
ಎನ್ನ ತವರು ಮನೆ ಕಲ್ಯಾಣವು
ಕರುಣಿ ಚೆನ್ನಮಲ್ಲಿಕಾರ್ಜುನನ ಬಳಿಗೆ ಹೋದಡೆ
ಮರಳಿತ್ತ ಬಾರೆನವ್ವ ತಾಯಿ । ॥೩॥

ಈ ಸ್ವರವಚನದಲ್ಲಿ ಮಹಾದೇವಿಯಕ್ಕಳು ಕಲ್ಯಾಣದ ತವರುಮನೆಯಿಂದ ಮಹಾಲಿಂಗದ ಗಂಡನ ಮನೆಗೆ ಹೋಗಿದ್ದನ್ನು, ಅಲ್ಲಿಯ ಚಿತ್ರಣವನ್ನು, ಲೌಕಿಕ ಶಬ್ದಗಳ ಮೂಲಕ ಪಾರಮಾರ್ಥಿಕ ಶರಣಸತಿ-ಲಿಂಗಪತಿಯ ಸಂಸಾರ ಚಿತ್ರಣವನ್ನು ನೀಡಿರುವುದನ್ನು ಕಾಣುತ್ತೇವೆ. ಈ ಪಾರಮಾರ್ಥಿಕ ಬಾಳುವೆಯಲ್ಲಿ ಪ್ರಕೃತಿಯು ಅತ್ತೆ, ಪುರಷತತ್ವವೇ ಮಾವ, ಅಹಂಕಾರವೇ ಒರೆದು ನೋಡುವ ಜೀವೇಶನೇ ಗಂಡನು, ದೇಹದೊಳಗಣ ಅಜ್ಞಾನವೇ ಕತ್ತಲೆಯ ಮನೆ ; ಅಲ್ಲಿ ಮಾಯಾಶಕ್ತಿಯೆಂಬ ಅತ್ತಿಗೆಯು ಪಂಚಮಹಾಭೂತಂಗಳ ಅನ್ನವನಿಕ್ಕಿ (ಪ್ರಾರಬ್ಧ ಕರ್ಮಫಲ) ನೂರೆಂಟು ಬಯ್ಗುಳ ಬೈಯುತ್ತಾ ಶರಣಸತಿಯನ್ನು ಕಾಡುವಳು.

ಪಂಚ ಅಧಿದೈವಗಳು, ಪಂಚಶಕ್ತಿಯರೆಂಬ ಭಾವಂದಿರು-ನಗೆವೆಣ್ಣುಗಳು ಕಾಡುವರು, ಹೊಡೆಯುವರು. ಬಯ್ಯುವರು, ಮೇಲಿಂದ ಮೇಲೆ ನೋಯಿಸುವ ಬಿರುನುಡಿಗಳನ್ನಾಡುವರು. ಈ ಹತ್ತು ಜನರ ಕಾಟವನ್ನು ತಾಳಿಕೊಳ್ಳಲಾಗುತ್ತಿಲ್ಲ.

ಕಲ್ಯಾಣವೆನ್ನ ತವರುಮನೆ, ಬಸವಣ್ಣ-ನೀಲಮ್ಮನವರು ಹಾಗೂ ಅಮರಗಣಂಗಳೆನಿಸಿದ ಶರಣ-ಸಂಕುಳ ಎನ್ನ ಮಾತಾ-ಪಿತರು, ಅವರ ಮುದ್ದಿನ ಮಗಳಾಗಿ ಬೆಳೆದಿದ್ದ ನನಗೆ ಮದುವೆ ಮಾಡಿಕೊಟ್ಟರು. ಅತ್ತೆಯ ಮನೆಯ ಕಾಟ ಸಹಿಸಿ, ಒಮ್ಮೆ ಚೆನ್ನಮಲ್ಲಿಕಾರ್ಜುನನೆಂಬ ಲಿಂಗಪತಿಯ ಬಳಿಗೆ ಹೋಗಿ ಬೆರತೆನಾದರೆ ಮರಳಿ ಭವಸಂಸಾರಕ್ಕೆ ಬರಲಾರೆನೆಂದು ಮಹಾದೇವಿಯಕ್ಕಳು ಬೆಡಗಿನ ವಚನ ರೂಪದಲ್ಲಿ ಈ ಕವಿತೆ (ಪದ)ಯಲ್ಲಿ ಹೇಳಿರುವುದನ್ನು ಕಾಣುತ್ತೇವೆ. ಲಿಂಗಾಂಗಯೋಗ ಸಾಧನೆಯಲ್ಲಿ ಬರುವ ಎಡರು-ತೊಡರುಗಳ ಚಿತ್ರಣವಿಲ್ಲಿದೆ.

೧೫. ಕಲ್ಯಾಣ ಕ್ರಾಂತಿ : ಬಸವಾದಿ ಶರಣರು ಬಯಲಾದುದು :

ಸಾವಿರಾರು ವರುಷಗಳಿಂದ ಸಾಗಿಬಂದಿದ್ದ ವರ್ಣಭೇದ, ಆಶ್ರಮಭೇದ, ವರ್ಗಭೇದ, ಲಿಂಗಭೇದ, ಜಾತಿಭೇದಗಳೆಂಬ ಪಂಚಭೇದಗಳನ್ನು ನಿರಸನಗೈದು 'ಸಮತೆ-ಸ್ವಾತಂತ್ರ್ಯ-ಬಂಧುತ್ವ-ಮಾನವೀಯತೆ-ಜೀವದಯೆ' ಎಂಬ ಪಂಚತತ್ವಗಳ ತಳಹದಿಯ ಮೇಲೆ ಕಟ್ಟಿದ, ವ್ಯಷ್ಟಿ-ಸಮಷ್ಟಿಯ ಕಲ್ಯಾಣ ಬಯಸಿದ, ಕೂಡಲಸಂಗನ ರಾಜ್ಯವ ಹಂಚಿಕೊಳ್ಳಿ ನಿಮ ನಿಮಗೆಲ್ಲಾ ಎಂದು ಸಮಭೂಮಿ-ಸಮಪಾಲು-ಸಮಬಾಳುವೆಯ ಬದುಕು ರೂಪಿಸಿದ, ಕಾಯಕ-ದಾಸೋಹ-ಪ್ರಸಾದ ತತ್ವದ ನಿಜಾಚರಣೆಯ 'ಕಲ್ಯಾಣ ರಾಜ್ಯವು', ಪ್ರಜಾಪ್ರಭುತ್ವ ಮಾದರಿಯ ಅನುಭವ ಮಂಟಪವೆಂಬ ಪ್ರಪಂಚದ ಮೊಟ್ಟ ಮೊದಲ ಪಾರ್ಲಿಮೆಂಟ್ ಹೊಂದಿದ ಬಸವ ಸಾಮ್ರಾಜ್ಯವು, ಪಟ್ಟಭದ್ರ-ಪುರೋಹಿತಶಾಹಿ ಮನೋಭಾವನೆಯ ಜಾತ್ಯಾಂಧ ಕರ್ಮಠರಿಂದ, ಸ್ವಾರ್ಥಿ-ಸಮಯಸಾಧಕ ರಾಜಕೀಯ ದುಷ್ಟಕೂಟದ ಕುತಂತ್ರದಿಂದ ಕಲ್ಯಾಣದಲ್ಲಿ ಕ್ರಾಂತಿಯಾಗುವಂತಾಯಿತು.

ಜಾತ್ಯಾಂಧ ವರ್ಣವಾದಿಗಳಿಗೆ ಒಂದು ನೆಪಬೇಕಾಗಿತ್ತು. ೩೬ ವರುಷಗಳ ಕಾಲ ಭಕ್ತಿಗೆ ಬೀಡಾಗಿದ್ದ ಕಲ್ಯಾಣದಲ್ಲಿ ಕ್ರಿ.ಶ.೧೧೬೭ರಲ್ಲಿ ಒಂದು ಘಟನೆ ಜರುಗಿತು. ಪೂರ್ವಾಶ್ರಮದಲ್ಲಿ ದಲಿತ ಪಂಚಮವರ್ಣದ ಸಮಗಾರ ಹರಳಯ್ಯ ಹಾಗೂ ಕಲ್ಯಾಣಮ್ಮರ ಮಗ ಶೀಲವಂತನಿಗೆ ಪೂರ್ವಾಶ್ರಮದಲ್ಲಿ ಬ್ರಾಹ್ಮಣ ವರ್ಣದ ಮಧುವರಸರ ಮಗಳು ಲಾವಣ್ಯಳಿಗೆ ಕಲ್ಯಾಣದ ಅನುಭವ ಮಂಟಪದಲ್ಲಿ ಕಲ್ಯಾಣ-ವಿವಾಹ ಜರುಗಿತು. ಸಮಗಾರ ಹರಳಯ್ಯನ ಕುಟುಂಬದವರು ಹಾಗೂ ಬ್ರಾಹ್ಮಣ ಮಧುವರಸನ ಕುಟುಂಬ ಪರಿವಾರದವರು ಪೂರ್ವಾಶ್ರಮ ತೊರೆದು ಬಸವಗುರುವಿನ ಸಾನಿಧ್ಯದಲ್ಲಿ ಇಷ್ಟಲಿಂಗ ಸಂಸ್ಕಾರ ಹೊಂದಿ ಲಿಂಗಾಯತರಾಗಿದ್ದರು. ಬಸವಾದಿ ಶರಣರ ದೃಷ್ಟಿಯಲ್ಲಿ ಇದು ಜಾತಿರಹಿತವಾದ ಲಿಂಗಾಯತಧರ್ಮಿಯರ ಕಲ್ಯಾಣ-ಮಹೋತ್ಸವವಾದರೆ, ವರ್ಣವಾದಿಗಳ ದೃಷ್ಟಿಯಲ್ಲಿ ಇದು 'ವರ್ಣಾಸಂಕರ' ವೆನಿಸಿ, ಇದು 'ಅಂತರ್‌ಜಾತಿಯ ವಿವಾಹ' ವೆಂದು ಬೊಬ್ಬೆ ಹಾಕಿದರು. ಬಸವಾದಿ ಶರಣರ ಇದಕ್ಕೆ ಅಂಜಲಿಲ್ಲ, ಅಳುಕಲಿಲ್ಲ.

ವರ್ಣಾವಾದಿಗಳು- ಇದು ವರ್ಣಸಂಕರ, ಧರ್ಮಬಾಹಿರ ಎಂದು ರಾಜ ಬಿಜ್ಜಳನ ಕಿವಿಯೂದಿ, ವಿಚಾರಣೆಯ ನಾಟಕ ನಡೆಸಿದರು. ಬಸವಣ್ಣನವರು ಸಮಾನತೆಯ ತತ್ವಕ್ಕಾಗಿ ಪ್ರಧಾನಿ ಹುದ್ದೆ ತ್ಯಾಗ ಮಾಡಿದರು. ಅವರಿಗೆ ಕಲ್ಯಾಣ ರಾಜ್ಯದಿಂದ ಗಡಿಪಾರು ಆಜ್ಞೆ, ಮರುದಿನವೇ ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆ ನೀಡಿಸಿದರು. ಕಲ್ಯಾಣದಲ್ಲಿ ಕುತಂತ್ರಿಗಳ ಕಾರಸ್ಥಾನದಿಂದ ರಾಜ ಬಿಜ್ಜಳನ ಹತ್ಯೆಯಾಯಿತು. ಇದರ ಅಪವಾದ ಶರಣರ ಮೇಲೆ ಬಂದು, ಎಲ್ಲೆಡೆ ರಕ್ತ-ಕ್ರಾಂತಿ ನಡೆಯಿತು. ರಾಜ ಬಿಜ್ಜಳನ ಮಗ ಸೋವಿದೇವ ಅಧಿಕಾರ ಕೈಗೆತ್ತಿಕೊಂಡು, ಪಟ್ಟಭದ್ರರ ಕೈಗೊಂಬೆಯಾಗಿ, ಶರಣರ ಕ್ರಾಂತಿಯನ್ನು ಹತ್ತಿಕ್ಕಲು ಸೈನ್ಯಕ್ಕೆ ಆದೇಶ ಮಾಡಿದನು.

ಅಮೂಲ್ಯವಾದ 'ವಚನ ತಾಡೋಲೆ'ಗಳ ಸಂರಕ್ಷಣೆ ಹಾಗೂ ಶರಣ ಸಂಕುಳದ ರಕ್ಷಣೆಯ ಜವಾಬ್ದಾರಿ ಅಕ್ಕವಾಗಮ್ಮ, ಗಂಗಾಂಬಿಕೆ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯಾ, ಕಿನ್ನರಿ ಬ್ರಹ್ಮಯ್ಯ, ಅಂಬಿಗ ಚೌಡಯ್ಯ, ನುಲಿಯ ಚಂದಯ್ಯ ಮುಂತಾದ ಶರಣರ ಮೇಲೆ ಬಿತ್ತು. ಬಸವಾದಿ ಶರಣರ ವಚನ-ತಾಡೋಲೆ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ಸೈನ್ಯದೊಂದಿಗೆ ಹೋರಾಡುತ್ತಾ ಶರಣರ ಒಂದು ದೊಡ್ಡ ಸಮೂಹ ಪಶ್ಚಿಮ ಘಟ್ಟಗಳ ಘೋರಾರಣ್ಯದ ಕಡೆ ನಡೆಯಿತು. ಕಲ್ಯಾಣದಿಂದ ತರ್ದವಾಡು ಪ್ರಾಂತದ ಮೂಲಕ ಗೊಡಚಿ, ಮುರಗೋಡ, ಕಾದರವಳ್ಳಿ, ತಿಗಡಿ ಲಿಂಗನಮಠ ಮೂಲಕ ಉಳವಿಯ ಘೋರಾರಣ್ಯ ಪ್ರವೇಶಿಸಿದರು. ಬಸವಣ್ಣನವರು ಕೂಡಲಸಂಗಮದಲ್ಲಿ; ಅಪ್ಪಣ್ಣ, ಲಿಂಗಮ್ಮತಾಯಿ, ನೀಲಾಂಬಿಕೆಯರು ತಂಗಡಗಿಯಲ್ಲಿ; ಕಕ್ಕಯ್ಯ ಶರಣರು

ಕಕ್ಕೇರಿಯಲ್ಲಿ, ಕಲ್ಯಾಣಮ್ಮ ತಿಗಡಿಯಲ್ಲಿ, ಮಾಚಿದೇವರು ಹಿಪ್ಪರಗಿಯಲ್ಲಿ, ಗೊಲ್ಲಾಳೇಶ್ವರರು ಗೋಲಗೇರಿಯಲ್ಲಿ ಮಹಾಲಿಂಗದೊಳು ಬಯಲಾದರು ಹಾಗೂ ಚೆನ್ನಬಸವಣ್ಣನವರು ಮುಂತಾದ ಶರಣರು ಉಳವಿಯಲ್ಲಿ ಬಯಲಾದರು.

ಅಲ್ಲಮಪ್ರಭುಗಳು, ಅಕ್ಕಮಹಾದೇವಿ ಮುಂತಾದ ಶರಣರ ಒಂದು ಸಮೂಹ ಶ್ರೀಶೈಲದ ತ್ರಿಕೂಟಪರ್ವತ ಪ್ರದೇಶದತ್ತ ಹೋದರು.

೧೬. ಶ್ರೀಶೈಲ ಕದಳಿ ಬನದ ಗುಹೆಯಲ್ಲಿ ಮಹಾದೇವಿಯಕ್ಕ ಬಯಲಾದುದು :

ಅಕ್ಕಮಹಾದೇವಿ ತಾಯಿಯವರು ಹಾಗೂ ಅನುಭವ ಮಂಟಪದ ಕೆಲವು ಶರಣ-ಶರಣೆಯರು ಶ್ರೀಶೈಲ ಪ್ರಾಂತದ ತ್ರಿಕೂಟ ಪರ್ವತವನ್ನೇರಿ ಅಲ್ಲಲ್ಲಿ ಗುಹೆಗಳಲಿ ಬೀಡುಬಿಟ್ಟು, ಅಂತಿಮದಿನಗಳನ್ನು ಕಳೆದರು.

ಅಕ್ಕಮಹಾದೇವಿ ತಾಯಿಯು ಕದಳಿಯಬನದ ಪ್ರಶಾಂತ ಗವಿಯಲ್ಲಿ ಲಿಂಗಾಂಗಯೋಗದಲ್ಲಿ ಅನಿಮಿಷದೃಷ್ಟಿಯಿಂದ ತನ್ಮಯರಾದರು.

ಮೂಲಾಧಾರದ ಬೇರ ಮೆಟ್ಟಿ, ಭ್ರೂಮಂಡಲವನೇರಿದೆ
ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ
ಕೈವಿಡಿದು ಕರೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನಾ [ವ-೩೪೧]

ಎಂದು ಹಂಬಲಿಸಿದರು. ಆ ಕದಳಿಯ ವನದಲ್ಲಿ ಚೆನ್ನಮಲ್ಲಿಕಾರ್ಜನನ ದಿವ್ಯ ಬೆಳಗಿನಲ್ಲಿ ಅಡಗಿದರು.

ಕದಳಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಂಗಳು
ಕದಳಿ ಎಂಬುದು ಭವಘೋರಾರಣ್ಯ
ಈ ಕದಳಿ ಎಂಬುದ ಗೆದ್ದು, ತವೆಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆಂದು
ಕರುಣದಿ ತೆಗೆದು ಬಿಗಿದಪ್ಪಿದಡೆ
ಚೆನ್ನಮಲ್ಲಿಕಾರ್ಜನನ ಹೃದಯಕಮಲದಲ್ಲಿ
ಅಡಗಿದೆನು [ವ-೧೩೯]

ಇಷ್ಟಲಿಂಗದಲ್ಲಿ ನೋಟ, ಪ್ರಾಣಲಿಂಗದಲ್ಲಿ ಕೂಟ, ಭಾವಲಿಂಗದಲಿ ಸಮರಸವಾಗಿ ಪರಮಾನಂದದಲ್ಲಿ ತನ್ಮಯಳಾದಳು. ಆ ಸ್ಥಿತಿಯು ಅಕ್ಕನ ವಚನದಲ್ಲಿಯೇ ಕಂಡುಬರುತ್ತದೆ.

ಲಿಂಗವೆನ್ನೆ, ಲಿಂಗೈಕ್ಯವೆನ್ನೆ,
ಸಂಗವನ್ನೆ, ಸಮರಸವೆನ್ನೆ
ಆಯಿತ್ತೆನ್ನೆ, ಆಗದೆನ್ನೆ
ನೀನೆನ್ನೆ ನಾನೆನ್ನೆ
ಚೆನ್ನಮಲ್ಲಿಕಾರ್ಜುನ
ಲಿಂಗೈಕ್ಯವಾದ ಬಳಿಕ ಏನೂ ಎನ್ನೆ [ವ-೩೫೩]

ಅಕ್ಕ ಮಹಾದೇವಿಯು ಉಡುತಡಿಯಲಿ ಉದಿಸಿ, ಕಲ್ಯಾಣದ ಶರಣರ ಕಣ್ಮಣಿಯಾಗಿ ಬೆಳೆದು, ಶ್ರೀಶೈಲ ಕದಳಿವನದಲ್ಲಿ ಮಹಾಲಿಂಗದ ಮಹಾಬಯಲಿನಲಿ ಬಯಲಾದಳು.

ಮಹಾದೇವಿಯಕ್ಕಳ ಕುರಿತು ಮಹಾಜ್ಞಾನಿ ಚೆನ್ನಬಸವಣ್ಣನವರ ವಚನ ವಾಣಿಯನ್ನು ಕೇಳಿ ಆನಂದಿಸೋಣ, ಧನ್ಯರಾಗೋಣ-

ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು
ಕೂಡಲಚೆನ್ನಸಂಗಯ್ಯನ ಹೃದಯ ಕಮಲವ
ಬಗಿದು ಹೊಕ್ಕು ನಿಜಪದವನ್ನೈದಿದ
ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು [ವ-೧೨೯೮]

೧೭. ಗ್ರಂಥ ಋಣ :

೧. ಮಹಾದೇವಿಯಕ್ಕನ ವಚನಗಳು-ಸಂ.ಡಾ.ಆರ್.ಸಿ.ಹಿರೇಮಠ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ [೧೯೬೮, ೧೯೭೩]

೨. ಪ್ರಭುದೇವರ ಶೂನ್ಯ ಸಂಪಾದನೆ-ಸಂ. ಪ್ರೊ. ಸಂ. ಶಿ. ಭೂಸನೂರಮಠ (ಗುಳೂರು ಸಿದ್ಧವೀರಣ್ಣೊಡೆಯರು)
ಪ್ರ : ರಾವೂರ ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿಯ ಕಲ್ಲುಮಠ ಅಧಿಪತಿಗಳು [೧೯೫೮. ೧೯೬೫, ೧೯೮೬]

೩. ಬಸವಯುಗದ ವಚನ ಮಹಾಸಂಪುಟ-ಸಂ. ಡಾ. ಎಂ. ಎಂ. ಕಲಬುರ್ಗಿ
ಪ್ರ : ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು [೨೦೧೬]

೪. ಬಸವೇಶ್ವರರ ಸಮಕಾಲೀನರು- ಪ್ರ. ಬಸವ ಸಮಿತಿ, ಬೆಂಗಳೂರು

೫. ಶರಣ ಚರಿತಾಮೃತ-ಡಾ. ಸಿದ್ಧಯ್ಯ ಪುರಾಣಿಕ

೬. ಶಿವಶರಣೆಯರ ವಚನ ಸಂಪುಟ- ಸಂ. ಡಾ. ವೀರಣ್ಣ ರಾಜೂರ

೭. ಕನ್ನಡ ಜಾನಪದ ಗೀತೆಗಳು-ಡಾ. ಬಿ. ಎಸ್. ಗದ್ದಗಿಮಠ.

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೮೦
೯.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ವಚನ ಸಂಶೋಧನ ಪಿತಾಮಹ ಫ.ಗು. ಹಳಕಟ್ಟಿಯವರು	೧೯೮೧
೧೨.	ಬಸವಣ್ಣನವರ ಬಯ್ಗುಳಗಳು	೧೯೮೧
೧೩.	ಅಕ್ಕ ಕಂಡ ಅಣ್ಣ	೧೯೮೧
೧೪.	ಅಂಬಿಗರ ಚೌಡಯ್ಯ	೧೯೮೧
೧೫.	ಶರಣರ ಶಿವರಾತ್ರಿ	೧೯೮೨
೧೬.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೭.	ಬಸವಾದಿ ಶರಣ ವಚನಾಮೃತ (ಸಂಪಾದಿತ)	೧೯೮೩
೧೮.	ವಿಭೂತಿ ನಿರ್ಮಾಣ ವಿಧಾನ	೧೯೮೪
೧೯.	ಬಾಚಿಕಾಯಕದ ಬಸವಪ್ಪ ಕಾಳವ್ವೆ	೧೯೮೪
೨೦.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೧.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೨.	ಹಡಪದ ಅಪ್ಪಣ್ಣ ಲಿಂಗಮ್ಮ	೧೯೮೫
೨೩.	ಶ್ರೀ ಗುರುಸಿದ್ಧ ಪ್ರಭುದೇವರು	೧೯೮೫
೨೪.	ಇಷ್ಟಲಿಂಗ ಪೂಜಾ ವಿಧಾನ	೧೯೮೫
೨೫.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೬.	ಶಿವಶರಣರ ಕ್ರಾಂತಿ (ಕ.ವಿ.ವಿ. ಪ್ರಕಟಣೆ)	೧೯೮೬
೨೭.	ವಿಶ್ವಗುರು ಬಸವಣ್ಣನವರ ವಚನಗಳು (ಸಂಪಾದಿತ)	೧೯೮೬
೨೮.	ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬
೨೯.	ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು	೧೯೮೭
೩೦.	ಬಸವದರ್ಶನ (ಸಂಪಾದಿತ)	೧೯೮೭
೩೧.	ವಚನಸಾಹಿತ್ಯ : ತಾತ್ವಿಕ ವಿವೇಚನೆ	೧೯೮೭
೩೨.	ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು	೧೯೮೮
೩೩.	ಧರ್ಮಗುರು ಜಗಜ್ಯೋತಿ ಬಸವಣ್ಣನವರು	೧೯೮೮
೩೪.	ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ)	೧೯೮೯
೩೫.	ಬಸವಣ್ಣನವರು ಮತ್ತು ಜಾಗತಿಕ ಶಾಂತಿ	೧೯೮೯
೩೬.	ಬಸವಭಕ್ತ ಘನಮಠ ಶಿವಯೋಗಿಗಳು	೧೯೮೯
೩೭.	ಚೆನ್ನಬಸವಣ್ಣನವರ ವಚನಗಳು (ಸಂಪಾದಿತ)	೧೯೮೯
೩೮.	ಬಸವಭಕ್ತ ಅಥಣಿ ಶಿವಯೋಗಿಗಳು	೧೯೮೯
೩೯.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೪೦.	ಸಿದ್ಧರಾಮೇಶ್ವರ ವಚನಗಳು (ಸಂಪಾದಿತ)	೧೯೯೦

೪೧.	ಡಾ. ಜಚನಿ ಅಂದು–ಇಂದು : ಒಂದು ವಿಮರ್ಶೆ	೧೯೯೦
೪೨.	ಶ್ರೀ ಗುರುಬಸವ ಮಂಟಪ ನಡೆದು ಬಂದ ದಾರಿ	೧೯೯೧
೪೩.	ಮುರಗೋಡ ಮಹಾಂತಜ್ಜನವರು	೧೯೯೨
೪೪.	ಬಸವಕಲ್ಯಾಣ ದರ್ಶನ	೧೯೯೪
೪೫.	ಮಹಾಚೈತ್ರ (ವಿಮರ್ಶೆ)	೧೯೯೪
೪೬.	ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ)	೧೯೯೬
೪೭.	ಬಸವ ವಚನ ದೀಪ್ತಿ : ಒಂದು ವಿಮರ್ಶೆ	೧೯೯೬
೪೮.	ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ)	೧೯೯೭
೪೯.	ಕುಮಾರ ಕಕ್ಕಯ್ಯ ಪೋಳ	೧೯೯೮
೫೦.	ಬೀಳೂರು ಗುರುಬಸವ ಮಹಾಸ್ವಾಮಿಗಳು	೧೯೯೮
೫೧.	ಜೇಡರ ದಾಸಿಮಯ್ಯ ದುಗ್ಗಳೆಯರ ವಚನಗಳು (ಸಂ)	೧೯೯೮
೫೨.	ಬಸವಾದಿ ಶರಣರ ಶಿವಯೋಗದ ವಚನಗಳು (ಸಂ)	೧೯೯೯
೫೩.	ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು	೨೦೦೦
೫೪.	ಬಂಥನಾಳ ಸಂಗನಬಸವ ಶಿವಯೋಗಿಗಳು	೨೦೦೦
೫೫.	ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ	೨೦೦೧
೫೬.	ಶರಣ ಕುಮಾರ ಕಕ್ಕಯ್ಯ	೨೦೦೧
೫೭.	ಬಸವ ಬೆಳೆ	೨೦೦೨
೫೮.	ಶಿವಯೋಗಿ ವೇಮನರ ವಚನಗಳು (ಸಂ.)	೨೦೦೩
೫೯.	ಕನ್ನಡ ಕವಿಕಾವ್ಯ ಪರಂಪರೆ (ಸಂ.)	೨೦೦೪
೬೦.	ದರ್ಪಣ – ಸ್ಮರಣ ಸಂಪುಟ (ಸಂ.)	೨೦೦೪
೬೧.	ಲಿಂಗಾಯತ ಧರ್ಮ ದರ್ಶನ	೨೦೦೫
೬೨.	ಕಾಯಕ ಸಂಜೀವನಿ (ಸಂ.)	೨೦೦೬
೬೩.	ಬಸವಣ್ಣನವರು	೨೦೦೭
೬೪.	ನೆನಹು–ಡಾ. ಕರ್ಕಿ ಹಾಗೂ ಸಣಕಲ್ಲರ ಸ್ಮರಣ ಗ್ರಂಥ (ಸಂ.)	೨೦೦೭
೬೫.	ಡಾ. ಡಿ. ಎಸ್. ಕರ್ಕಿ ಜೀವನ ಸಾಧನೆ	೨೦೦೮
೬೬.	ಬಸವ ಜ್ಯೋತಿ ಮಹಾಂತ ಶಿವಯೋಗಿಗಳು	೨೦೧೧
೬೭.	ವಿಜಯ ಮಹಾಂತ ಶಿವಯೋಗಿಗಳು	೨೦೧೨
೬೮.	ವಚನ ಶ್ರಾವಣ	೨೦೧೩
೬೯.	ಬಸವಾನುಭಾವಿ (ಸಂಪಾದಿತ)	೨೦೧೩
೭೦.	ಬಸವಾದಿ ಶಿವಶರಣರ ವಚನಗಳು (ಸಂ.)	೨೦೧೪
೭೧.	ಬಸವಯೋಗಿ ಗುರುಮಹಾಂತ ಸ್ವಾಮಿಗಳು	೨೦೧೫
೭೨.	ಮಹಾಂತ ಜೋಳಿಗೆ ಶಿಲ್ಪಿ ಮಹಾಂತ ಶಿವಯೋಗಿಗಳು	೨೦೧೫
೭೩.	ಡಾ. ಎಂ. ಎಂ. ಕಲಬುರ್ಗಿಯವರು	೨೦೧೫
೭೪.	ಶರಣ ಸಂಗಮ (ಸಂಪಾದಿತ)	೨೦೧೬
೭೫.	ಅಮೃತ ಬೆಳಸು (ಸಂಪಾದಿತ)	೨೦೧೬
೭೬.	ಧರ್ಮಪಿತ ವಿಶ್ವಗುರು ಬಸವಣ್ಣನವರು	೨೦೧೬
೭೭.	ಬಸವಾದಿ ಶರಣರ ವಚನಗಳಲ್ಲಿ ಲಿಂಗಾಯತ–ಲಿಂಗವಂತ (ಸಂ.)	೨೦೧೭
೭೮.	ಸುಜ್ಞಾನ ಸಂಪತ್ತು (ಸಂ)	೨೦೧೮
೭೯.	ಯುಗಪುರುಷ ಮಹಾಂತ ಶಿವಯೋಗಿಗಳು	೨೦೧೮
೮೦.	ಕ್ರಾಂತಿಗಂಗೋತ್ರಿ ಅಕ್ಕನಾಗಮ್ಮನವರು	೨೦೧೮
೮೧.	ವೀರ ವಿರಾಗಿಣಿ ಅಕ್ಕಮಹಾದೇವಿಯವರು	೨೦೧೮

ಪ್ರೊ. ಸಿದ್ಧಣ್ಣ ಲಂಗೋಟಿ ಅವರು ಬಸವಭೂಮಿಯಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮದ ಲಿಂಗಾಯತ ಕೃಷಿ ಕುಟುಂಬದಲ್ಲಿ ಜನಿಸಿ (೧೯೫೧). ಚಾಂದಕವಠೆ, ಕನ್ನೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿಂದಗಿಯ ಎಚ್.ಜಿ. ಹೈಸ್ಕೂಲದಲ್ಲಿ ಮಾಧ್ಯಮಿಕ ಶಿಕ್ಷಣ, ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಬಿ.ಎಸ್‌ಸಿ. ಪದವಿ ಶಿಕ್ಷಣ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ತತ್ವಜ್ಞಾನ, ಎಂ.ಎ. ಹಿಂದಿ, ಎಂ.ಎ. ಕನ್ನಡ, ಎಲ್.ಎಲ್‌ಬಿ. ಕಾನೂನು ಶಿಕ್ಷಣ, ಸಿ ವಾಯ್, ಇಡಿ ಯೋಗ ಶಿಕ್ಷಣ ಪಡೆದವರಾಗಿದ್ದಾರೆ.

ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಸಾಹಿತ್ಯ ಕೃಷಿಕೈಕೊಂಡಿದ್ದಾರೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ವಜ್ಞಾನ ಚಿಂತಕರೂ, ಬಸವತತ್ವಜ್ಞಾನದ ಅನುಭಾವಿ ಲೇಖಕರೂ ಆಗಿರುವ ಸಿದ್ಧಣ್ಣ ಲಂಗೋಟಿಯವರು ೮೧ ಕ್ಕೂ ಮಿಕ್ಕಿ ಗ್ರಂಥಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ.

ಕ್ರಿ.ಶ. ೧೯೯೦ ರಲ್ಲಿ ಹಾಗೂ ಕ್ರಿ.ಶ. ೨೦೦೦ ಇಸ್ವಿಯಲ್ಲಿ ಪಾಶ್ಚಿಮಾತ್ಯ ಹಾಗೂ ಪ್ರಪಂಚದ ಪ್ರಮುಖ ದೇಶಗಳಾದ ಇಂಗ್ಲಂಡ, ಅಮೇರಿಕಾ, ಪ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ, ಅರಬ ರಾಷ್ಟ್ರಗಳ ಪ್ರವಾಸ ಕೈಕೊಂಡು ಬಸವತತ್ವಜ್ಞಾನ ಕುರಿತು ಉಪನ್ಯಾಸ ನೀಡಿ, ಬಸವ ತತ್ವ ಪ್ರಸಾರಗೈದು ಬಂದಿದ್ದಾರೆ.

೧೯೭೭ ರಲ್ಲಿ ಬಸವತತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ ಶರಣ ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ. ೧೯೮೬ ರಲ್ಲಿ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಆಚರಿಸಿ 'ಶರಣಸಂದೇಶ'ವನ್ನು 'ಬಸವಬೆಳಗು' ಹೆಸರಿನಲ್ಲಿ ಮರುಹುಟ್ಟಿಗೆ ಕಾರಣೀಕರ್ತರಾಗಿದ್ದಾರೆ. ೧೯೯೦ ರಲ್ಲಿ ಇಂಗ್ಲೆಂಡಿನಲ್ಲಿ 'ಬಸವ ಇಂಟರನ್ಯಾಶನಲ್ ಫೌಂಡೇಶನ್' ಪ್ರಾರಂಭಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ತರಗಿಯಲ್ಲಿ ೧೯೯೭ರಲ್ಲಿ ಬಸವಕೇಂದ್ರ ಸ್ಥಾಪಿಸಿದ್ದಾರೆ. ಇಳಕಲ್ಲ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ೪೨ ವರುಷಗಳಿಂದ ಶಿವಾನುಭವ ಶಿಬಿರಗಳನ್ನು ಸಂಘಟಿಸಿದ್ದಾರೆ. 'ಜಗಜ್ಯೋತಿ ಬಸವೇಶ್ವರ' ವಚನಾಂಕಿತದಲ್ಲಿ ಸಾವಿರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿದ್ದಾರೆ.

–ಅಂಬಿಗರ ಕುಮಾರಚೌಡಯ್ಯ
ಆಧುನಿಕ ವಚನಕಾರರು